
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 01 ಜನವರಿ 02, 2005 ಬೆಲೆ ರೂ. 3.00

ಹೊಸ ವರುಷ
ನಿರೀಕ್ಷೆಗಳು ಮತ್ತು ಸವಾಲುಗಳು





ಶಂಕರಾಚಾರ್ಯರು ಕಾನೂನಿಗೆ ಅತೀತರೆ?

ಬಾಬಾಬುಡನ್‌ಗಿರಿ
ಸಂಘಪರಿವಾರದ ಹುನ್ನಾರ
ಸೌಹಾರ್ದತೆಯ ಪ್ರತಿರೋಧ




- ಬೆಸ್ಟ್ ಬೇಕರಿ : ಜಹೀರಾಗೆ ಬಿಜೆಪಿ ನೀಡಿದ ಹಣದ ಆಮಿಷ ಬಯಲು
- ಹೊಸ ಪೇಟೆಂಟ್ ಕಾಯ್ದೆ ಜನಾರೋಗ್ಯಕ್ಕೆ ಕುತ್ತು

ಅದಮ್ಯ ಚೈತನ್ಯದ ಸ್ಫೂರ್ತಿಯ ಸೆಲೆ ಎ.ಕೆ.ಜಿ.

ಭಾರತದ ರಾಜಕೀಯ ಇತಿಹಾಸದಲ್ಲಿ ತಮ್ಮ ಎಡೆಬಿಡದ ಹೋರಾಟ ಮತ್ತು ಚಳುವಳಿಗಳಿಂದ ವಿಶಿಷ್ಟ ಛಾಪನ್ನೊತ್ತಿರುವ ಕಾಂ/ ಎ.ಕೆ. ಗೋಪಾಲನ್‌ರವರಿಗೆ, ಅವರು ಜೀವಂತವಿದ್ದಿದ್ದರೆ ಇಷ್ಟರಲ್ಲೇ ನೂರು ವರ್ಷ ತುಂಬುತ್ತಿತ್ತು. ಇವರ ಸ್ಮರಣಾರ್ಥ ಈ ಕಿರುಲೇಖನ. ಎಂ.ಎ.ಬೇಬಿಯವರಿಂದ.

ಕೇರಳ ರಾಜಕೀಯ ಇತಿಹಾಸದಲ್ಲಿ ತಮ್ಮ ಎಡೆಬಿಡದ ಹೋರಾಟ ಮತ್ತು ಚಳುವಳಿಗಳಿಂದ ವಿಶಿಷ್ಟ ಛಾಪನ್ನೊತ್ತಿರುವ ಕಾಂ| ಎ.ಕೆ. ಗೋಪಾಲನ್‌ರವರಿಗೆ, ಅವರು ಜೀವಂತವಿದ್ದಿದ್ದರೆ ಇಷ್ಟರಲ್ಲೇ ನೂರು ವರ್ಷ ತುಂಬುತ್ತಿತ್ತು. ಉತ್ತರ ಮಲಬಾರ್‌ನ ಮಧ್ಯಮ ಕುಟುಂಬವೊಂದರಲ್ಲಿ ಅಕ್ಟೋಬರ್ 1, 2004 ರಲ್ಲಿ ಜನಿಸಿದ ಎ.ಕೆ.ಜಿಯವರು, ಸಮಾಜ ಸುಧಾರಣೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪೂರ್ಣ ಭಾಗಿಯಾಗಿದ್ದ ಅವರ ತಂದೆ ಮತ್ತು ಸಹೋದರರಿಂದ ಎಳೆಯ ವಯಸ್ಸಿನಲ್ಲೇ ಅದರತ್ತ ಆಕರ್ಷಿತರಾದರು. ಸಂಪೂರ್ಣ ಶಿಕ್ಷಣವನ್ನು ಪೂರ್ತಿಗೊಳಿಸಲಾಗದ ಕಾರಣ ಅವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ತಮ್ಮ ಜೀವನವನ್ನು ಆರಂಭಿಸಿದರು. ಏಳು ವರ್ಷಗಳ ಕಾಲ ಕೆಲಸ ಮಾಡಿದ ಎಕೆಜಿಯವರ ಸ್ವಭಾವ ಮತ್ತು ಆಸಕ್ತಿಗೆ ಶಿಕ್ಷಕ ವೃತ್ತಿ ಪೂರಕವಾಗಿತ್ತು. ಇದೇ ಸಮಯದಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ಆಕರ್ಷಿತರಾದ ಅವರು ವಿದೇಶಿ ವಸ್ತುಗಳ ವಿರುದ್ಧ ಸಮರ ಸಾರಿ ಖಾದಿಯನ್ನು ಪ್ರಚುರಗೊಳಿಸುವತ್ತ ಕಾಂಗ್ರೆಸ್ ಕರೆ ನೀಡಿದ ಎಲ್ಲ ಸತ್ಯಾಗ್ರಹಗಳಲ್ಲೂ ನಿರಂತರವಾಗಿ ಭಾಗಿಯಾದರು. ಕಾಂಗ್ರೆಸ್‌ನ ತೆಕ್ಕೆಯನ್ನು ವಿಸ್ತರಿಸಬೇಕೆಂದು ಸದಾ ಹಂಬಲಿಸುತ್ತಿದ್ದ ಅವರು ಗುರುವಾಯೂರು ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶ ನೀಡಬೇಕೆಂಬ ಸತ್ಯಾಗ್ರಹಕ್ಕೆ ನಾಯಕರಾಗಿ ದೃಢತೆಯಿಂದ ಸಂಪ್ರದಾಯತೆಯ ವಿರುದ್ಧ ಸೆಡ್ಡೊಡೆದು ನಿಂತು ಮೌಢ್ಯತೆ ಮತ್ತು ಅಂಧಕಾರಗಳ ಚಿಪ್ಪೊಡೆದು ಹೊರಬರಬೇಕೆಂದು ಮೇಲ್ವರ್ಗದ ಜನರಿಗೆ ಕರೆಕೊಟ್ಟು, ಸಮಾನತೆಯ ಹಕ್ಕನ್ನು ಕೆಚ್ಚೆದೆಯಿಂದ ಪಡೆಯಬೇಕೆಂದು ಹರಿಜನರಿಗೆ ಪ್ರೇರೇಪಿಸಿದರು. ಈ ಚಳುವಳಿಯಲ್ಲಿ ಉದ್ರೇಕಗೊಂಡ ಗುಂಪೊಂದು ಎಕೆಜಿಯವರನ್ನು ಹಿಗ್ಗಾ ಮುಗ್ಗಾ ಥಳಿಸಿದ್ದರಿಂದ ಪ್ರಜ್ಞೆ ತಪ್ಪಿ ಬಿದ್ದರು. ಈ ವಿಷಯ ರಾಷ್ಟ್ರವ್ಯಾಪಿ ಗಮನ ಸೆಳೆದು ವ್ಯಾಪಕ ಚರ್ಚೆ ನಡೆದು ಪ್ರಜ್ಞಾವಂತರ ಕಣ್ಣು ತೆರೆಸಿತು. ಎಚ್ಚೆತ್ತ ಆಡಳಿತ ಇಲಾಖೆಗಳು ಜಾತಿಯಾಧಾರದ ಮೇಲೆ ದೇವಸ್ಥಾನ ಪ್ರವೇಶ ನಿಷೇಧಿಸುವುದು ಕಾನೂನು ಬಾಹಿರವೆಂದು ಘೋಷಿಸಿ ಕ್ರಮ ಕೈಗೊಂಡವು. ಈ ಚಳುವಳಿಯು ಯುವಕರು, ಹರಿಜನರು, ಬುದ್ಧಿ ಜೀವಿಗಳು, ಪ್ರಜ್ಞಾವಂತ ನಾಗರೀಕರು ಎಲ್ಲರನ್ನೂ ಭಾಗಿಯಾಗಿಸಿ ಯಶಸ್ವಿಯಾಯಿತು.

ವೆಲ್ಲೂರ್ ಕಾರಾಗೃಹದಲ್ಲಿದ್ದಾಗ ಗಾಢ ಚಿಂತನೆ ಮಾಡಿದ ಅವರು ಗಾಂಧೀಜಿಯವರ ಅಹಿಂಸಾ-ಸತ್ಯಾಗ್ರಹ ಚಳುವಳಿಗಳ ಫಲಗಳ ಬಗ್ಗೆ ಭ್ರಮನಿರಸನಗೊಂಡರು. ಅಸಹಕಾರ ಚಳುವಳಿ ಏಕೆ ನಿಧಾನವಾಗಿ ಬಲಹೀನವಾಯಿತೆಂದು ತರ್ಕಿಸಿದರು. ಜನರು ಈ ಚಳುವಳಿಗಳಲ್ಲಿ ಜೈಲಿಗೆ ಹೋಗಲು ಸಿದ್ಧರಿದ್ದರು, ಎಂತಹ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಲೂ ಸಿದ್ಧರಿದ್ದರು. ಆದರೆ ಆರ್ಥಿಕವಾಗಿ ನಷ್ಟ ಅನುಭವಿಸಲು ಸಿದ್ಧರಿರಲಿಲ್ಲವಾದ್ದರಿಂದ ಈ ಚಳುವಳಿ ವಿಫಲವಾಯಿತು. ಇದನ್ನು ಬಲ್ಲ ಸರ್ಕಾರ ಚಳುವಳಿನಿರತರ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಆದರೆ ಭಾರತದ ಬಹುಸಂಖ್ಯಾತ ಜನರ ಹತ್ತಿರ ಕಳೆದುಕೊಳ್ಳಲು ನಯಾ ಪೈಸೆಯೂ ಇರಲಿಲ್ಲ. ಇಂತಹ ಬಹುಸಂಖ್ಯಾತ ಜನರು ಈ ಚಳುವಳಿಯ ಮುಂಚೂಣಿಯಲ್ಲಿದ್ದಾಗ ಮಾತ್ರ ಚಳುವಳಿ ಸಫಲವಾಗಲು ಸಾಧ್ಯ. ಯಾವ ವರ್ಗ





ಪಾರ್ಲಿಮೆಂ[illegible] ಕಾಂ. [illegible].ಕೆ.ಜಿ[illegible]ವರ [illegible]ಗೊಂಡ ಸಂದರ್ಭ

ತನ್ನ ಆಶೋತ್ತರ ಮತ್ತು ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳಲು ತನ್ನದೆಲ್ಲವನ್ನೂ ಧಾರೆಯೆರೆಯಲು ಸಿದ್ಧವಿರುತ್ತದೋ ಆ ವರ್ಗ ಮಾತ್ರ ತನ್ನ ಗುರಿ ಸಾಧಿಸಬಲ್ಲದು. ಭಾರತದ ಬಹುಸಂಖ್ಯಾತ ಜನರಿಗೆ ತಮ್ಮ ದೇಹ ಮಾತ್ರವೇ ಆಸ್ತಿಯಾದ್ದರಿಂದ ಅವರು ಎಂತಹ ತ್ಯಾಗ ಬಲಿದಾನಗಳಿಗೂ ಸಿದ್ಧರಿರುತ್ತಾರೆ. ಈ ಜನರು ತಮ್ಮ ದೈನಂದಿನ ಜೀವನದಲ್ಲಿ ಪಡುವ ಕಷ್ಟ ಕೋಟಲೆಗಳಲ್ಲಿ ಕನಿಷ್ಟ ಶೇ. ಒಂದರಷ್ಟು ಕಷ್ಟವನ್ನೂ ಸ್ವಾತಂತ್ರ್ಯ ಹೋರಾಟದಲ್ಲಿ ಪಡುವುದಿಲ್ಲ. ಅತಿ ಹತ್ತಿರದಿಂದ ಬಡ ರೈತರ ಕಷ್ಟಗಳನ್ನು ಅರಿತ ಎಕೆಜಿಯವರು 'ತನ್ನ ಬಳಿ ಕಳೆದುಕೊಳ್ಳಲೂ ಏನೇನೂ ಇಲ್ಲವೋ, ಅಂತಹ ಜನರ ಬಳಿ ಮಾತ್ರ ಸ್ವಾತಂತ್ರ್ಯಕ್ಕಾಗಿ ಅಗತ್ಯವಿರುವ ಶಕ್ತಿ, ಸ್ಫೂರ್ತಿ ಮತ್ತು ಕೆಚ್ಚೆದೆಯ ಹೋರಾಟದಿಂದ ಯಾವ ವಿರೋಧವನ್ನೇ ಎದುರಿಸಲು ಸಮರ್ಥರಿರುತ್ತಾರೆ' ಎಂದು ಅರ್ಥೈಸಿದರು.

ಕೈಗಾರಿಕಾ ಕಾರ್ಮಿಕರತ್ತ ಗಮನ ಹರಿಸಿ, ಅವರ ನಡುವೆ ಸಂಘಟನೆಗಳನ್ನು ರೂಪಿಸಿ ಬೇಡಿಕೆಗಳ ಈಡೇರಿಕೆಗಾಗಿ ಬಂದ್‌ಗಳು, ಪಿಕೆಟಿಂಗ್, ಚಳುಗಳಿಗಳನ್ನು ಮುನ್ನಡೆಸಿದರು. ದುಡಿಯುವ ವರ್ಗದ ಜನರೊಂದಿಗೆ ಒಂದಾಗಿ ಕಲೆತುಹೋಗಲು ಅವರ ಭಾಷೆಯಲ್ಲೇ, ಅವರ ದನಿಯಲ್ಲೇ ಮಾತನಾಡಿದರು, ಕಷ್ಟಗಳನ್ನು ಹಂಚಿಕೊಂಡರು, ಅವರ ಮಕ್ಕಳೊಡನೆ ಆಟವಾಡಿದರು, ಚಿಕ್ಕ ಹುಡುಗರಿಗೆ ಕಥೆ ಹೇಳಿದರು. ಹತ್ತಿ, ತೆಂಗಿನ ನಾರು, ಬೀಡಿ, ಹೆಂಚು, ಸಾಬೂನು, ಪುರಸಭೆ ನೌಕರರು - ಈ ಎಲ್ಲ ಕಡೆ ಸಮಾಜವಾದಿಗಳು ಸಂಘಟನೆ ಮತ್ತು ಹೋರಾಟ ನಡೆಸುತ್ತಿದ್ದರು ಮತ್ತು ಯಾವೊಂದು ಕಡೆಯೂ ಎಕೆಜಿಯವರು ಭಾಗವಹಿಸದಿದ್ದ ಸಂಘಟನೆ ಇರಲಿಲ್ಲ. ಅವರೇ ಹೇಳುವಂತೆ 'ಎಲ್ಲಿಯಾದರೂ ಧರಣಿ ಆರಂಭವಾಗಿದೆ ಎಂದು ತಿಳಿದರೆ ಸಾಕು, ನಾನಲ್ಲಿಗೆ ಓಡುತ್ತಿದ್ದೆ. ಆ ಧರಣಿ ಮುಗಿದಾಕ್ಷಣ ಮತ್ತೊಂದಕ್ಕೆ ಹೋಗುತ್ತಿದ್ದೆ. ಧರಣಿಗೆ ನಿಧಿ ಸಂಗ್ರಹಿಸುವುದು, ಸೇವಾಕರ್ತರನ್ನು ಸೇರಿಸುವುದು, ಅವರ ಕೆಲಸದ ವಿವರ ನೀಡುವುದು, ಅನುಸರಣೆ ಮಾಡುವುದು, ಸಾರ್ವಜನಿಕ ಸಭೆಯಲ್ಲಿ ಮಾತನಾಡುವುದು, ಕೆಲಸಕ್ಕೆ ಹಾಜರಾಗುವವರಲ್ಲಿ ಮಧ್ಯೆ ಪ್ರವೇಶಿಸುವುದು, ಅವರೊಡನೆ ತರ್ಕಿಸುವುದು, ಸ್ಥಳೀಯ ಜನರನ್ನು ಸಂಪರ್ಕಿಸುವುದು, ಧರಣಿಗಾಗಿ ಅವರ ಸಹಾಯ ಪಡೆಯುವುದು - ಇವೆಲ್ಲ ಕೆಲಸಗಳನ್ನು ನಾನು ಮಾಡುತ್ತಿದ್ದೆ'.

ಹಸಿವು ಮತ್ತು ನಿರುದ್ಯೋಗದ ವಿರುದ್ಧ ಅವರು ಸಂಘಟಿಸಿದ ಜನ ಚಳುವಳಿಗಳು, ಜಾಥಾಗಳು ಕೇರಳಾದ್ಯಂತ ಪಸರಿಸಿ ಕೇರಳದ ದುಡಿಯುವ ಜನರನ್ನು ತಮ್ಮ ಮಡಿಲಿಗೆ ಹಾಕಿಕೊಂಡವು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಎಕೆಜಿಯವರು ಸೇರಿದಂತೆ ಹಲವರನ್ನು ಸೆರೆಮನೆಯಲ್ಲಿಡಲಾಯಿತು. ದೇಶಾದ್ಯಂತ ಚರ್ಚೆಗಳು, ವಿಚಾರ ವಿನಿಮಯ ನಡೆಯುತ್ತಿದ್ದು ಭಾರತ ಸ್ವಾತಂತ್ರ ಸಂಗ್ರಾಮದ ನಿರ್ಣಾಯಕ ಹಂತ. ಸೆಪ್ಟೆಂಬರ್ 25, 1941ರ ರಾತ್ರಿ ಗೋಡೆಯಲ್ಲಿ ರಂಧ್ರ ಮಾಡಿ ಕೆಲವರೊಡಗೂಡಿ ಜೈಲಿನಿಂದ ತಪ್ಪಿಸಿಕೊಂಡರು. ಹೊರಗೆ ಅಡ್ಡಾಡುವುದು ಅಪಾಯಕಾರಿಯಾಗಿತ್ತಾದರೂ, ಕೇರಳ ಸೇರುವಲ್ಲಿ ಯಶಸ್ವಿಯಾದರು.

ಯುದ್ಧಾನಂತರ ಪೂನಪ್ರವಯಲಾರ್ ಹೋರಾಟ, ಬೀಡಿ ಕಾರ್ಮಿಕರ ಬಂದ್, ಚೀರಕ್ಕಲ್‌ನ ರೈತರ ದಂಗೆ, ಈ ಎಲ್ಲ ಹೋರಾಟಗಳಲ್ಲಿ ಕ್ರಿಯಾಶೀಲರಾಗಿದ್ದ ಎಕೆಜಿಯವರನ್ನು ಹಲವಾರು ಬಾರಿ ಸೆರೆಮನೆಗೆ ಕಳುಹಿಸಲಾಯಿತು. ಆಗಸ್ಟ್ 14,1947ರ ರಾತ್ರಿ ಸೆರೆಮನೆಯ ಗೋಡೆಗಳಿಂದೆಲ್ಲ ದೇಶದ ಬೀದಿ ಬೀದಿಗಳಲ್ಲಿ ಪರಿಸುತ್ತಿದ್ದ ಸ್ವಾತಂತ್ರ್ಯೋತ್ಸವದ ಉದ್ಘೋಷಗಳು ಪ್ರತಿಧ್ವನಿಸುತ್ತಿದ್ದರೆ, ಸ್ವಾತಂತ್ರ್ಯಕ್ಕಾಗಿ ತನ್ನೆಲ್ಲ ಶಕ್ತಿಯನ್ನು ಧಾರೆಯೆರೆದು ವೀರೋಚಿತ ಹೋರಾಟಗಳನ್ನು ರೂಪಿಸಿದ್ದ ಧೀರೋದಾತ್ತ ಚಳುವಳಿಗಳನ್ನು ಮುನ್ನಡೆಸಿದದ ಸ್ಫೋಟಕ ಶಕ್ತಿಯ ಮಹಾನ್ ನಾಯಕ ಎಕೆಜಿಯವರು ಜೈಲಿನಲ್ಲಿ ಬಂಧಿಯಾಗಿಯೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದ್ದು ಭಾರತೀಯ ಜನತೆಗೆ ಸಿಕ್ಕಂತಹ ಸ್ವಾತಂತ್ರ್ಯದ ದ್ಯೋತಕವೇ ಸರಿ. ಸ್ವತಂತ್ರ ಭಾರತದಲ್ಲೂ ಸಹ ಹಲವು ಬಾರಿ ಎಕೆಜಿಯವರು ಜೈಲಿಗೆ ಹೋಗಿದ್ದು ತುಳಿತಕ್ಕೊಳಗಾದ ಜನರ ಬಗ್ಗೆ ಅವರೆಂದೂ ರಾಜಿಯಾಗದ ಸ್ವಭಾವ ಹೊಂದಿದದ್ದೇ ಆಗಿದೆ.

ಹಲವು ಉನ್ನತ ಹುದ್ದೆ ಮತ್ತು ಸ್ಥಾನಗಳನ್ನು ಪಡೆದು ಸುಖ ಭೋಗದ ಜೀವನವನ್ನು ನಡೆಸಬಹುದಿದ್ದರೂ, ಭಾರತೀಯ ಜನತೆಯ ಜೀವನಾಭಿವೃದ್ಧಿಗಾಗಿ ದುಸ್ತರವಾದ ಹಾದಿಯಲ್ಲಿ ನಡೆದು ನಿರಂತರ ಹೋರಾಟಗಳನ್ನು ರೂಪಿಸಿ ಹೋರಾಡುವ ವಿಶಿಷ್ಟ ವ್ಯಕ್ತಿತ್ವ ಅವರಲ್ಲಿತ್ತು. ರಾಜಕೀಯ ಸ್ವಾತಂತ್ರ್ಯ ಲಭಿಸಿದ್ದು ಒಂದು ಸಾಧನೆಯೇ ಆದರೂ, ಅಸಮಾನತೆಯ ಕಿತ್ತೆಸೆತಕ್ಕಾಗಿ ಆರ್ಥಿಕ ಸ್ವಾತಂತ್ರ್ಯದ ಅತ್ಯಗತ್ಯವಿದ್ದು ಅದಕ್ಕಾಗಿ ಸಮಾಜವಾದದ ನಿರ್ಮಾಣ ಹಿಂದೆಂದಿಗಿಂತಲೂ ಈಗ ಪ್ರಸ್ತುತವಾಗಿದೆ ಎಂದರು. ಇಂದಿರಾ ಗಾಂಧಿಯ ತುರ್ತು ಪರಿಸ್ಥಿತಿ ಜಾರಿ ವಿರುದ್ಧ ಬಂಡವಾಳಶಾಹಿ ವಿರುದ್ಧ ಸಮರ ಸಾರಿದ ವೀರ ಸೇನಾನಿ ಎಕೆಜಿಯವರ ಜೀವನದ ಪ್ರತಿಯೊಂದು ಪುಟಗಳು ಅವರು ನಡೆಸಿದ ಹೋರಾಟಗಳು ನಿರಂತರ ಹರಿಯುವ ನದಿಯಂತೆ, ಇಂದಿನ ಜನಾಂಗಕ್ಕೆ ಎಂದಿಗೂ ಬತ್ತದ ಸ್ಫೂರ್ತಿಯ ಬುಗ್ಗೆಗಳಂತೆ, ಧೈರ್ಯ ಮತ್ತು ಕೆಚ್ಚೆದೆಗಳ ಮಹಾನ್ ಶಕ್ತಿಯ ಹುರುಪನ್ನು ನೀಡುತ್ತವೆ.

ಆತ್ಮವಿಶ್ವಾಸ, ತ್ಯಾಗ ಮತ್ತು ಬಲಿದಾನಗಳ ಮೂರ್ತಿಯಾಗಿದ್ದ, ಆಳುವ ವರ್ಗಗಳಿಗೆ ಸಿಂಹಸ್ವಪ್ನವಾಗುವಂತಹ ಜನ ಚಳುವಳಿಗಳ ಭಾಗವಾಗಿದ್ದ, ಸಮಾಜವಾದಿ ಕನಸುಗಳನ್ನು ಸಾಕಾರ ಮಾಡುವ ಪ್ರತಿಮೆಯಂತಿದ್ದ ಎಕೆಜಿ ತಮ್ಮ ನಿರಂತರ ಎಡೆಬಿಡದ ಹೋರಾಟಗಳಿಂದಾಗಿ ಆರೋಗ್ಯದ ಕಡೆ ಗಮನ ಹರಿಸಲಾಗದೆ ಸಾವು ಬಹುಬೇಗನೆ ಅವರನ್ನು ಅಪ್ಪಿತು.

ಬ್ರಿಟಿಷ್ ಇತಿಹಾಸಕಾರರೊಬ್ಬರು ಟಿಪ್ಪುವಿನ ಬ್ರಿಟಿಷ್‌ರ ವಿರುದ್ಧದ ಯುದ್ಧಾಕ್ರಮಣಗಳ ವಿರುದ್ಧ ಈ ರೀತಿ ವ್ಯಾಖ್ಯಾನಿಸಿದದಾರೆ : 'ಟಿಪ್ಪುವಿನ ಕುದುರೆಗಳಿಗೆ ರೆಕ್ಕೆಗಳನ್ನು ಕಟ್ಟಲಾಗಿತ್ತೇನೋ ಎಂಬಂತೆ ಬ್ರಿಟಿಷ್ ಸೇನೆ ಕೊನೆ ಕ್ಷಣದಲ್ಲಿ ದಿಕ್ಕು ಬದಲಾಯಿಸಿದರೂ ಬೆಚ್ಚಿ ಬೀಳಿಸುವಂತೆ ಪ್ರತ್ಯಕ್ಷವಾಗಿ ಬ್ರಿಟಿಷ್ ಸೈನಿಕರ ಜಂಘಾಬಲವೇ ಹುಡುಗಿ ಹೋಗುತ್ತಿತ್ತು. ಟಿಪ್ಪುವಿನ ಹೆಸರೆತ್ತಿದರೆ ಸಾಕು ಲಂಡನ್ ಬೀದಿಗಳಲ್ಲೂ ಭಯದ ವಾತಾವರಣ ಕಪ್ಪಗಿನ ಮೋಡದಂತೆ ಆವರಿಸುತ್ತಿತ್ತು'.

ಟಿಪ್ಪುವಿನ ದಾಳಿ ಅಷ್ಟರ ಮಟ್ಟಿಗೆ ಖ್ಯಾತಿ ಹೊಂದಿತ್ತಾದರೂ, ಅದನ್ನು ನಾವು ಓದಿಯಷ್ಟೇ ಬಲ್ಲೆವು. ಎಕೆಜಿಯವರು ಮಾತ್ರ ತಮ್ಮ ಜೀವಿತಾವಧಿಯುದ್ದಕ್ಕೂ ಕೇರಳದಲ್ಲಿ ನಡೆದ ಪ್ರತಿಯೊಂದು ಪ್ರಗತಿಪರ ಹೋರಾಟಗಳ ಭಾಗವಾಗಿದ್ದರು. ಅವರು ಇತರೆ ಸಮಾಜವಾದಿ ನಾಯಕರುಗಳೊಡನೆ ಒಗ್ಗೂಡಿ ನಡೆಸಿದ ಪ್ರಯತ್ನಗಳ ಫಲ ಕೇರಳ ರಾಜ್ಯ ಸಾಧಿಸಿರುವ ಸಾಕ್ಷರತಾ ಪ್ರಮಾಣ, ಮಹಿಳಾ : ಪುರುಷರ ಪ್ರಮಾಣ, ಆರೋಗ್ಯ ಸೂಚಿ, ಮತ್ತು ಇತರೆ ಮಾನವ ಅಭಿವೃದ್ಧಿ ಸೂಚಿಯಲ್ಲಿ ನಿರಂತರವಾಗಿ ಪ್ರತಿಫಲನಗೊಳ್ಳುತ್ತಿದೆ. ಅವರ ತ್ಯಾಗ, ಆದರ್ಶಮಯ ಜೀವನ, ನಾಯಕತ್ವ ಗುಣಗಳು ನಮ್ಮ ಪೀಳಿಗೆಗೆ ದಾರಿದೀಪವಾಗಿದೆ.

- ಜಯ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಸಿಪಿಐ(ಎಂ) ಸಮ್ಮೇಳನಗಳು

- **ಡಿಸೆಂಬರ್ 31,2004ರಿಂದ ಜನವರಿ 2-2005**
  ಸಮುದಾಯ, ಹುಬ್ಬಳ್ಳಿ -ಧಾರವಾಡದ ಬೆಳ್ಳಿಹಬ್ಬದ ಪ್ರಯುಕ್ತ, ಶಾಂತಿ ಹಾಗೂ ಸೌಹಾರ್ದತೆಗಾಗಿ, ಸಫ್ದರ ರಶ್ಮಿ ಹಾಗೂ ಸಿ.ಆರ್.ಭಟ್ ಸ್ಮರಣಾರ್ಥ ಬೀದಿ ನಾಟಕೋತ್ಸವ.
- **ಜನವರಿ 2-3, 2005**
  ಕೊಡಗು ಜಿಲ್ಲಾ ಸಿಪಿಐ(ಎಂ)ಸಮ್ಮೇಳನ
- **ಜನವರಿ, 2-3,2005**
  ಮೈಸೂರು ಸಿಪಿಐ(ಎಂ)ಜಿಲ್ಲಾ ಸಮ್ಮೇಳನ
- **ಜನವರಿ 2, 2005**
  ಎ.ಕೆ.ಜಿ ಮತ್ತು ಬಿಟಿಆರ್ ಅವರ ಜನ್ಮ ದಿನೋತ್ಸವದ ಅಂಗವಾಗಿ ವಿಚಾರ ಸಂಕಿರಣ. ಎನ್.ಜಿ.ಓ ಹಾಲ್ ಕಬ್ಬನ್‌ಪಾರ್ಕ್, ಬೆಂಗಳೂರು
- **ಜನವರಿ 2, 2005**
  ದೇಶದಾದ್ಯಂತ ಬೀಡಿ ಕಾರ್ಮಿಕರ ಬೇಡಿಕೆ ದಿನ.
- **ಜನವರಿ 3-5, 2004**
  ರಾಯಚೂರು ಸಿಪಿಐ(ಎಂ)ಜಿಲ್ಲಾ ಸಮ್ಮೇಳನ
  ದೇವದುರ್ಗದಲ್ಲಿ
- **ಜನವರಿ 7-9, 2005**
  ಗುಲ್ಬರ್ಗ ಸಿಪಿಐ(ಎಂ)ಜಿಲ್ಲಾ ಸಮ್ಮೇಳನ
- **ಜನವರಿ 10, 2005**
  ಸಿಐಟಿ ಬಿಕ್ಕಟ್ಟು- ಕೇಂದ್ರಿಯ ಶಾಸನಕ್ಕೆ ಆಗ್ರಹಿಸಿ ಬೃಹತ್ ರ್‍ಯಾಲಿ ಬೆಂಗಳೂರು

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಬಾಬಾಬುಡನ್‌ಗಿರಿ: ಸಂಘಪರಿವಾರದ ಹುನ್ನಾರಗಳ ವಿರುದ್ಧ ಸೌಹಾರ್ದ ಪ್ರತಿರೋಧ

ಚಿಕ್ಕಮಂಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿ ನೂರಾರು ವರ್ಷಗಳಿಂದ ಕೋಮುಸಾಮರಸ್ಯ ಏಕತೆಯ ಶ್ರದ್ಧಾಕೇಂದ್ರವಾಗಿ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ. ಹಿಂದೆಂದೂ ಇರದ ಆಚರಣೆ-ಸಂಪ್ರದಾಯಗಳನ್ನು ಕಾನೂನುಬಾಹಿರವಾಗಿ ಆಚರಿಸುತ್ತಾ ಹಾಗೂ ಸರ್ಕಾರವನ್ನೂ ಅನುಸರಿಸಲು ಆಗ್ರಹಿಸುತ್ತಾ ಕೋಮುವಾದಿ ಶಕ್ತಿಗಳು ಶಾಂತಿ ಕದಡುವ ಕಾರ್ಯದಲ್ಲಿ ನಿರತವಾಗಿವೆ. ಸೂಫಿ ಸಂತರ ನೆಲೆಯಾದ ಬಾಬಾಬುಡನ್‌ಸ್ವಾಮಿದತ್ತ ಪೀಠದ ದರ್ಗಾದ ಸೌಹಾರ್ದತೆಯ ಪರಂಪರೆಯನ್ನು ಹಾಳುಗೆಡವಿ ಇಲ್ಲದ ವಿವಾದವನ್ನು ಸೃಷ್ಟಿಸಿ-ರಾಜ್ಯಾದ್ಯಂತ ಕೋಮು ಗಲಭೆಗಳನ್ನು ಸೃಷ್ಟಿಸುವ ದುಷ್ಟ ಯತ್ನವನ್ನು ನಡೆಸಿವೆ.

ರಾಜ್ಯಾದ್ಯಂತ ಜಾತ್ಯಾತೀತ- ಪ್ರಗತಿಪರ ಶಕ್ತಿಗಳು ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ 1975'ರ ಹಿಂದೆ ಆಚರಿಸಿಕೊಂಡು ಬಂದಿದ್ದ ಆಚರಣೆಗಳಿಗಷ್ಟೇ ಅವಕಾಶ ಕಲ್ಪಿಸಬೇಕೆಂದು ಒತ್ತಾಯಪಡಿಸುತ್ತಾ ಸೌಹಾರ್ದತಾ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ಬಂದಿದ್ದಾರೆ. ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಧಾರ್ಮಿಕ ದತ್ತಿ ಆಯುಕ್ತರು ಪಟ್ಟಿ ಮಾಡಿರುವ ಆಚರಣೆಗಳಿಗಷ್ಟೆ ಅವಕಾಶ ಕಲ್ಪಿಸಬೇಕೆಂದು, ಅಸತ್ಯ-ಗೊಂದಲವನ್ನು ಹಬ್ಬಿಸುವ ಕೋಮು ಪ್ರಚೋದಕರ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕೆಂದು, ಆ ಮೂಲಕ ಬಾಬಾಬುಡನ್‌ಗಿರಿ ಸೌಹಾರ್ದ ಪರಂಪರೆ ರಕ್ಷಿಬೇಕೆಂದು ಒತ್ತಾಯಿಸುತ್ತಾ, ಏಕತೆಗಾಗಿ ನಾವು-ನೀವು ಎಂಬ ವೇದಿಕೆಯಡಿ "ದ್ವೇಷಬಿಟ್ಟು, ದೇಶಕಟ್ಟು" ಎಂಬ ಕಾರ್ಯಕ್ರಮವನ್ನು ಆಯೋಜಿಸಲು ಡಿವೈಎಫ್‌ಐ-ಎಸ್.ಎಫ್.ಐ ಸಂಘಟನೆಗಳು ನಿರ್ಧರಿಸಿದವು. ಈ ಕಾರ್ಯಕ್ರಮವನ್ನು ಸಂಘಟಿಸುವ ಮುನ್ನ ಸಾಹಿತಿಗಳಾದ ಪ್ರೊ.ಬರಗೂರು ರಾಮಚಂದ್ರಪ್ಪ, ಪ್ರೊ.ಜಿ.ಕೆ.ಗೋವಿಂದ ರಾವ್, ಡಾ.ಕೆ.ಮರುಳಸಿದ್ದಪ್ಪ ಮೊದಲಾದವರನ್ನು ಸಂಪರ್ಕಿಸಿ ಹಲವು ಸಲಹೆಗಳನ್ನು ಪಡೆದು ಡಿಸೆಂಬರ್-13 ರ ಸಂಜೆ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಸಾಮೂಹಿಕ ಸಂಘಟನೆಗಳ ಮುಖಂಡರು ಅಲ್ಪಸಂಖ್ಯಾತ ಮುಖಂಡರ ಸಭೆಯನ್ನು ನಡೆಸಿ ಕೊನೆಯಲ್ಲಿ ಡಿಸೆಂಬರ್-23 ರಂದು 'ಬೆಂಗಳೂರಿನಲ್ಲಿ ಸೌಹಾರ್ದತಾ ಕಾರ್ಯಕ್ರಮಗಳನ್ನು ಆಯೋಜಿಸ ಲಾಯಿತು.

ವ್ಯಾಪಕ ಪ್ರಚಾರ: SFI-DYFI ಮುತುವರ್ಜಿವಹಿಸಿ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಸುಮಾರು 12 ಸಾವಿರ ಕರಪತ್ರ ಮತ್ತು ಕೆ.ಪಿ.ಆರ್.ಎಸ್ ಬೆಂಬಲದಿಂದ 2 ಸಾವಿರ ಚಿಕ್ಕ ಭಿತ್ತಿಪತ್ರ ಮುದ್ರಿಸಿ ಬೆಂಗಳೂರಿನ ನಮ್ಮ ಸಂಘಟನೆ ಶಕ್ತಿ ಇರುವ ಕಡೆಗಳಲ್ಲಿ ಮಾತ್ರವಲ್ಲ ರವೀಂದ್ರ ಕಲಾಕ್ಷೇತ್ರ, ರಂಗಶಂಕರ್ ಹಾಗೂ ಚಿತ್ರಕಲಾ ಪರಿಷತ್‌ಗಳಲ್ಲಿ ನಡೆದ ಹಲವು ಕಾರ್ಯಕ್ರಮಗಳಲ್ಲಿ ವಿತರಿಸಲಾಯಿತು. ಶಿವಾಜಿನಗರದ ಸದ್ಭಾವನಾ ಯೂತ್ ಅಸೋಸಿಯೇಷನ್‌ನ ಯುವಕರು ಮತ್ತು ಅಲ್ಪಸಂಖ್ಯಾತ ಮುಖಂಡರು ಸಹಾ ಉರ್ದು ಹಾಗೂ ಇಂಗ್ಲಿಷ್‌ನಲ್ಲಿ ಸಾವಿರಾರು ಕರಪತ್ರ ಹಾಗೂ ಸಾವಿರಾರು ಭಿತ್ರಪತ್ರಗಳನ್ನು ಮುದ್ರಿಸಿ ವ್ಯಾಪಕ ಪ್ರಚಾರ ನಡೆಸಿದರು.

ಸೌಹಾರ್ದತೆ ಸಾರಿದ ಬೈಕ್ ರ್ಯಾಲಿ;

ಸಿ.ಐ.ಟಿ.ಯು, ಎಸ್.ಎಫ್.ಐ, ಕೆ.ಪಿ.ಆರ್.ಎಸ್ ಹಾಗೂ ಸದ್ಭಾವನಾ ಯೂತ್ ಅಸೋಸಿಯೇಷನ್ ಸುಮಾರು 80 ಜನ ಕಾರ್ಯಕರ್ತರುಗಳು ಬೆಂಗಳೂರಿನ ಮಹಾತ್ಮಾಗಾಂಧಿ ಪ್ರತಿಮೆ ಎದುರು ತಮ್ಮ-ತಮ್ಮ ಬೈಕ್‌ಗಳಿಗೆ ಬಾವುಟಗಳನ್ನು ಕಟ್ಟಿ ರ್ಯಾಲಿ ನಡೆಸಲು ಸಿದ್ಧರಾಗಿದ್ದರು. ಆದರೆ ಮಲೇಷಿಯಾದ ಪ್ರಧಾನಿ ಬೆಂಗಳೂರು ಭೇಟಿ ನಿಮಿತ್ತ 'ಬೈಕ್ ರ್ಯಾಲಿಗೆ' ಅನುಮತಿಯನ್ನು ಪೊಲೀಸರು ನಿರಾಕರಿಸಿದರು. ಆದರೆ ರ್ಯಾಲಿ ನಡೆಸಲು ಆಗಲೇ ನಿರ್ಧಾರ ಮಾಡಿಕೊಂಡೆ ಬಂದಿದ್ದರಿಂದ ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಇದಕ್ಕೆ ಅನುಮತಿ ನೀಡಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಜಿ.ಎನ್. ನಾಗರಾಜ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲಾ ಅಲ್ಪಸಂಖ್ಯಾತರ ಮುಖಂಡರಾದ ದಸ್ತಗೀರ್



ಬೆಂಗಳೂರಿನ ಟೌನ್‌ಹಾಲ್ ಎದುರು ನಡೆದ ಸೌಹಾರ್ದ ಕಾರ್ಯಕ್ರಮದಲ್ಲಿ ಜಿ.ವಿ.ಶ್ರೀರಾಮರೆಡ್ಡಿ, ಜಿ.ಎನ್.ನಾಗರಾಜ್, ಪ್ರೊ.ಮರುಳುಸಿದ್ದಪ್ಪ, ಗಿರೀಶ್ ಕಾರ್ನಾಡ್, ಡಾ.ಸಿದ್ದನಗೌಡ ಪಾಟೀಲ್ ಮತ್ತಿತರರು

ಹಾಗೂ ವಿಮಾ ನೌಕರರ ಮುಖಂಡರಾದ ಎಸ್.ಸುರೇಂದ್ರರಾವ್, ಬೆಂಗಳೂರು ಕಮಿಷನರ್ ಎಸ್.ಮರಿಸ್ವಾಮಿಯವರನ್ನು ಭೇಟಿಯಾಗಿ ಮನವರಿಕೆ ಮಾಡಿಕೊಡಲು ಸಫಲವಾದ್ದರಿಂದ 'ಬೈಕ್ ರ್ಯಾಲಿ ಅನುಮತಿಯನ್ನು ನೀಡಲೇಬೇಕಾಯಿತು.

ಅಷ್ಟೊತ್ತಿಗಾಗಲೇ ಕವಿ ಮತ್ತು ಬರಹಗಾರ ಆರ್.ಜಿ.ಹಳ್ಳಿ ನಾಗರಾಜ್, ಬೈಕ್ ರ್ಯಾಲಿಯನ್ನು ಮಹಾತ್ಮಾಗಾಂಧಿ ಪ್ರತಿಮೆ ಎದುರು ಉದ್ಘಾಟಿಸಿ ಮಾತನಾಡುತ್ತಾ, ಬಾಬಾಬುಡನ್ ಗಿರಿಯಲ್ಲಿ ಕೋಮು ಉನ್ಮಾದವನ್ನು ಸೃಷ್ಟಿಸುತ್ತಿರುವ 'ಸಂಘಪರಿವಾರವನ್ನು' ಮೊದಲು ತಡೆಗಟ್ಟುವ ಧೈರ್ಯವನ್ನು ಪೊಲೀಸರು ಮಾಡಲಿ ಅದನ್ನು ಬಿಟ್ಟು ಸೌಹಾರ್ದತೆ ಸಾರಲು ಹೊರಟಿರುವ ನಮ್ಮನ್ನಲ್ಲಾ ಎಂದು ಕಿವಿಮಾತು ಹೇಳಿದರು. ಸೌಹಾರ್ದತೆಯ ತಾಣ ಬಾಬಾಬುಡನ್‌ಗಿರಿಯನ್ನು 'ಗುಜರಾತ್'ನ್ನು ಮಾಡಲು ಹೊರಟಿರುವ ಬಿಜೆಪಿ ಮತ್ತು ಭಜರಂಗದಳಗಳ ಈ ಹುನ್ನಾರಗಳನ್ನು ರಾಜ್ಯದ ಶಾಂತಿಪ್ರಿಯ ಜನತೆ ತಡೆಗಟ್ಟೇ ತೀರುತ್ತದೆ ಎಂದು ಹೇಳಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಕಾಂ.ಜಿ.ಎನ್. ನಾಗರಾಜ್ ಹಾಜರಿದ್ದರು.

ನಂತರ ಅಲ್ಲಿ ಹೊರಟ ಬೈಕ್ ಜಾಥಾವನ್ನು 'ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಎಸ್.ಲಕ್ಷ್ಮಿ ಹಾಗೂ ಪ್ರಸಾದ್ ನೇತೃತ್ವದಲ್ಲಿ ಎಸ್‌ಎಫ್‌ಐ ಕಾರ್ಯಕರ್ತರು ಪುಷ್ಪಧಾರೆ ಮತ್ತು ಹಣ್ಣು ವಿತರಣೆ ಮೂಲಕ ಸ್ವಾಗತಿಸಿ ಬೀಳ್ಕೊಟ್ಟರು. ಅನಂತರ ಶ್ರೀರಾಮಪುರದ ಬಂಡಿರೆಡ್ಡಿವೃತ್ತದಲ್ಲಿ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಧನರಾಜ್, ಡಿವೈಎಫ್‌ಐ ಮುಖಂಡರಾದ ನಾಗೇಶ್, ಚಂದ್ರಕಾಂತ, ವೆಂಕಟೇಶ್ ನೇತೃಥ್ವದಲ್ಲಿ ಡಿವೈಎಫ್‌ಐ ಕಾರ್ಯಕರ್ತರು ಬೈಕ್ ಜಾಥಾವನ್ನು ಸ್ವಾಗತಿಸಿದರು. ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಜಾಥಾದ ಉದ್ದೇಶವನ್ನು ವಿವರಿಸಿದರು. ಯಶವಂತಪುರ ಮಾರ್ಕೆಟ್ ಪ್ರದೇಶದಲ್ಲಿ ಸಿಐಟಿಯು ನೇತೃತ್ವದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಕೆ.ಎನ್.ಉಮೇಶ್ ಮಾತನಾಡಿದರು. ಮಧ್ಯಾಹ್ನದ ನಂತರ ಶಿವಾಜಿನಗರವನ್ನು ಪ್ರವೇಶಿಸಿದಾಗ, 2 ಕಡೆಗಳಲ್ಲಿ ಅಲ್ಪಸಂಖ್ಯಾತ ಮುಖಂಡರಿಂದ ಹಾಗೂ ಸದ್ಭಾವನಾ ಯೂತ್ ಅಸೋಷಿಯೇಷನ್ ಯುವಕರಿಂದ ಜಾಥಾದಲ್ಲಿ ಭಾಗವಹಿಸಿದ್ದ ಮುಖಂಡರುಗಳಿಗೆ ಹೂಮಾಲೆ ಹಾಗೂ ಸಿಹಿಪಾನೀಯ ನೀಡುವ ಮೂಲಕ ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಜೆಡಿ(ಎಸ್) ಮುಖಂಡ ಮಹ್ಮದ್ ಬೊರೇಸಿ ಹಾಗೂ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಮಾತನಾಡಿದರು. ನಂತರ ವರ್ತೂರು ಕ್ಷೇತ್ರದ ವಿಜನಾಪುರ ಪ್ರದೇಶದಲ್ಲಿ ಸಿಐಟಿಯು ಮುಖಂಡರಾದ ಗೋಪಾಲಗೌಡ,



ಸಿಪಿಐ(ಎಂ) ಕಾರ್ಯದರ್ಶಿ ರಾಮಚಂದ್ರ ಹಾಗೂ ಜೆ.ಎಂ.ಎಸ್ ಜಿಲ್ಲಾ ಕಾರ್ಯದರ್ಶಿ ಗೌರಮ್ಮ ನೇತೃತ್ವದಲ್ಲಿ ರ್ಯಾಲಿಯನ್ನು ಸಿಐಟಿಯು-ಜೆ.ಎಂ.ಎಸ್-ಡಿವೈಎಫ್‌ಐ ಕಾರ್ಯಕರ್ತರು ಸ್ವಾಗತಿಸಿದರು. ಅಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿಐಟಿಯು ಮುಖಂಡರಾದ ಗೋಪಾಲಗೌಡ ಮಾತನಾಡಿದರು.. ಅಲ್ಲಿಂದ ಟೌನ್‌ಹಾಲ್‌ನತ್ತ ಹೊರಟ ಜಾಥಾವನ್ನು ಟೌನ್‌ಹಾಲ್ ಮುಂಭಾಗದಲ್ಲಿ ಜೆ.ಎಂ.ಎಸ್. ಜಿಲ್ಲಾಧ್ಯಕ್ಷರಾದ ಸುನಂದಾ, ಯಶೋದ ಮೊದಲಾದವರ ಮುಖಂಡತ್ವದಲ್ಲಿ ಜೆಎಂಎಸ್ ಕಾರ್ಯಕರ್ತರು ಸ್ವಾಗತಿಸಿದರು.

ಸೌಹಾರ್ದ ಪ್ರದರ್ಶನ

ಬೈಕ್‌ರ್ಯಾಲಿ ಟೌನ್‌ಹಾಲ್ ಪ್ರವೇಶಿಸುತ್ತಿದ್ದಂತೆ ಸಾಹಿತಿ, ಕಲಾವಿದರು, ವಿವಿಧ ಸಂಘಟನೆಗಳ ನೂರಾರು ಕಾರ್ಯಕರ್ತರು ಹಾಜರಿದ್ದ 'ಸೌಹಾರ್ದ' ಕಾರ್ಯಕ್ರಮ ಆರಂಭಗೊಂಡಿತು. ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿ, ವೆಂಕಟಾಚಲಯ್ಯ, ಎಸ್.ವರಲಕ್ಷ್ಮಿ ಮೀನಾಕ್ಷಿ ಸುಂದರಂ, ಕೆ.ಎಸ್.ವಿಮಲಾ, ಕೆ.ಎನ್.ಉಮೇಶ, ಕೆ.ಎಸ್.ಲಕ್ಷ್ಮಿ ಆರ್.ರಾಮಕೃಷ್ಣ ಸೇರಿದಂತೆ ನೂರಾರು ಜನರು ಮತ್ತು ಪ್ರೊ.ಜಿ.ಕೆ. ಗೋವಿಂದರಾವ್, ಆರ್.ಜಿ.ಹಳ್ಳಿ ನಾಗರಾಜ್, ಫಾದರ್ ಅಂಬ್ರೋಸ್ ಪಿಂಟೊ ಮೊದಲಾದವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ, ಗಿರೀಶ್ ಕಾರ್ನಾಡ್, ಡಾ.ಕೆ.ಮರುಳಸಿದ್ದಪ್ಪ, ಜಿ.ವಿ.ಶ್ರೀರಾಮರೆಡ್ಡಿ, ಡಾ.ಸಿದ್ದನಗೌಡ ಪಾಟೀಲ, ಡಾ.ಜಿ.ರಾಮಕೃಷ್ಣ, ಕೆಮಹಾಂತೇಶ್, ಆರ್.ರಾಜಶೇಖರ್ ಮೂರ್ತಿ ಮಾತನಾಡಿದರು.

ಕೆ.ಮಹಾಂತೇಶ್

ಸಿ.ಪಿ.ಐ.(ಎಂ)ನ ಯಶಸ್ವಿ 18ನೇ ಬೆಂಗಳೂರು ಜಿಲ್ಲಾ ಸಮ್ಮೇಳನ

ಸಿ.ಪಿ.ಐ.(ಎಂ)ನ 18ನೇ ಬೆಂಗಳೂರು ಜಿಲ್ಲಾ ಸಮ್ಮೇಳನವು ದಿನಾಂಕ 18, 19, 20 ಡಿಸೆಂಬರ್ 2004 ರಂದು ಯಶವಂತಪುರದಲ್ಲಿ ಯಶಸ್ವಿಯಾಗಿ ಜರುಗಿತು. ಪಕ್ಷದ ಹಿರಿಯ ಮುಖಂಡರು ಸ್ವಾತಂತ್ರ ಹೋರಾಟಗಾರರು ಆದ ಕಾಂ.ಪಿ.ಕೆ. ಸುಬ್ರಮಣಿಯವರು ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು. ಸಮ್ಮೇಳನದ ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾಂ.ಜಿ.ಎನ್‌ನಾಗರಾಜ್‌ರವರು ನೆರವೇರಿಸಿ ಸರ್ವರಿಗೂ ಸಮಪಾಲು - ಸರ್ವರಿಗೂ ಸಮಬಾಳು ಎಂಬ ಸಂದೇಶವನ್ನು ರಾಷ್ಟ್ರಕವಿ ಕುವೆಂಪು ಸೇರಿದಂತೆ - ಅನೇಕ ಪ್ರಗತಿಪರ ಕವಿಗಳು, ಸಾಹಿತಿಗಳ ಮೇಲೆ ಮಾರ್ಕ್ಸ್‌ವಾದದ ಪ್ರಬಾವ ಬೀರಿತ್ತು ಎಂದು ಪ್ರತಿಪಾದಿಸಿದರು. ಶೋಷಣೆಯ ವಿರುದ್ಧ ಹೋರಾಡುತ್ತಾ ಬಂದಿರುವ ಬೆಂಗಳೂರು ನಗರದ ಸಿಪಿಐ(ಎಂ) ಪಕ್ಷವು ಅರ್ಧಶತಕಕ್ಕಿಂತಲೂ ಹೆಚ್ಚು ಕಾಲದ ಅನುಭವವನ್ನು ಹೊಂದಿದೆ. ಬಂಡವಾಳಶಾಹಿಗಳ ವಿರುದ್ಧ ಜನಪರ ನೀತಿಗಾಗಿ ಹೋರಾಟ ರೂಪಿಸಿ ಕಾರ್ಮಿಕರ-ರೈತ-ದುಡಿಯುವ ಜನರನ್ನು ಸಂಘಟಿಸಬೇಕಿದೆ ಎಂದರು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ. ನಾಯಕ್ ರವರು ಮಾತನಾಡಿದರು. ಕಾಂ.ಜಿ.ಸಿ.ಬಯ್ಯಾರೆಡ್ಡಿಯವರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುರೇಂದ್ರ ರಾವ್, ವೆಂಕಟಾಚಲಯ್ಯ, ಸ್ವಾತಂತ್ರ್ಯ ಹೋರಾಟಗಾರರಾದ ಮುಗವಾಳಪ್ಪನವರು ವೇದಿಕೆ ಮೇಲೆ ಉಪಸ್ಥಿತರಿದ್ದು.

ನಂತರ ಕಾರ್ಯದರ್ಶಿಯವರು 42 ಪುಟಗಳುಳ್ಳ ಅರ್ಥಪೂರ್ಣವಾದ ವರದಿಯನ್ನು ಮಂಡಿಸಿದರು. ಈ ವರದಿಯ ಮೇಲೆ ಜಿಲ್ಲೆಯನ್ನು ಪ್ರತಿನಿಧಿಸಿ ಬಂದಿದ್ದ 133 ಪ್ರತಿನಿಧಿಗಳು 19 ಜಿಲ್ಲಾ ಸಮಿತಿ ಸದಸ್ಯರು ಸೇರಿದಂತೆ ಭಾಗವಹಿದರು. ಪ್ರತಿನಿಧಿಗಳು ಸುಮಾರು 7 ಘಂಟೆಗಳಿಗೂ ಹೆಚ್ಚು ಕಾಲ ಚರ್ಚೆ ನಡೆಸಿದರು. ನಂತರ ಚರ್ಚೆಯನ್ನು ಕ್ರೋಢೀಕರಿಸಿ ಕಾರ್ಯದರ್ಶಿಯವರು ಉತ್ತರವನ್ನು ಮಂಡಿಸಿದರು. ನಂತರ ಸರ್ವಾನುಮತದಿಂದ ಈ ವರದಿಯನ್ನು ಅಂಗೀಕರಿಸಲಾಯಿತು.

ಜಾಗತಿಕ ಹಣಕಾಸು ಬಂಡವಾಳದ ಒಂದು ಕೇಂದ್ರವಾಗಿ ಬೆಂಗಳೂರು ಬೆಳವಣಿಗೆಯಾಗುತ್ತಿರುವ ಹಿನ್ನಲೆಯಲ್ಲಿ ಐ.ಟಿ. ಮತ್ತು ಬಿ.ಟಿ. ಕೇಂದ್ರಿತ ಜೀವನಶೈಲಿ ಒಂದು ಕಡೆ ನಿರ್ಮಾಣವಾಗುತ್ತಿದ್ದರೆ, ಮತ್ತೊಂದು ಕಡೆ ಅಸಂಖ್ಯಾತ ದುಡಿಯುವ ಜನರ ಅತ್ಯಂತ ಅಭದ್ರತೆಯ ಜೀವನ ಪರಿಸ್ಥಿತಿ ಬೆಳೆಯುತ್ತಿದೆ. ಸಮಾಜದ ಮೇಲ್ವರ್ಗದ ಒಂದು ಭಾಗಕ್ಕೆ ಲಾಭವನ್ನು ತರುವ ಈ ಪರಿಸ್ಥಿತಿಯು ಬಹುಸಂಖ್ಯಾತರ ಪಾಲಿಗೆ ದುಃಖ ದುಮ್ಮಾನಗಳನ್ನು ಹೆಚ್ಚಿಸುತ್ತಿದೆ. ಶಿಕ್ಷಣ, ಆರೋಗ್ಯ ಮುಂತಾದ ನಾಗರಿಕ ಸೇವೆಗಳು ವಿಶ್ವಬ್ಯಾಂಕಿನ ನಿದೇಶನದಂತೆ ಖಾಸಗೀಕರಣದ ದಿಕ್ಕಿನಲ್ಲಿ ದುಬಾರಿಯಾಗುತ್ತಿವೆ. ಇಂತಹ ಎಲ್ಲಾ ಬೆಳವಣಿಗಗಳನ್ನು ಸಮ್ಮೇಳನವು ಚರ್ಚಿಸಿತು. ಮುಂದಿನ 3 ವರ್ಷಗಳ ಕಾಲ ನಡೆಸಬೇಕಾದ ಹೋರಾಟಗಳು ಕಾರ್ಯಕ್ರಮಗಳನ್ನು ಸಮ್ಮೇಳನವು ತೀರ್ಮಾನಿಸಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿತು.

ಪುಟ 5 ಕ್ಕೆ

ವಿದ್ಯಾರ್ಥಿ-ಯುವಜನರಿಂದ ಮಾನವ ಸರಪಳಿ

ಗುಲ್ಬರ್ಗಾ: ಎಸ್.ಎಫ್.ಐ-ಡಿ.ವೈ.ಎಫ್.ಐನ ನೂರಾರು ಕಾರ್ಯಕರ್ತರು ಬಾಬಾಬುಡನ್ ಗಿರಿಯಲ್ಲಿ ಸೌಹಾರ್ದ ಪರಂಪರೆ ರಕ್ಷಣೆಗಾಗಿ ಹಾಗೂ ಕೋಮುವಾದಿ ಶಕ್ತಿಗಳ ಸಂಚುಗಳನ್ನು ಖಂಡಿಸಿ ನಗರದ ವಲ್ಲಭಬಾಯಿ ಪಟೇಲ್ ವೃತ್ತದಲ್ಲಿ ಡಿಸೆಂಬರ್-23 ರ ಬೆಳಗ್ಗೆ ಸುಮಾರು 35 ನಿಮಿಷಗಳ ಕಾಲ ಸೌಹಾರ್ದ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಡಿವೈಎಫ್‌ಐ ಮುಖಂಡರಾದ ಜೈಲಾಲ್ ತೋಟದಮನಿ, ಸೂರ್ಯಕಾಂತ, ಚಂದ್ರಶೆಟ್ಟಿ ಪಾಟೀಲ, ಎಸ್.ಎಫ್.ಐ ಮುಖಂಡರಾದ ಮಲ್ಲಿಕಾರ್ಜುನ ಮಾನಪಡೆ, ಶರಣಪ್ಪ ಸೈದಾಪುರ, ಈರಮ್ಮ ಬಿರದ್ ಮೊದಲಾದವರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಮುಖಂಡರಾದ ಮಾರುತಿ ಮಾನ್ಪಡೆ, ಮೇಘರಾಜ್ ಕಠಾರೆ ಭಾಗವಹಿಸಿ ಬೆಂಬಲ ಸೂಚಿಸಿ ಮಾತನಾಡಿದರು.

ವೇತನ ಬಿಡುಗಡೆಗೆ ಒತ್ತಾಯಿಸಿ ಗ್ರಾಮ ಪಂಚಾಯತ್ ನೌಕರರ ಧರಣಿ

ಬದುಕಲು ಸಾಧ್ಯವಾಗದ ವೇತನ, ಹತ್ತಾರು ತಿಂಗಳಾದರೂ ದಕ್ಕದ ಸ್ಥಿತಿ, ಸೇವಾ ನಿಯಮಾಳಿಗಳಿಲ್ಲ, ತಾರತಮ್ಯ ಅಸಹನೀಯತೆ - ಇದರ ವಿರುದ್ಧ ದೀರ್ಘ ಹೋರಾಟಕ್ಕೆ ಇಳಿದಿದ್ದಾರೆ ಪಂಚಾಯತ್ ನೌಕರರು. ಅದರ ವರದಿ

ಗುಲಬರ್ಗಾ ಜಿಲ್ಲಾ ಪಂಚಾಯತ್ ಎದುರು ನವೆಂಬರ್ 22 ರಿಂದ ಅನಿರ್ದಿಷ್ಟ ಕಾಲದ ಧರಣಿ ಮುಂದುವರೆದಿದೆ. ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಾಪೂರ, ಈ 7 ಜಿಲ್ಲೆಗಳ ನೌಕರರು ಪ್ರತಿಭಟನೆ ನಡೆಸುತ್ತಿದ್ದಾರೆ. 2004 ರ ಸೆಪ್ಟೆಂಬರ್ 2 ರಂದು ನೌಕರರು ಬೆಂಗಳೂರಿನಲ್ಲಿ ಪ್ರದರ್ಶನ ನಡೆಸಿದ್ದರು. ಸಚಿವರಾದ ಮಾನ್ಯ ಎಂ.ಪಿ.ಪ್ರಕಾಶ ಮನವಿ ಸ್ವೀಕರಿಸಿ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು. ಮಾನ್ಯ ಮುಖ್ಯಮಂತ್ರಿಗಳಿಗೆ ರಾಜ್ಯಸಮಿತಿಯ ನಿಯೋಗವು ಎರಡು ಸಲ ಭೇಟಿಯಾಗಿ ಮನವಿ ಸಲ್ಲಿಸಿತು. 'ಆದರೂ ಬೇಡಿಕೆ ಈಡೇರಿಲ್ಲ.

ಜೀವನಾವಶ್ಯಕ ವೇತನವೂ ಇಲ್ಲ

ಪ್ರತಿ ಗ್ರಾಮ ಪಂಚಾಯತಿಗಳಿಗೆ 12 ರಿಂದ 15 ಲಕ್ಷ ಹಣ ರಾಜ್ಯ, ಕೇಂದ್ರ ಸರಕಾರಗಳಿಂದ ಅಭಿವೃದ್ಧಿಗಾಗಿ ಲಭ್ಯವಾಗುತ್ತಿದೆ. ಇತ್ತೀಚೆಗೆ ಕೇಂದ್ರ ಸರಕಾರವು ಇನ್ನಷ್ಟು ಯೋಜನೆಗಳನ್ನು ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸಲು ನಿರ್ಧರಿಸಿದೆ. ಒಬ್ಬ ಎಸ್.ಡಿ.ಸಿ ದರ್ಜೆ ಕಾರ್ಯದರ್ಶಿ ಗ್ರಾಮ ಪಂಚಾಯತಿ ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಗ್ರಾಮ ಪಂಚಾಯತಿಗಳಲ್ಲಿ ಎಫ್.ಡಿ.ಸಿ ದರ್ಜೆಯ ಸೃಷ್ಟಿ ತೀವ್ರ ಅಗತ್ಯವಾಗಿದೆ. ಖಾಲಿ ಇರುವ ಎಸ್.ಡಿ.ಸಿ. ಹುದ್ದೆಯಲ್ಲಿ ಅನುಭವವುಳ್ಳ ಪಂಚಾಯತಿ ಸಿಬ್ಬಂದಿ ಏಕಕಾಲಕ್ಕೆ ತುಂಬುವಂತಾಗಬೇಕು ಅಂದಾಗ ಮಾತ್ರ ಪಂಚಾಯತಿಗಳನ್ನು ಉತ್ತಮವಾಗಿ ನಡೆಸಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯದ 5659 ಗ್ರಾಮ ಪಂಚಾಯತಿಗಳಲ್ಲಿ 30, ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿ ನೌಕರರಾದ ಪಂಪ್ ಆಪರೇಟರ್, ಕಸ ಗುಡಿಸುವವರು, ಜವಾನ್, ಬಿಲ್ ಕಲೆಕ್ಟರ್‌ಗಳು ಮಾಸಿಕ ವೇತನ ಕೇವಲ 800, 1000 ರೂ.ಗಳಲ್ಲಿ ದುಡಿಯುತ್ತಿದ್ದಾರೆ. ಪುರಸಭೆಗಳಲ್ಲಿ ಇದೇ ಕೆಲಸ ಮಾಡುವ ನೌಕರರು 3500 ರ ದಿಂದ 5000 ರೂ.ವರೆಗೆ ಸಂಬಳ ಪಡೆಯುತ್ತಿದ್ದಾರೆ. ಪುರಸಭೆ ನೌಕರರ ಕೆಲಸ ನಮ್ಮ ಕೆಲಸ ಒಂದೇ ಆಗಿರುವುದರಿಂದ ಸಮಾನ ಕೆಲಸಕ್ಕೆ ಸಮಾನ ವೇತನ ಸಿಗಬೇಕು. ಜೀವನ ಆವಶ್ಯಕ ಕನಿಷ್ಠ ವೇತನವು ಕೂಡಾ ಸಿಗದೆ ಸರಕಾರದ ಕಛೇರಿಗಳಲ್ಲಿ ಜೀತದಾಳಿನ ಬದುಕನ್ನು ಗ್ರಾಮ ಪಂಚಾಯತಿ ನೌಕರರು ನಡೆಸುತ್ತಿದ್ದಾರೆ.

ಇರುವ ಸಂಬಳವೂ ಸಿಗುತ್ತಿಲ್ಲ

ಈಗ ಗ್ರಾಮ ಪಂಚಾಯತಿಗಳು ದುಡಿಯುವ ಸಿಬ್ಬಂದಿಗಳಿಗೆ ಸಂಬಳ ಕೊಡಲು ಸಾಧ್ಯವಾಗಿಲ್ಲ. ಹಲವಾರು ಗ್ರಾಮ ಪಂಚಾಯತಿಗಳಲ್ಲಿ 6 ತಿಂಗಳುಗಳಿಂದ 1 ವರ್ಷದವರೆರೆ ಸಂಬಳ ಸಿಕ್ಕಿಲ್ಲ. ಗ್ರಾಮ ಪಂಚಾಯತಿಗಳಿಗೆ ಸರಕಾರ 5 ಲಕ್ಷ ಅನುದಾನ ನೀಡುತ್ತೇವೆಂದು ಹೇಳಿದರೂ ಕೂಡಾ ಇಲ್ಲಿಯವರೆಗೆ 83 ಸಾವಿರ ಮಾತ್ರ ಅನುದಾನ ನೀಡಲಾಗಿದೆ. ಸಿಬ್ಬಂದಿ ಸಂಬಳ ಕೊಡಲು ಕೂಡಾ ಹಣ ಇಲ್ಲದಂತಾಗಿದೆ. ಇಂಥಹ ಪರಿಸ್ಥಿತಿಯಲ್ಲಿ ಇತ್ತೀಚಿಗೆ ಬಿಡುಗಡೆ ಮಾಡಿದ ಇನ್ನೊಂದು ಕಂತಿನ ಹಣ ರೂ. 1,66,000 ಅನ್ನು ವಿದ್ಯುತ್ ಬಿಲ್ಲು



ಕಟ್ಟಲು ಸರಕಾರವು ಆದೇಶ ಹೊರಡಿಸಿದೆ. ಈಗಾಗಲೇ ಸಂಬಳವಿಲ್ಲದೆ ದುಡಿಯುತ್ತಿರುವ ಗ್ರಾಮ ಪಂಚಾಯತಿ ನೌಕರರರಿಗೆ ತೀರಾ ಅನ್ಯಾಯ ಮಾಡಿದಂತಾಗಿದೆ. ಗ್ರಾಮ ಪಂಚಾಯತ್ ನೌಕರರ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿ ಮಾಡಲು ಸರಕಾರ ಕ್ರಮ ಕೈಗೊಳ್ಳಬೇಕು. ಪ್ರತಿ ತಿಂಗಳು ಸರಕಾರ ಪಂಚಾಯತಿಗಳ ಮೂಲಕ ಸಿಬ್ಬಂದಿಗಳ ಸಂಬಳ ಕೊಡಿಸುವ ವ್ಯವಸ್ಥೆ ಮಾಡಿಸಬೇಕು ಎಂದು ಆಗ್ರಹಿಸಿ ನೌಕರರು ಧರಣಿ ನಡೆಸುತ್ತಿದ್ದಾರೆ.

ಗುಲ್ಬರ್ಗಾದಲ್ಲಿನ ಮುಖ್ಯಮಂತ್ರಿಗಳ ಮನೆ ಮುಂದಿನ ಪ್ರತಿಭಟನಾ ಹೋರಾಟದಲ್ಲಿ ವಿಜಾಪೂರ ಜಿಲ್ಲೆಯ ಭೀಮಸಿ ಕಲಾದಗಿ, ಅಧ್ಯಕ್ಷರು, ಗಧಿಗಿನ ಮಠ, ಭೋರಗಿ

ಕೊಪ್ಪಳ ಜಿಲ್ಲೆಯ ಅನ್ನು ದಾಸಪ್ಪ, ರವೀಂದ್ರ ಕುಲಕರ್ಣಿ, ಮಂಜುನಾಥ, ರಾಯಚೂರು ಜಿಲ್ಲೆಯ ಕೆ.ನಾರಾಯಣ ಅಧ್ಯಕ್ಷರು ಹಾಗೂ ಖಾಜಾ ಮೈನಾದ್ದಿನ, ಬೀದರ ಜಿಲ್ಲೆಯ ಗುರುಶಾಂತ ಬಿರಾದಾರ, ವಿಜಕುಮಾರ ಚಾಂಗ್ಲೇಯರ, ಬಳ್ಳಾರಿ ಜಿಲ್ಲೆಯ ಆರ್.ಎಸ್. ಬಸವರಾಜ. ಬಾಗಲಕೋಟೆ ಜಿಲ್ಲೆಯಿಂದ ವ್ಹಿ.ಎನ್.ಕಲಾಸಿ, ಕುಂಬಾರ್ ಇವರು ನೇತೃತ್ವದಲ್ಲಿದ್ದರು.

ಗುಲಬರ್ಗಾ ಜಿಲ್ಲೆಯಿಂದ ಬಸವರಾಜ ಹೂಗಾರ ಮುಗನೂರ ಅಧ್ಯಕ್ಷರು, ಕೆ.ಮಂಜೂರ ಪಟೇಲ, ಹೋಬಳಿ ಕಾರ್ಯದರ್ಶಿ ಹಾಗೂ ತಾಲ್ಲೂಕ ಪದಾಧಿಕಾರಿಗಳಾದ ಬಸವರಾಜ ಬಂಡೋಳಿ, ಚನ್ನಬಸವ ಮಿಣಜಗಿ, ರಾಯಪ್ಪಗೌಡ ಹೊಡೇರ, ಅಬ್ದುಲ ಬಾಶಾ ಚೌದರಿ, ಶಿವಶರಣಪ್ಪ ಪೂಜಾರಿ, ಹಣಮಂತರೆಡ್ಡಿ ಮುದನಾಳ, ನರಸಯ್ಯ ಗುತ್ತೆದಾರ, ಮಲ್ಲಿಕಾರ್ಜುನ ಅಳ್ಳೊಳಿ, ವಿರೇಂದ್ರ ಪಾಟೀಲ, ಧರ್ಮರಾಯ, ವಿಜಯಕುಮಾರ ದಸ್ತಾಪೂರ, ಗುರನಾಥರೆಡ್ಡಿ, ಶಿವಶರಣಪ್ಪ ಬೋಟೆ, ಅಬಿನಂದನೆ ಕಾಸರ, ಈರಯ್ಯ ಹಿರೆಮಠ, ತಿಪ್ಪಣ್ಣ ಕಂದಗೂಳೆ, ಶಿವಶಂಕರ ಶಿರ್ಸಗಿ, ಇವರ ನೇತೃತ್ವದಲ್ಲಿ ಮತ್ತು ರಾಜ್ಯ ಮುಖಂಡರಾದ ಮಾರುತಿ ಮಾನ್ಪಡೆ ಸಮ್ಮುಖದಲ್ಲಿ ಗ್ರಾಮ ಪಂಚಾಯತಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮುಷ್ಕರದ ಹಕ್ಕಿಗಾಗಿ ಒತ್ತಾಯಿಸಿ ಸರಕಾರಿ ನೌಕರರ ಬೃಹತ್ ಪಾರ್ಲಿಮೆಂಟ್ ಚಲೋ

ಇತ್ತೀಚಿಗೆ ಸರ್ವೋಚ್ಚ ನ್ಯಾಯಾಲಯವು ನಿಷೇಧಿಸಿರುವ ಮುಷ್ಕರದ ಹಕ್ಕನ್ನು ಮರುಸ್ಥಾಪಿಸುವಂತೆ ಒತ್ತಾಯಿಸಿ ಸಹಸ್ರಾರು ಕೇಂದ್ರ ಸರಕಾರಿ ನೌಕರರು ಮತ್ತು ರಾಜ್ಯ ಸರಕಾರಿ ನೌಕರರು ಡಿಸೆಂಬರ್ 7 ರಂದು ಬೃಹತ್ 'ಪಾರ್ಲಿಮೆಂಟ್ ಚಲೋ' ನಡೆಸಿದರು. ನವದೆಹಲಿಯ ರಾಮಲೀಲ ಮೈದಾನದಿಂದ



ಪಾರ್ಲಿಮೆಂಟ್‌ಗೆ ಹೊರಟ ಈ ಬೃಹತ್ ರ್‍ಯಾಲಿಯನ್ನು ಜಂತರ್‌ಮಂತರ್‌ನಲ್ಲಿ ತಡೆಯಲಾಯಿತು.

ಕೇಂದ್ರ ಸರಕಾರಿ ನೌಕರರ ಮತ್ತು ಕಾರ್ಮಿಕರ ಮಹಾಮಂಡಲ (ಸಿ.ಸಿ.ಜಿ.ಇ.ಡಬ್ಲ್ಯು.), ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ (ಎ.ಐ.ಎಸ್.ಜಿ.ಇ.ಎಫ್.) ಮತ್ತು ಭಾರತ ಶಾಲಾ ಶಿಕ್ಷಕರ ಒಕ್ಕೂಟದ (ಎಸ್.ಟಿ.ಎಫ್.ಐ.) ಮುಂದಾಳುಗಳಾದ ವಿ.ಕೆ.ವ್ಯಾಸ್, ಸುಕೋಮಲ್ ಸೇನ್, ರಾಮೀ ರೆಡ್ಡಿ ಮತ್ತಿತರರು ಈ ರ್‍ಯಾಲಿಯ ವರ್ಣರಂಜಿತ ನೇತೃತ್ವ ವಹಿಸಿದ್ದರು.

ಮುಷ್ಕರದ ಹಕ್ಕನ್ನು ಒತ್ತಾಯಿಸಿ, ಐದು ಕೋಟಿ ಸಹಿಗಳನ್ನೊಳಗೊಂಡ ಸಾಮೂಹಿಕ ಮನವಿಯನ್ನು ಲೋಕಸಭೆಯ ಸ್ಪೀಕರ್ ಸೋಮನಾಥ ಚಟರ್ಜಿಯವರಿಗೆ ಸಲ್ಲಿಸಲಾಯಿತು. ಮುಷ್ಕರದ ಹಕ್ಕನ್ನು ಮಾನ್ಯ ಮಾಡಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐ.ಎಲ್.ಒ.) ಗೊತ್ತುವಳಿಗಳು ಅಂಗೀಕೃತಗೊಳ್ಳದೆ ಇರುವುದು ದುರದೃಷ್ಟಕರ. ಸರಕಾರಿ ನೌಕರರಿಗೆ ಮುಷ್ಕರ ಮಾಡುವ ಮೂಲಭೂತ, ಕಾನೂನುಬದ್ಧ ಮತ್ತು ನೈತಿಕ ಹಕ್ಕು ಇರುವುದಿಲ್ಲವೆಂಬ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಮತ್ತು ತಮಿಳುನಾಡಿನ ಮುಷ್ಕರ ನಿರತ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರ ಮೇಲೆ ಕಳೆದ ವರ್ಷ ನಡೆಸಲಾದ ಹಿಂದೆಂದೂ ಕಂಡರಿಯದ ದಬ್ಬಾಳಿಕೆಯು ಅತ್ಯಂತ ಆಘಾತಕಾರಿಯಾಗಿ ಪರಿಣಮಿಸಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ತನ್ನ ಅಹವಾಲುಗಳನ್ನು ತೋಡಿಕೊಳ್ಳಲು ಮುಷ್ಕರದ ಹಕ್ಕು ಏಕಮೇವ ಮಾರ್ಗವಾಗಿದೆ. ಆದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಈ ಕೊನೆಯ ಅಸ್ತ್ರವನ್ನು ನಿರಕಾರಿಸಿರುತ್ತದೆ. ದೇಶದ ಇಂದಿನ ಆರ್ಥಿಕತೆಯಿಂದಾಗಿ ಸರಕಾರಿ ಸಂಸ್ಥೆಗಳಲ್ಲಿ ಕೆಲಸದಿಂದ ತೆಗೆದು ಹಾಕುವಿಕೆ ಮತ್ತು ಹುದ್ದೆಗಳ ಕಡಿತ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಕ್ಕೆ ಎಡೆ ಮಾಡಿದೆ. ಆರ್ಥಿಕ ಮತ್ತು ಸಮಾಜಿಕ ಭದ್ರತೆಯ ಅವಕಾಶಗಳಲ್ಲಿ ತೀವ್ರವಾದ ಕಡಿತವು ಇನ್ನಷ್ಟು ತೊಂದರೆಗಳಿಗೆ ಕಾರಣವಾಗಿದೆ.

ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಮುಷ್ಕರದ ಹಕ್ಕಿಗೆ ನೀಡಲಾಗಿರುವ ಮಾನ್ಯತೆಯನ್ನು ಮನವಿಯಲ್ಲಿ ಪ್ರಸ್ತಾಪಿಸುತ್ತಾ ಈ ಅಂಶವನ್ನು ಪಾರ್ಲಿಮೆಂಟ್‌ನಲ್ಲಿ ತುರ್ತಾಗಿ ಚರ್ಚಿಸುವಂತೆ ಮತ್ತು ಐಎಲ್ಒ ಗೊತ್ತುವಳಿಗಳನ್ನು ಅನುಮೋದಿಸುವಲ್ಲಿ ತನ್ನ ಅಭಿಪ್ರಾಯಗಳನ್ನು ಪ್ರಕಟಿಸುವಂತೆ ಮನವಿ ಮಾಡಲಾಗಿದೆ. ನೌಕರರಿಗೆ ಮುಷ್ಕರದ ಹಕ್ಕು ಸೇರಿದಂತೆ ಪೂರ್ಣವಾದ ಕಾರ್ಮಿಕ ಸಂಘಗಳ ಹಕ್ಕುಗಳು ಇರಬೇಕೆಂದು ಅದು ಆಗ್ರಹಪಡಿಸಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ನೌಕರರ ಸೇವೆ ಮತ್ತು ನಡತೆ ನಿಯಮಾವಳಿಗಳು ಬ್ರಿಟಿಷ್ ಆಡಳಿತದ ಬಳುವಳಿಯಾಗಿದ್ದು, ಅವುಗಳನ್ನು ಕೂಡಲೇ ತೊಡೆದುಹಾಕಬೇಕೆಂದು ಒತ್ತಾಯಿಸಲಾಯಿತು.


ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ಸಂಘಟನೆಗಳ ಮುಖಂಡರುಗಳು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿ, ಮುಷ್ಕರದ ಹಕ್ಕನ್ನು ಪಡೆಯಲು ಹೋರಾಟವನ್ನು ಮುಂದುವರಿಸುವಂತೆ ನೌಕರರು ಮತ್ತು ಶಿಕ್ಷಕರಿಗೆ ಕರೆ ನೀಡಿದರು.

ಈ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳಿಂದ 50 ಸಾವಿರಕ್ಕೂ ಹೆಚ್ಚು ನೌಕರರು ಮತ್ತು ಶಿಕ್ಷಕರು ತಮ್ಮ ಸಂಘಟನೆಗಳ ಬ್ಯಾನರುಗಳೊಂದಿಗೆ ಸ್ಫೂರ್ತಿಯಿಂದ ಭಾಗವಹಿಸಿದ್ದು, ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟ ಮತ್ತು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

- ಕೆ.ಆರ್.ಹೆಗಡೆ

ನೃಪೇನ್ ಚಕ್ರವರ್ತಿ ನಿಧನಕ್ಕೆ ಸಿಪಿಐ(ಎಂ) ಕಂಬನಿ

ಹಿರಿಯ ಕಮ್ಯೂನಿಸ್ಟ್ ದುರೀಣರೂ, ತ್ರಿಪುರ ರಾಜ್ಯದ ಮಾಜಿ ಮುಖ್ಯಮಂತ್ರಿಗಳೂ ಆಗಿದ್ದ ನೃಪೇನ್ ಚಕ್ರವರ್ತಿ ಅವರ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಅತೀವ ಸಂತಾಪವನ್ನು ವ್ಯಕ್ತಪಡಿಸಿದೆ. ಅವರಿಗೆ 100 ವರ್ಷ ವಯಸ್ಸಾಗಿತ್ತು.



ನೃಪೇನ್ ಚಕ್ರವರ್ತಿ ತ್ರಿಪುರ ರಾಜ್ಯದ ಕಮ್ಯೂನಿಸ್ಟ್ ಚಳುವಳಿಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಪಾಳೆಗಾರಿ ರಾಜಪ್ರಭುತ್ವದ ವಿರುದ್ಧ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ಅವರು ಮುಂದಾಳತ್ವದ ಪಾತ್ರವನ್ನು ವಹಿಸಿದ್ದರು. ಹಲವು ಬಾರಿ ಅವರನ್ನು ಬಂಧಿಸಿ ಜೈಲಿಗೆ ಹಾಕಲಾಗಿತ್ತು. ಭೂಗತರಾಗಿಯೂ ಅವರು ಅನೇಕ ವರ್ಷಗಳನ್ನು ಕಳೆದಿದ್ದರು.

ರಾಜ್ಯ ವಿಧಾನ ಸಭೆಗೆ ಸತತವಾಗಿ ಆಯ್ಕೆಯಾಗುತ್ತಾ ಬಂದ ಅವರು 1978ರಲ್ಲಿ ಮೊತ್ತ ಮೊದಲ ಬಾರಿಗೆ ಎಡರಂಗ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಅವರು ಅದರ ಮುಖ್ಯಮಂತ್ರಿಯಾದರು. ಅಲ್ಲದೆ 1988ರ ವರೆಗೂ ಆ ಸ್ಥಾನದಲ್ಲಿ ಮುಂದುವರೆದರು.

ನೃಪೇನ್ ಚಕ್ರವರ್ತಿ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿ 1972ರಲ್ಲಿಯೂ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರಾಗಿ 1983ರಲ್ಲಿಯೂ ಆಯ್ಕೆಯಾಗಿದ್ದರು.

ಅವರು ಅತ್ಯಂತ ಸರಳ ಜೀವಿಯಾಗಿದ್ದರು. ಜನತೆಗಾಗಿ ಅವರು ನಡೆಸಿದ ತ್ಯಾಗಮಯ ಜೀವನದಿಂದಾಗಿ ಅವರು ರಾಜ್ಯದ ಒಳಗೂ ಹೊರಗೂ ತುಂಬಾ ಜನಾದರಣೀಯರಾಗಿದ್ದರು. ಅವರನ್ನು 1995ರಲ್ಲಿ ಪಕ್ಷದಿಂದ ವಜಾ ಮಾಡಲಾಗಿದ್ದರೂ, ಕಮ್ಯೂನಿಸ್ಟ್ ಚಳುವಳಿಗೆ ಅವರ ಕೊಡುಗೆಯನ್ನು ಗಣನೆಗೆ ತೆಗೆದುಕೊಂಡು ಇತ್ತೀಚೆಗೆ ಅವರನ್ನು ಪುನಃ ಪಕ್ಷದೊಳಗೆ ಸೇರ್ಪಡೆ ಮಾಡಲಾಗಿತ್ತು.


ನೃಪೇನ್ ಚಕ್ರವರ್ತಿ ನಿಧನದಿಂದಾಗಿ ಕಮ್ಯೂನಿಸ್ಟ್ ಚಳುವಳಿಯು ಒಬ್ಬ ಹಿರಿಯ ಹೋರಾಟಗಾರರನ್ನು ಕಳೆದುಕೊಂಡಂತಾಗಿದೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಇನ್ನೊಂದು ತೆಹಲ್ಕಾ ಬಯಲಿಗೆ

ಮೋದಿ ಸರಕಾರ ರಕ್ಷಿಸಲು ಜಹೀರಾಗೆ 18 ಲಕ್ಷ ರೂ.ಲಂಚ

'ಶಿಸ್ತುಬದ್ಧ' ಬಿಜೆಪಿಯ ಇನ್ನೊಂದು ಹಗರಣ ಬಯಲಿಗೆ ಬಂದಿದೆ. ಎನ್.ಡಿ.ಎ ಸರಕಾರದಲ್ಲಿ ರಕ್ಷಣಾ ಇಲಾಖೆಯಲ್ಲಿ ನಡೆಯುತಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರವನ್ನು ಬಹಿರಂಗಗೊಳಿಸಿದ ಬೆನ್ನಲ್ಲೇ ಬಿಜೆಪಿ ಮತ್ತು ಗುಜರಾತಿನ ಮೋದಿ ಸರ್ಕಾರ ನಡೆಸಿದ ಇನ್ನೊಂದು ಕುಕೃತ್ಯ ಬಳಕೆಗೆ ಬಂದಿದೆ.

'ಬೆಸ್ಟ್ ಬೇಕರಿ ಪ್ರಕರಣ' ಎಂದು ದೇಶದಾದ್ಯಂತ ಹೆಸರಾಗಿರುವ ಮೊಕದ್ದಮೆಯಲ್ಲಿ ಪ್ರಮುಖ ಸಾಕ್ಷಿಯಾಗಿರುವ ಜಹೀರಾ ಶೇಖ್‌ಗೆ ಗುಜರಾತಿನ ಬಿಜೆಪಿ ಶಾಸಕರಾದ ಮಧು ಶ್ರೀವಾಸ್ತವ 18 ಲಕ್ಷ ರೂ. ಲಂಚ ನೀಡಿ, ಆಕೆ ತಪ್ಪು ಹೇಳಿಕೆ ನೀಡಲು ಪ್ರೇರೇಪಿಸಿದ್ದಾರೆಂದು ತೆಹಲ್ಕಾ ಪಡೆ ಸೆರೆ ಹಿಡಿದ ಕ್ಯಾಮರಾದಿಂಧ ಗೊತ್ತಾಗಿದೆ. ಇದು ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆಯುನ್ನು ಬುಡಮೇಲು ಮಾಡುವ



ಕೃಪೆ: ದಿ ಹಿಂದೂ ದೈನಿಕ

ಕೃತ್ಯವಾಗಿದೆ. ಬಿಜೆಪಿ ನೇತೃತ್ವದ ಗುಜರಾತ್ ಸರಕಾರದ ಅಡಿಯಲ್ಲಿ ತನಿಖೆ ನಡೆದರೆ, ನ್ಯಾಯ ಸಿಗುವುದಿಲ್ಲ ಎಂದು ಪ್ರಕರಣದ ತನಿಖೆಯನ್ನು ಮುಂಬೈನಲ್ಲಿ ನಡೆಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದ ಹಿನ್ನೆಲೆಯಲ್ಲಿ ತನಿಖೆ ನಡೆಯುತ್ತಿದ್ದರೂ, ಈ ಪ್ರಕರಣದ ಪ್ರಮುಖ ಸಾಕ್ಷಿಯಾಗಿರುವ ಜಹೀರಾ ಶೇಖ್ ಒಂದೊಂದು ಬಾರಿಯೂ ಬೇರೆ ಬೇರೆ ಹೇಳಿಕೆ ನೀಡುತ್ತಾ ಗೊಂದಲ ಸೃಷ್ಟಿಗೆ ಕಾರಣಳಾಗಿದ್ದಳು.

ಈಕೆ ಯಾಕೆ ಹಾಗೆ ಮಾಡುತ್ತಿದ್ದಾಳೆ ಎಂದು ಊಹಿಸಬಹುದಾಗಿತ್ತಾದರೂ ಈಗ ಬಹಿರಂಗಗೊಂಡಿರುವ ತೆಹಲ್ಕಾ ಟೆಪಿನಿಂದ ಸ್ಪಷ್ಟವಾಗಿದೆ. ಬಿಜೆಪಿ ಶಾಸಕ 18 ಲಕ್ಷ ನೀಡಿದ ನಂತರವೇ ಗುಜರಾತಿನ ವಡೋದರಾ ನ್ಯಾಯಾಲಯದಲ್ಲಿ, ಪ್ರಮುಖ ಸಾಕ್ಷಿ ಎಂದು ಗುರುತಿಸಲಾಗಿದ್ದ ಜಹೀರಾ 'ನಾನು ಭಯದಿಂದ ಅವಿತುಕೊಂಡಿದ್ದರಿಂದ ಬೆಸ್ಟ್ ಬೇಕರಿಯನ್ನು ಸುಟ್ಟಿದ್ದು ಯಾರು ಎಂದು ಗೊತ್ತಿಲ್ಲ' ಎಂದು ಹೇಳಿದ್ದರು. ಇದರ ಆಧಾರದಲ್ಲಿಯೇ ನ್ಯಾಯಾಲಯ ಮೇ 2003 ರಲ್ಲಿ ಎಲ್ಲಾ 21 ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ಅದಾದ 2 ತಿಂಗಳ ನಂತರ, 'ತಾನು ತಪ್ಪು ಹೇಳಿಕೆ ನೀಡಿ ಪ್ರತಿಕೂಲ ಸಾಕ್ಷಿಯಾಗಲು (hostile) ಬಿಜೆಪಿ ಶಾಸಕ ಮತ್ತು ಅವರ ಸೋದರ ಸಂಬಂಧಿಯಾದ ಕಾಂಗ್ರೆಸ್ ಪಕ್ಷದ ಕೌನ್ಸಿಲರ್ ಕಾರಣ' ಎಂದು ಹೇಳಿದ್ದಳು. ಆಗ ಸಾಮಾಜಿಕ ಕಾರ್ಯಕರ್ತೆಯಾದ ಟೀಸ್ತಾ ಸೆಟಲ್ ವಾಡ್ ಅವರ ಪ್ರಯತ್ನದಿಂದ ಮೊಕದ್ದಮೆಯನ್ನು ಗುಜರಾತ್‌ನಿಂದ ಹೊರಗೆ ನಡೆಸಲು ಆದೇಶಿಸಲಾಗಿತ್ತು.

ಆದರೆ ಇದೇ ನವೆಂಬರ್‌ನಲ್ಲಿ ತಾನು ಮೊದಲು ನೀಡಿದ ಹೇಳಿಕೆಯಿಂದ ದೂರ ಸರಿದ ಜಹೀರಾ, ಟೀಸ್ತಾ ಸೆಟಲ್‌ವಾಡ್ ಅವರ ಬಲಾತ್ಕಾರದಿಂದಾಗಿ, ತಾನು ಸುಳ್ಳು ಹೇಳಿದೆ' ಎಂದು ಹೇಳಿಕೊಂಡಿದ್ದಳು. ಕೋರ್ಟು ನಿಗದಿಪಡಿಸಿದ ದಿನಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ, ಅಹಮದಾಬಾದ್, ಬರೋಡಗಳಲ್ಲಿದ್ದು ಈ ರೀತಿಯ ಹೇಳಿಕೆಗಳನ್ನು ನೀಡಿದ್ದಳು ಎಂಬುದನ್ನು





ಈ ಸಂದರ್ಭದಲ್ಲಿ ಗಮನಿಸಬೇಕು.

ಲಂಚ ನೀಡಿದ್ದು ಕೇವಲ 18 ಲಕ್ಷವಲ್ಲ, 35 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚು ಎಂದು ಹೇಳಲಾಗುತ್ತಿದೆ. ಮಾತ್ರವಲ್ಲ, ಇದರಲ್ಲಿ ಬಿಜೆಪಿ ಶಾಸಕ ಮತ್ತು ಕಾಂಗ್ರೆಸ್ ಕೌನ್ಸಿಲ್ ಮಾತ್ರವಲ್ಲದೆ ಗುಜರಾತ್ ಸರಕಾರ ಕೂಡಾ ಭಾಗಿಯಾಗಿದೆ ಎನ್ನಲಾಗುತ್ತಿದೆ.

2002 ರ ಮಾರ್ಚ 1 ರಂದು ಬೆಸ್ಟ್ ಬೇಕರಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚುತ್ತಿದ್ದಾಗ ಕಣ್ಣಾರೆ ಕಂಡ, ಜಹೀರಾಳ ಅಜ್ಜಿ, ನಡೆದುದೆಲ್ಲವನ್ನು ಕೂಲಂಕುಷವಾಗಿ ವಿವರಿಸಿದ್ದಾಳೆ. ಜಹೀರಾಳ ಅಜ್ಜಿ ಎಲ್ಲವನ್ನೂ ಹೇಳುತ್ತಿರುವಾಗ ಒಂದೇ ಮನೆಯಲ್ಲಿ ವಾಸುತ್ತಿದ್ದ ಮೊಮ್ಮಗಳು ತಾನೇ 'ನೋಡಿಲ್ಲ' ಎಂದು ಹೇಳುವುದರಲ್ಲಿ ಅರ್ಥವೇನಿದೆ? ಹೂ, ಬೆದರಿಕೆ ಜಹೀರಾಳನ್ನು ಈ ಸ್ಥಿತಿಗೆ ತಂದಿಟ್ಟಿದೆ.

ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯ: ಗುಜರಾತಿನ ಬಿಜೆಪಿ ಸರಕಾರ ಪ್ರಾಯೋಜಿತ ಕೋಮು ಗಲಭೆಗಳ ಮೂಲಕ ಸಾವಿರಾರು ಜನರ ಪ್ರಾಣಹಾನಿ, ಕೋಟ್ಯಾಂತರ ರೂಪಾಯಿ ಆಸ್ತಿ ನಷ್ಟ ಮಾಡಿದ್ದು ಮಾತ್ರವಲ್ಲದೆ, ಇದೀಗ ಆರೋಪಿಗಳನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಿದೆ. ಬೆಸ್ಟ್ ಬೇಕರಿ ಪ್ರಕರಣ ಒಂದು ಉದಾಹರಣೆ ಮಾತ್ರ. ಇಂತಹ ಫ್ಯಾಸಿಸ್ಟ್ ಕೃತ್ಯಗಳಿಂದ ಭಾರತದ ಪ್ರಜಾಪ್ರಭುತ್ವಕ್ಕೆ ಕಂಟಕವಾಗಲಿದೆ. ಸರಕಾರಿ ಪ್ರಾಯೋಜಿತ ಗಲಭೆಗಳಾಗಲೀ, ಕ್ರಿಮಿನಲ್‌ಗಳನ್ನು ರಕ್ಷಿಸುವುದಾಗಲಿ ಸಾಧ್ಯವಾಗದಂತೆ ಹಾಗೂ ಗಲಭೆಯಲ್ಲಿ ನೊಂದವರಿಗೆ ಸೂಕ್ತ ಪರಿಹಾರ ಸಿಗುವಂತೆ ನ್ಯಾಯಾಲಯಗಳ ತೀರ್ಪುಗಳು ಬರುವಂತಾಗಬೇಕು. ಆ ನಿಟ್ಟಿನಲ್ಲಿ ಸಾಕ್ಷಿಗಳಿಗೆ ಸೂಕ್ತ ರಕ್ಷಣೆ ಸಿಗುವಂತಾಗಬೇಕು. ಆಗ ಮಾತ್ರವೇ ನ್ಯಾಯಾಂಗವ್ಯವಸ್ಥೆಯ ಮೇಲೆ ಜನರ ಭರವಸೆ ಹೆಚ್ಚುತ್ತದೆ. ಈಗಾಗಲೇ ಸಾಧಾರಣ 3 ವರ್ಷಗಳಷ್ಟು ಹಳೆಯದಾದ ಮೊಕದ್ದಮೆಗಳಲ್ಲಿ ಇನ್ನು ನ್ಯಾಯ ಸಿಗಲಿಲ್ಲವೆಂದರೆ ಜನರಿಗೆ ನ್ಯಾಯಾಂಗದ ಮೇಲೆ ನಂಬಿಕೆ ಬರುವುದಾದರೂ ಹೇಗೆ?

ಗಲಭೆ ನಡೆಸಿ, ಕ್ರಿಮಿನಲ್‌ಗಳನ್ನು ರಕ್ಷಿಸಿ, ಸಾಕ್ಷಿಗಳನ್ನು ಮುಚ್ಚಿ ಹಾಕುತ್ತಿರುವ ಮೋದಿ ಸರಕಾರ ರಾಜಿನಾಮೆ ನೀಡಬೇಕಾಗಿತ್ತು. ಈ ದೇಶದ ಜನತೆ ಮೋದಿ ಸರಕಾರದ ರಾಜಿನಾಮೆಗೆ ಒತ್ತಾಯಿಸಿದರೂ, ಹಿಟ್ಲರ್‌ನ ವಂಶಜರು ಅಧಿಕಾರ ಬಿಟ್ಟುಕೊಡಲು ತಯಾರಿರಲಿಲ್ಲ. ಆದ್ದರಿಂದ ಮುಂಬರುವ ಚುನಾವಣೆಗಳಲ್ಲಿ ಆ ಪಕ್ಷವನ್ನು ಸೋಲಿಸುವುದರ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ರಕ್ಷಿಸಿ, ಬಲಪಡಿಸಲು ಸಾಧ್ಯವಾಗುತ್ತದೆ.

ನೋಡು ಈ ನಾಡು!
ಗಾಂಧೀಜಿ ನಿನ್ನ ತಾಯ್ನಾಡ ನೋಡು
ನೆತ್ತರಿನ ಹೊಳೆಯಾಯ್ತೊ ಆ ಇಡಿಯ ನಾಡು
ಹಿಂಸ್ರಪಶುಗಳು ಅಲ್ಲಿ ಬಿಟ್ಟೆಂದು ಬೀಡು
ಮಾಡಿದವೊ ಆ ಇಡಿಯ ರಾಜ್ಯವನು ಕಾಡು
- ವಿಡಂಬಾರಿ

......ಬೆಂಗಳೂರು ಜಿಲ್ಲಾ ಸಮ್ಮೇಳನ

ಪುಟ 3 ರಿಂದ

ನಿರ್ಣಯಗಳು

- ಬೆಂಗಳೂರು ಮಹಾನಗರ ವ್ಯಾಪ್ತಿಯ ನಗರಸಭೆಗಳಲ್ಲಿ ಕುಡಿಯುವ ನೀರಿನ ಹೆಸರಿನಲ್ಲಿ ಸಂಗ್ರಹಿಸುತಿರುವ ವಂತಿಗೆಯನ್ನು ವಿರೋಧಿಸಿ
- ರೈತರ ಸಾಲಾ ಮನ್ನಾ ಮಾಡಲು ಒತ್ತಾಯಿಸಿ.
- ಪವರ್‌ಲೂಂ ಬಿಕ್ಕಟ್ಟನ್ನು ಪರಿಹರಿಸಲು ಒತ್ತಾಯಿಸಿ,
- ಕಾರ್ಮಿಕರ ಹೋರಾಟಗಳಲ್ಲಿ ಪೋಲಿಸರ ಮಧ್ಯಪ್ರವೇಶ ನಿಲ್ಲಿಸಲು ಒತ್ತಾಯಿಸಿ.
- ಶಿಕ್ಷಣದ ವ್ಯಾಪಾರೀಕರಣವನ್ನು ವಿರೋಧಿಸಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ.
- ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ ಜಾರಿಗೆ ಒತ್ತಾಯಿಸಿ.
- ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ. ಪೆಟೇಂಟ್ ಕಾಯಿದೆ ತಿದ್ದುಪಡಿಗೆ ಆಗ್ರಹಿಸಿ.
- ಕೋಮುವಾದದ ವಿರುದ್ಧ ಚಳುವಳಿ
- ಅಸ್ಪೃಶ್ಯತೆ ಜಾತಿ ತಾರತಮ್ಯ ವಿರೋಧಿಸಿ ಹಾಗೂ ಖಾಸಗಿ ರಂಗದಲ್ಲಿ ಮೀಸಲಾತಿಗೆ ನಿರ್ಣಯ.

ಸಮ್ಮೇಳನವು 25 ಸದಸ್ಯರ (ಒಂದು ಸ್ಥಾನ ಖಾಲಿ ಬಿಟ್ಟು) ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಈ ಸಮಿತಿಯ 9 ಜನರ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಿತು. ನೂತನ ಕಾರ್ಯದರ್ಶಿಯಾಗಿ ಪ್ರಕಾಶ್.ಕೆ. ಮರು ಆಯ್ಕೆಯಾದರು.

ರಾಜ್ಯ ಸಮ್ಮೇಳನಕ್ಕೆ ಜಿಲ್ಲೆಯಿಂದ 12 ಪ್ರತಿನಿಧಿಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ನಂತರ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಜಿ.ಸಿ. ಬಯ್ಯಾರೆಡ್ಡಿ, ವಿ.ಜೆ.ಕೆ.ನಾಯರ್ ಮಾತನಾಡಿದರು. ಮೀನಾಕ್ಷಿ ಸುಂದರಂರವರು ವಂದನಾರ್ಪಣೆ ಮಾಡಿದರು.

ನಂತರ ಗೆಲುವು ನಮ್ಮದು ಹಾಡಿನೊಂದಿಗೆ ಸಮ್ಮೇಳನವು ಮುಕ್ತಾಯ ವಾಯಿತು.

ಸಮ್ಮೇಳನದ ಕಡೆಯ ದಿನ ಟಿ.ದಾಸರ ಹಳ್ಳಿಯ ಟಿ.ವಿ.ಎಸ್. ಕ್ರಾಸ್‌ನಿಂದ ಮೆರವಣಿಗೆ ಹೊರಟು ದಾಸರಹಳ್ಳಿಯ ಸಿ.ಎಂ.ಸಿ. ಕಛೇರಿ ಹತ್ತಿರ ಬಹಿರಂಗ ಸಭೆಯನ್ನು ನಡೆಸಲಾಯಿತು. ಈ ಸಭೆಯನ್ನು ಉದ್ದೇಶಿಸಿ ರಾಜ್ಯ ಕಾರ್ಯದರ್ಶಿಗಳಾದ ಜಿ.ಎನ್.ನಾಗರಾಜ್, ಜಿ.ಸಿ.ಬಯ್ಯಾರೆಡ್ಡಿ ಜಿಲ್ಲಾ ಕಾರ್ಯದರ್ಶಿ ಪ್ರಕಾಶ್.ಕೆ, ವರಲಕ್ಷ್ಮಿ ಮೀನಾಕ್ಷಿ ಸುಂದರಂ ರವರು ಮಾತನಾಡಿದರು. ಒಟ್ಟಾರೆಯಾಗಿ 18ನೇ ಬೆಂಗಳೂರು ಜಿಲ್ಲಾ ಸಮ್ಮೆಳನವು ಕಾರ್ಯಕರ್ತರಿಗೆ ಒಂದು ರೀತಿಯ ಸ್ಪೂರ್ತಿ ತಂದುಕೊಟ್ಟಿದೆ. ಮುಂದೆ ಪ್ರತಿಯೊಬ್ಬ ಸದಸ್ಯರು, ಮುಖಂಡರೂ ಕೂಡ ಪಕ್ಷವನ್ನು ಬಲಿಷ್ಟಗೊಳಿಸುವುದಕ್ಕೆ ಕೆಲಸ ಮಾಡುತ್ತಾರೆ ಎಂಬುದು ಸಮ್ಮೇಳನದ ಒಟ್ಟಾರೆ ಪ್ರತಿಫಲನವಾಗಿದೆ.

ವರದಿ ಎಸ್.ಮಂಜುನಾಥ್



ನೂತನ ಜಿಲ್ಲಾ ಸಮಿತಿ

ಕಾರ್ಯದರ್ಶಿ : ಪ್ರಕಾಶ್.ಕೆ.

ಕಾರ್ಯದರ್ಶಿ ಮಂಡಳಿ ಸದಸ್ಯರು : ಇ.ಕೆ.ಎನ್.ರಾಜನ್, ಸುರೇಂದ್ರರಾವ್, ಗೋಪಾಲಗೌಡ ಎಚ್.ಎನ್, ಗೋಪಾಲಕೃಷ್ಣ, ಮೀನಾಕ್ಷಿ ಸುಂದರಂ, ಗೌರಮ್ಮ, ಚಂದ್ರ ತೇಜಸ್ವಿ, ಎನ್.ವೆಂಕಟಾಚಲಯ್ಯ.

ಜಿಲ್ಲಾ ಸಮಿತಿ ಸದಸ್ಯರು : ಪಿ.ಕೆ.ಸುಬ್ರಮಣಿ, ಆರ್.ಶ್ರೀನಿವಾಸ್, ಪಿ.ಜಗನ್ನಾಥ್, ಆರ್.ರಾಮಕೃಷ್ಣ,, ಕೆ.ಎನ್.ಸುಬ್ರಮಣ್ಣಿ, ಶಿವರಾಮರೆಡ್ಡಿ, ಮೆಲ್ಕಿಯೋರ್ ಆರ್.ಡಿ., ಕೆ.ಆರ್.ವೆಂಕಟೇಶಗೌಡ, ರಾಮಚಂದ್ರ.ಸಿ., ಮನೋಹರ್.ಆರ್.ಆರ್., ಮಹದೇಶ್, ರತ್ನಾಕರ್ ಶೆಟ್ಟಿ, ಗಂಗಣ್ಣ, ಹೆಚ್.ಜಿ.ಶ್ರೀನಿವಾಸಮೂರ್ತಿ,

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಉತ್ತರಕನ್ನಡ ಜಿಲ್ಲಾ 6ನೇ ಸಮ್ಮೇಳನದಲ್ಲಿ
ಆಯ್ಕೆಯಾದ

ನೂತನ ಜಿಲ್ಲಾಸಮಿತಿ

ಜಿಲ್ಲಾ ಕಾರ್ಯದರ್ಶಿ
ಶಾಂತಾರಾಮ ನಾಯಕ


ಜಿಲ್ಲಾ ಕಾರ್ಯದರ್ಶಿ ಮಂಡಳಿ
ಶಾಂತಾರಾಮ ನಾಯಕ
ಮಂಜುನಾಥ ಫುಲ್ಕರ್
ತಿಲಕಗೌಡ
ವಿಠ್ಠಲ ಭಂಡಾರಿ
ಸುಭಾಷ್ ಕೊಪ್ಪಿಕರ್

ಜಿಲ್ಲಾಸಮಿತಿ ಸದಸ್ಯರು
ಯಮುನಾ ಗಾಂವಕರ್
ಸವಿತಾ ತನ್ಮಡಗಿ
ಎಂ.ಬಿ.ನಾಯಕ
ಎಚ್.ಬಿ.ನಾಯಕ
ಸಿ.ಆರ್.ಶಾನಭಾಗ
ರಾಮಾಶಿವಯ್ಯಗೌಡ
ತಿಮ್ಮಪ್ಪಗೌಡ
ಟಿ.ಎಸ್.ನಾಯ್ಕ

ಕಣ್ಣೀರು ಅನುಭವ
ಎಲ್ಲಿಂದ ಬರುತಿಹುದು ಕಣ್ಣೀರು ಗೊತ್ತೇ?
ಹಗಲಿರುಳು ಸುರಿಸಿದರು ಬತ್ತದೈ ಮತ್ತೆ
ಶುದ್ಧ ನೀರೂ ಸಿಗದ ಬಡಜನರ ಬಾಳು
ಕಣ್ಣೀರಿನಲ್ಲಿಯೇ ಕೈತೊಳೆವ ಗೋಳು
ವಿಡಂಬಾರಿ

2005 ಅಂದರೆ ಹೊಸ ಸವಾಲುಗಳು, ಹೆಚ್ಚ

2004 ಇತಿಹಾಸ ಸೇರಿದೆ. ಜೊತೆಗೆ ಕೇಂದ್ರದಲ್ಲಿ ಕೋಮುವಾದಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಅಧಿಕಾರದಿಂದ ಇಳಿಸಿದೆ. ಅಷ್ಟೇ ಅಲ್ಲದೆ ಬಡ ಜನತೆಯ ಬಗ್ಗೆ ಮಾನವೀಯ ಮುಖವಿರದ ಐಎಂಎಫ್- ವಿಶ್ವಬ್ಯಾಂಕ್ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದ ಹಲವು ರಾಜ್ಯ ಸರ್ಕಾರಗಳು ಜನಬೆಂಬಲ ಕಳೆದುಕೊಂಡಿವೆ. ಇಂತಹ ಸಂದರ್ಭದಲ್ಲಿ 2005ನೇ ವರ್ಷವನ್ನು ನಾವು ಇನ್ನಷ್ಟು ದೃಢ ಹೋರಾಟಗಳ ವರ್ಷವಾಗಿ ಮಾರ್ಪಡಿಸಬೇಕಾಗಿದೆ. ಇದರ ಹಿನ್ನೋಟ ಮತ್ತು ಮುನ್ನೋಟದ ಬಗ್ಗೆ ಕಾಂ.ಸುರ್ಜಿತ್ ವಿಶ್ಲೇಷಿಸಿದ್ದಾರೆ.



ಹರ್ಕಿಶನ್ ಸಿಂಗ್ ಸುರ್ಜಿತ್

ಇತಿಹಾಸವನ್ನು ಸೇರುತ್ತಿರುವ 2004 ಬೇರೆ ಯಾವುದಕ್ಕಲ್ಲದಿದ್ದರೂ ಒಂದು ಪ್ರಧಾನ ಘಟನೆಗಾಗಿಯಾದರೂ ನೆನಪಿನಲ್ಲುಳಿಯುತ್ತದೆ. ರಾಷ್ಟ್ರೀಯ ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಎಂಬ ಆರ್‌ಎಸ್‌ಎಸ್ ಹತೋಟಿಯ ಬಿಜೆಪಿ ನೇತೃತ್ವದಲ್ಲಿದ್ದ ಮೈತ್ರಿಕೂಟ ಅಧಿಕಾರದಿಂದ ತಲೆತಗ್ಗಿಸಿಕೊಂಡು ಹೊರಹೋದ ವರ್ಷ.

ನಾವಿಲ್ಲಿ ಬಿಜೆಪಿ ಮತ್ತು ಅದರ ಬೆನ್ನೆಲುಬಿಲ್ಲದ ಮಿತ್ರರು ಏಕೆ ಸೋತರು, ಚುನಾವಣೆಗಳಲ್ಲಿ ಅವರ ಸೋಲಿನ ಮಹತ್ವ ಏನು ಎಂಬ ಬಗ್ಗೆ ಟಿಪ್ಪಣಿ ಮಾಡುತ್ತಿಲ್ಲ. ಈ ಬಗ್ಗೆ ಸಾಕಷ್ಟು ಹೇಳಿದ್ದೇವೆ. ಬಿಜೆಪಿ ನೇತೃತ್ವದ ಕೂಟ 2004 ರಲ್ಲಿ ತಾನು ಪರಾಭವ ಎದುರಿಸಬೇಕಾದೀತು ಎಂದು ಊಹಿಸಿಯೇ ಇರಲಿಲ್ಲ. ವರ್ಷದ ಆರಂಭದಲ್ಲಷ್ಟೇ ಹಲವಾರು ಉತ್ಪನ್ನಗಳಿಗೆ ವ್ಯಾಪಕ ಸುಂಕ ಕಡಿತ ಘೋಷಿಸಿತ್ತು. ಹಿಂದಿನ ಐದು ವರ್ಷಗಳೂ ಜನಗಳ ಮೇಲೆ ಹಲವಾರು ಹೊರೆಗಳನ್ನು ಹಾಕಿದ ಸರ್ಕಾರದ ಈ ಕ್ರಮ ನೋಡಿ ಚುನಾವಣೆ ಬೇಗನೇ ನಡೆಯಲಿದೆ, ಇವು ಜನಗಳಿಗೆ ಒಡ್ಡುತ್ತಿರುವ ಆಮಿಷ ಎಂಬ ಸೂಚನೆ ದೊರೆತಿತ್ತು.

ಅದಾದ ಕೂಡಲೇ ಆರಂಭವಾಯಿತು 'ಭಾರತ ಪ್ರಕಾಶಿಸುತ್ತಿದೆ' ಯ ಪ್ರಚಾರದ ಭರಾಟೆ. ಬಿಜೆಪಿ ತನ್ನ ಖಜಾನೆಯಲ್ಲಿದ್ದ, ಪೇರಿಸಿದ್ದ ಕೋಟ್ಯಾಂತರ ರೂಪಾಯಿಗಳನ್ನೂ, ಇಲೆಕ್ಟ್ರಾನಿಕ್ ಉಪಕರಣಗಳನ್ನು ವ್ಯಾಪಕವಾಗಿ ಬಳಸಿ ನಡೆಸಿದ ಈ ಪ್ರಚಾರ ವಾಜಪೇಯಿಯವರ ಅಡಿಯಲ್ಲಿ ಈ ದೇಶ ದಾಪುಗಾಲಿಟ್ಟಿದೆ ಎಂದು ಬಿಂಬಿಸಲು ಪ್ರಯತ್ನಿಸಿತು. ಅಷ್ಟೇ ಅಲ್ಲ 2020 ರ ವೇಳೆಗೆ ಭಾರತ ಒಂದು ಬೃಹತ್ ಸ್ವರೂಪ ಪಡೆಯುತ್ತದೆ ಎಂದು ಹೇಳಲಾಯಿತು. ಅಂದರೆ ಅದುವರೆಗಾದರೂ ಬಿಜೆಪಿ ಮತ್ತು ಅದರ ಮಿತ್ರರನ್ನು ಚುನಾಯಿಸುತ್ತಲೇ ಇರುವುದು ಜನತೆಗೇ ಒಳ್ಳೆಯದು ಎಂದೂ ಬಿಂಬಿಸುವ ಪ್ರಯತ್ನ ನಡೆಯಿತು. ಆಳುವ ಕೂಟ ಅತ್ಯುನ್ನತ ಆತ್ಮವಿಶ್ವಾಸದಿಂದ ತುಂಬಿ ತುಳುಕುವಂತಿತ್ತು.

ಆತ್ಮವಂಚನೆಯ ಪರಮಾವಧಿ

ಆದರೆ ಕೊನೆಗೆ ಎನ್‌ಡಿಎಯ, ಅದಕ್ಕೂ ಹೆಚ್ಚಾಗಿ ಬಿಜೆಪಿಯ ಅತ್ಯುನ್ನತ ಆತ್ಮವಿಶ್ವಾಸ, ಅತ್ಯುನ್ನತ ಮಟ್ಟದ ಮೋಸವಾಗಿತ್ತು, ಅತ್ಯನ್ನತ ಮಟ್ಟದ ಆತ್ಮವಂಚನೆಯಾಗಿತ್ತು ಹಾಗೂ ಅತ್ಯನ್ನುತ ಮಟ್ಟದ ದುರಹಂಕಾರವಾಗಿತ್ತು ಎಂಬುದು ಕಂಡುಬಂತು. ಎಲ್ಲರನ್ನೂ ಎಲ್ಲಾ ಕಾಲದಲ್ಲೂ ಮೋಸಗೊಳಿಸಲಾಗುವುದಿಲ್ಲ ಎನ್ನುತ್ತಾರಲ್ಲ. ಈ ಸತ್ಯವನ್ನು ಬಿಜೆಪಿ ಮರೆತಿತ್ತು, ನೆನಪಿಸಿಕೊಳ್ಳಲೇಬೇಕಾಯಿತು. 1998 ರಿಂದ 2004 ರವರೆಗೆ ಎಲ್ಲಾ ರಂಗಗಳಲ್ಲಿ - ಆರ್ಥಿಕ, ಶಿಕ್ಷಣ ಮತ್ತು ಇತರ ಸಾಮಾಜಿಕ ವಲಯಗಳು, ಭ್ರಷ್ಟಾಚಾರ, ಹಗರಣಗಳು, ವಿದೇಶಾಂಗ ಇತ್ಯಾದಿ ಎಲ್ಲ ರಂಗಗಳಲ್ಲಿಯೂ - ಈ ಕೋಮುವಾದಿ ಕೂಟದ ಕ್ರಮಗಳನ್ನು ಕಂಡ ಜನಗಳನ್ನು ಈ ಪ್ರಚಾರದ ಭರಾಟೆಯಿಂದ, ಚುನಾವಣಾ ಪೂರ್ವ ಆಮಿಷದ ಕ್ರಮಗಳಿಂದ ಮೋಸಗೊಳಿಸಲಾಗಲಿಲ್ಲ.

ಇದರಲ್ಲಿ ಆಶ್ಚರ್ಯವೇನಿಲ್ಲ, ಜನಗಳ ನಿಜ ಜೀವನದಿಂದ, ಅವರ ಮನೋಭಾವದಿಂದ ದೂರವುಳಿದಿದ್ದ ಬಿಜೆಪಿ ತಾನು ಮಾಡಬಯಸಿದ್ದನ್ನೆಲ್ಲಾ ಮಾಡಿ ಚುನಾವಣೆ ಬಂದಾಗ ಚುನಾವಣಾ ಉಡುಗೊರೆಗಳು ಮತ್ತು ಪ್ರಚಾರದ ಭರಾಟೆಯಿಂದ ಜನಗಳನ್ನು ಮೋಸಗೊಳಿಸಬಹುದು ಎಂದು ಯೋಜಿಸಿತ್ತು. ಜನ ಬಿಜೆಪಿ ಕೂಟವನ್ನು ಸಂಪೂರ್ಣವಾಗಿ ಕಿತ್ತೆಸೆದರು.

ಲೋಕಸಭಾ ಚುನಾವಣೆಗಳ ಕೆಲವೇ ತಿಂಗಳ ನಂತರ ಮಹಾರಾಷ್ಟ್ರದಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಶಿವಸೇನೆ ಇನ್ನೊಂದು ಸೋಲುಂಡವು. ಆದರೂ ಈ ದೇಶದ ಜನಗಳನ್ನು ಕೋಮುವಾದೀ ಮನವಿಗಳಿಂದ ದಾರಿತಪ್ಪಿಸಲಾಗುವುದಿಲ್ಲ ಎಂಬುದನ್ನು ಅವರಿನ್ನೂ ಅರಿತಿಲ್ಲ ಎಂಬುದು ಬೇರೆ ಮಾತು.

ಇನ್ನೊಂದು ಬಿಜೆಪಿ ಮಿತ್ರ ಪಕ್ಷವಾದ ತೆಲುಗುದೇಶಂ ಪಕ್ಷಕ್ಕೂ ಕಂಪ್ಯೂಟರ್ ಪ್ರಿಯ ಚಂದ್ರಬಾಬು ನಾಯ್ಡು ನೇತೃತ್ವದಲ್ಲಿ ಆಂಧ್ರಪ್ರದೇಶದಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಷ್ಟೇ ಅಲ್ಲ, ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಇದೇ ಗತಿ ಕಾದಿತ್ತು. ಜನಗಳ ಮೂಲ ಪ್ರಶ್ನೆಗಳನ್ನು ಪರಿಹರಿಸದೆ ರಾಜ್ಯವನ್ನು ಸೈಬರ್ ಯುಗಕ್ಕೆ ಒಯ್ಯುವ ಮಾತು ಅರ್ಥಹೀನ ಎಂಬುದನ್ನು ಅರಿಯಲು ಬಡ ನಾಯ್ಡು ಭಾರೀ ಬೆಲೆ ತೆರಬೇಕಾಯಿತು.

ಇಂದಿನ ಆತಂಕಕ್ಕೆ ಕಾರಣ

ಈ ರೀತಿ ಲೋಕಸಭಾ ಚುನಾವಣೆಗಳಿಂದಾಗಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಒಂದು ಜಾತ್ಯತೀತ ಮೈತ್ರಿಕೂಟ ಅಧಿಕಾರಕ್ಕೆ ಬಂತು ಎಂಬುದು ದೇಶದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಸಂತಸದ ವಿಷಯ.

ನಮಗೆ ಈಗಿನ ಆಳುವ ಕೂಟದ ವರ್ಗಸ್ವರೂಪದ ಬಗ್ಗೆ ಭ್ರಮೆಗಳಿಲ್ಲವಾದರೂ ಕೋಮುವಾದಿ ಕೂಟದ ಪರಾಭವ ಜನಗಳಿಗಾಗಿ ಹೋರಾಟ ನಡೆಸಲು ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ವಿಶಾಲ ಅವಕಾಶವನ್ನು ತೆರೆದುಕೊಟ್ಟಿದೆ ಎಂಬುದಂತೂ ನಿಜ. ಆದ್ದರಿಂದಲೇ ಎಡ ಪಕ್ಷಗಳು ಸಂಯುಕ್ತ ಪ್ರಗತಿಪರ ರಂಗ (ಯುಪಿಎ) ಎಂಬ ಹೊಸ ಮೈತ್ರಿಕೂಟಕ್ಕೆ ಬೆಂಬಲ ನೀಡಲೂ ಒಂದು ಕ್ಷಣವೂ ಹಿಂಜರಿಯಲಿಲ್ಲ.

ಆದರೆ ಯುಪಿಎ ಮುಖಂಡರು ಈ ಮಾನಕಳಕೊಂಡ ವಿಶ್ವಬ್ಯಾಂಕ್, ಐಎಂಎಫ್ ನೀತಿಗಳಿಂದ ದೂರವಿರಬೇಕು ಎಂದು ಹೇಳದಿದ್ದರೆ ಅದು ನಮ್ಮ ಕರ್ತವ್ಯ ಲೋಪವಾಗುತ್ತದೆ. ಇವು ರಾವ್ ಸರ್ಕಾರದ ಆರಂಭಿಸಿದ, ಸಂಯುಕ್ತ ರಂಗ ಸರ್ಕಾರ ಅನುಸರಿಸಿದ ಮತ್ತು ಬಿಜೆಪಿ ನೇತೃತ್ವದ ಸರ್ಕಾರ ಇನ್ನಷ್ಟು ಕರ್ಕಶವಾಗಿ ಅನುಸರಿಸಿದ ನೀತಿಗಳು. ಕೊನೆಗೆ ಇವೆಲ್ಲಾ ಜನಗಳ ಕೋಪಕ್ಕೆ ಪಾತ್ರರಾಗಬೇಕಾಯಿತು. ಬಿಜೆಪಿ ನೇತೃತ್ವದ ಕೂಟದ ಸಂಪೂರ್ಣ ಪರಾಭವದಿಂದ ಅವರು ಪಾಠ ಕಲಿಯಬೇಕು.

ಇದು ಕಳೆದ ಆರು ತಿಂಗಳಲ್ಲಿ ಯುಪಿಎ ಆಡಳಿತ ಸಾಮಾನ್ಯ ಕನಿಷ್ಟ ಕಾರ್ಯಕ್ರಮ (ಸಿಎಂಪಿ) ಉಲ್ಲಂಘಿಸುವ ಕೆಲವು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಗಮನಿಸಿದಾಗ ಮಹತ್ವದ್ದಾಗುತ್ತದೆ.



ಪೆಟ್ರೋಲ್ ಉತ್ಪನ್ನಗಳ ಬೆಲೆಯೇರಿಕೆ ಒಂದು ಉದಾಹರಣೆ. ಅಡುಗೆ ಅನಿಲದ ಮೇಲಿನ ತಥಾಕಥಿತ ಸಬ್ಸಿಡಿಯನ್ನು ನಿರ್ಮೂಲ ಮಾಡುವವರೆಗೆ ಪ್ರತಿ ತಿಂಗಳು 5 ರೂ. ಹೆಚ್ಚಳವನ್ನು ಸರ್ಕಾರ ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಎಡಪಕ್ಷಗಳು ಯಶಸ್ವಿಯಾಗಿದ್ದರೂ, ಯುಪಿಎ ಸರ್ಕಾರದ ಬೇರೆ ಕೆಲವು ಕ್ರಮಗಳು ಆತಂಕವುಂಟುಮಾಡಲು ಸಾಕು.



ಉದಾಹರಣೆಗೆ, ಉದ್ಯೋಗ ಭರವಸೆ ಯೋಜನೆಯ ಪ್ರಶ್ನೆಯ ಮೇಲೆ ಸಿಎಂಪಿಯಲ್ಲಿ ಸ್ಪಷ್ಟ ಭರವಸೆಯಿದ್ದರೂ ಸರ್ಕಾರ ಹಿಂದೇಟು ಹಾಕಲಾರಂಭಿಸಿತು. ಎಡಪಕ್ಷಗಳು ಮತ್ತು ಇತರ ಕೆಲವರ ಒತ್ತಡಗಳಿಂದಾಗಿ ಈಗ ಸಂಸತ್ತಿನಲ್ಲಿ ಒಂದು ಮಸೂದೆಯನ್ನು ಮಂಡಿಸಿದರೂ ಅದು ರಾಷ್ಟ್ರೀಯ ಸಲಹಾ ಸಮಿತಿಯ ಜೀನ್ ಡ್ರೇಝ್ ತಯಾರಿಸಿದ ಕರಡನ್ನು ಅತ್ಯಂತ ದುರ್ಬಲಗೊಳಿಸಿದ ಕರಡಾಗಿದೆ. ಯುಪಿಎ ಸರ್ಕಾರ 1970 ರ ಪೇಟೆಂಟ್ ಕಾನೂನಿನಲ್ಲಿ ಪ್ರತಿಗಾಮಿ ಬದಲಾವಣೆಗಳನ್ನು ಮಾಡಲಿದೆ ಎಂಬ ಸಂದೇಹವಿದೆ. ಇದು ದೇಶೀ ಬೀಜ, ಔಷಧಿ ಮತ್ತು ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಗಂಭೀರವಾಗಿ ತಟ್ಟುತ್ತದೆ. ಆ ಮೂಲಕ ನಮ್ಮ ದೇಶದ ಜನಸಾಮಾನ್ಯರ ಜೀವನವನ್ನೂ ತಟ್ಟುತ್ತದೆ. ಸಂಸತ್ತಿನಲ್ಲಿ ವಿರೋಧದಿಂದಾಗಿ ಸರ್ಕಾರ ಈ ಕುರಿತ ಡಬ್ಲ್ಯುಟಿಓದ ಡಿಸೆಂಬರ್ 31 ರ ಗಡುವನ್ನು ಮಾನ್ಯ ಮಾಡಲು ಒಂದು ಸುಗ್ರೀವಾಜ್ಞೆಯ ಮೂಲಕ ಇಂತಹ ಬದಲಾವಣೆಯನ್ನು ತರಬಹುದು ಎಂಬ ವದಂತಿಯೂ ಇದೆ.

ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸುವುದಿಲ್ಲ ಎಂದು ಭರವಸೆ ನೀಡಿದರೂ ಅವುಗಳಲ್ಲಿ ಕೆಲವನ್ನು ಖಾಸಗೀಕರಿಸುವ ಆಶಯವನ್ನು ಸರ್ಕಾರ ಇನ್ನೂ ಬಿಟ್ಟಂತಿಲ್ಲ. ಯೋಜನಾ ಸಂಸ್ಥೆಗಳಲ್ಲಿ ಐಎಂಎಫ್-ವಿಶ್ವ ಬ್ಯಾಂಕ್ ಪ್ರತಿನಿಧಿಗಳನ್ನು ಸೇರಿಸಿ ಈ ಮೂಲಕ ಇವು ನಮ್ಮ ಆರ್ಥಿಕದೊಳಗೆ ತರುವಂತೆ ಅವಕಾಶ ಕಲ್ಪಿಸಲು ಕೂಡಾ ಪ್ರಯತ್ನಿಸಿತು. ಈ ಬಗ್ಗೆ ಬೊಬ್ಬೆ ಎದ್ದ ಮೇಲೆಯೇ ಈ 'ಸಲಹಾಗಾರ'ರನ್ನು ಹೋಗಲು ಹೇಳಲಾಯಿತು. ಆದರೆ ಈ ಬೊಬ್ಬೆಯಿಂದ ಕುಪಿತಗೊಂಡ ಸರ್ಕಾರ ಯೋಜನಾ ಆಯೋಗಕ್ಕೆ ಸಂಬಂಧಿಸಿದ ಎಲ್ಲಾ ಸಮಿತಿಗಳನ್ನು ವಿಸರ್ಜಿಸಿತು.

ಇವನ್ನೆಲ್ಲಾ ಕಂಡರೆ, ಒಂದೆಡೆ ಸಿಎಂಪಿಯನ್ನು ಬುಡಮೇಲು ಮಾಡುತ್ತಾ, ಮತ್ತೊಂದೆಡೆ ದೇಶೀ-ವಿದೇಶೀ ಬಂಡವಾಳಕ್ಕೆ ಪ್ರಯೋಜನಗಳನ್ನು ಒದಗಿಸಲು ಧಾವಿಸುವ ಒಂದು ಲಾಬ್ಬಿ ಕಾಂಗ್ರೆಸ್ ಪಕ್ಷ ಹಾಗೂ ಸರಕಾರದಲ್ಲಿದೆ ಎಂಬ ಸಂದೇಹ ಪುಷ್ಟಿಗೊಳ್ಳುತ್ತದೆ.

ಮೂಲಪ್ರಶ್ನೆ:

ಇಲ್ಲಿರುವ ಪ್ರಶ್ನೆಯೆಂದರೆ ನಮಗೆಲ್ಲಾ ಈ ವಿಷಯಗಳು ಅಷ್ಟೊಂದು ಮಹತ್ವದ್ದು ? ಬಹಳ ಹಿಂದೆಯೇನೂ ಹೋಗಬೇಕಾಗಿಲ್ಲ - ನವೆಂಬರ್ 2003 ರಲ್ಲಿ ರಾಜಸ್ತಾನ, ಮಧ್ಯಪ್ರದೇಶ, ಛತ್ತೀಸ್ ಗಡದಲ್ಲಿ ಆದುದನ್ನು ನೆನಪಿಸಿಕೊಳ್ಳೋಣ. ಈ ರಾಜ್ಯಗಳ ಕಾಂಗ್ರೆಸ್ ಸರ್ಕಾರಗಳು ಜನಗಳ ನೈಜ ಆತಂಕಗಳನ್ನು ನಿರ್ಲಕ್ಷಿಸಿದ್ದವು. ಛತ್ತೀಸ್ ಗಡದ ಅಜಿತ್ ಜೋಗಿ ಸರ್ಕಾರವಂತೂ ಶಿವನಾಥ ನದಿ ಸಾರವನ್ನೇ ಖಾಸಗೀಕರಿಸುವ ಮಟ್ಟದವರೆಗೂ ಹೋಯಿತು. ಈ ದೇಶದಲ್ಲೇಕೆ, ಜಗತ್ತಿನಲ್ಲೇ ಕಂಡು ಕೇಳರಿಯದ ಸಂಗತಿ ಇವು. ಇದರ ಫಲಿತಾಂಶವೇನು? ಕಾಂಗ್ರೆಸ್ ಈ ಎಲ್ಲಾ ಸರ್ಕಾರಗಳನ್ನೂ ಶೋಚನೀಯ ರೀತಿಯಲ್ಲಿ ಕಳಕೊಂಡಿತು. ಅಷ್ಟೇ ಅಲ್ಲ, ಒಂದು ಪರಿಣಾಮಕಾರಿ, ಪ್ರಜಾಸತ್ತಾತ್ಮಕ ಪರ್ಯಾಯವಿಲ್ಲದಂತಾಗಿ ಕಾಂಗ್ರೆಸ್ ಪ್ರಮಾದಗಳಿಂದ ಕೋಮುವಾದಿ ಕೂಟಕ್ಕೆ ಪ್ರಯೋಜನವಾಯಿತು.

ಆದರೆ ಇಂತಹ ಅನುಭವಗಳ ಪರಿವೆಯಿಲ್ಲದೆ ದಿಲ್ಲಿಯಲ್ಲಿನ ಕಾಂಗ್ರೆಸ್ ಸರ್ಕಾರದ ಅದೇ ಮಾನಕಳಕೊಂಡ ದಾರಿಯಲ್ಲೇ ಸಾಗಿದೆ. ಹಿಂದಿನ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸಿದ್ದರಿಂದ ಬಳಕೆದಾರರು ಸಂಕಟಪಡುತ್ತಲೇ ಇದ್ದಾರೆ. ಈಗ ಈ ಸರ್ಕಾರ ನೀರಿನ ದರಗಳಲ್ಲಿ ತೀವ್ರ ಏರಿಕೆ ಮಾಡಿದೆ. ದಟ್ಟ ದರಿದ್ರ ಬಳಕೆದಾರರನ್ನು ಬಿಟ್ಟಿಲ್ಲ. ರಾಷ್ಟ್ರದರಾಜಧಾನಿಯ ಜನ ಕೋಪೋದ್ರಿಕ್ತರಾಗಿದ್ದಾರೆ. ಸದ್ಯಕ್ಕೆ ಡಿಟಿಸಿ ಬಸ್ ದರಗಳನ್ನು ಏರಿಸಲಾಗುವುದಂತೆ. ಅಧಿಕಾರಶಾಹಿಗಳ ಪ್ರಮಾದಗಳಿಂದಾಗುವ ಹಾನಿಗಳಿಗೆ ಜನ ಬೆಲೆ ತೆರಬೇಕು. ಖಾಸಗೀ ಬಸ್ ಮಾಲಕರಿಗೆ ಹಿಗ್ಗೋ ಹಿಗ್ಗು.

ನಿಜ ಸಂಗತಿಯೆಂದರೆ ಈ ಪ್ರಮಾದಗಳಿಂದ ದುರ್ಲಾಭ ಪಡೆಯಲು ಕೋಮುವಾದಿ ಶಕ್ತಿಗಳು ಅಸಮರ್ಥರಾಗಿದ್ದರೆ, ಅದಕ್ಕೆ ಅವರೀಗ ಅತ್ಯಂತ ಹತಾಶ ಸ್ಥಿತಿಯಲ್ಲಿರುವುದು, ಜತೆಗೆ ಅತ್ಯಂತ ಹೀನ ರೀತಿಯಲ್ಲಿ ಆಂತರಿಕ ಕಿತ್ತಾಟಗಳನ್ನು ಈ ಕೋಮುವಾದಿ ಶಕ್ತಿಗಳ ದುರಾಡಳಿತದಿಂದ ಮುಕ್ತರಾಗಿರುವಾಗ, ಸದ್ಯ ಭವಿಷ್ಯತ್ತಿನಲ್ಲಿ ಜನ ಅವರ ಬಲೆಗೆ ಬೀಳುವ ಸಾಧ್ಯತೆಯಿಲ್ಲ. ಈ ಕೋಮುವಾದಿ ಶಕ್ತಿಗಳ ಬಗ್ಗೆ ಅವರ ಜುಗುಪ್ಸೆ ಎಷ್ಟಿದೆಯೆಂದರೆ ಯಾವ ಪ್ರಶ್ನೆಯನ್ನೆತ್ತಿಕೊಂಡರೂ ಕೋಮುವಾದಿ ಶಕ್ತಿಗಳಿಗೆ ಪ್ರಯೋಜನ ಸಿಗುತ್ತಿಲ್ಲ. ಶಂಕರಾಚಾರ್ಯರ ಬಂಧನದ ಪ್ರಶ್ನೆಯ ಮೇಲೆ ಭಾವೋದ್ರೇಕ ಎಬ್ಬಿಸುವ ಪ್ರಯತ್ನ ವಿಫಲವಾಗಿರುವುದರು ಒಂದು ಉದಾಹರಣೆ.

ರ ಅಧಿವೇಶನದಲ್ಲಿ ಸಂಸತ್ತನ್ನು ಸ್ತಗೊಳಿಸುವ ಅವರ ಪ್ರಯತ್ನ ಅವರನ್ನು ಂದ ಮತ್ತಷ್ಟು ದೂರ ತಳ್ಳಿದೆ. ಪ್ರಸಕ್ತ ವೇಶನದಲ್ಲಿ ಅವರ ವರ್ತನೆಯಲ್ಲಿ ರೊಂದು ಜವಾಬ್ದಾರಿಯುತ ವಿರೋಧ ಂಬ ಪ್ರಶಂಸೆ ಗಳಿಸುವಲ್ಲಿ ಶೋಚನೀಯವಾಗಿ ಲವಾಗಿದೆ.

ಆದರೆ ಇದರರ್ಥ ಪ್ರಸಕ್ತ ಆಳುವ ಕೂಟ ರನ್ನು ಲೆಕ್ಕಕ್ಕೇ ತಗೊಳ್ಳದೆ ನಮ್ಮ ದೇಶದ ಜೀವಿಗಳಿಗೆ ಅನಾಹುತಗಳನ್ನೇ ತರುವ ಗಳನ್ನು ಅನುಸರಿಸುತ್ತಲೇ ಇರಬಹುದು ವೇನಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ, ಮುವಾದಿ ಶಕ್ತಿಗಳನ್ನು ದೂರವಿಡಬೇಕು ಮತ್ತು ರಿಗೆ ಹೊಸಜೀವ ನೀಡಬಾರದು ಎಂಬ

...ವಕಾಶಗಳು

ಾರ ಯುಪಿಎ ಮುಖಂಡದಲ್ಲಿದ್ದಾರೆ. ಬ್ಯಾಂಕ್-ಐಎಂಎಫ್ ನೀತಿಗಳಿಂದ ದೂರ ಯುವುದು ಅನಿವಾರ್ಯ.

ಎಡಪಕ್ಷಗಳ ಮಧ್ಯಪ್ರವೇಶ

ಇಂತಹ ಒಂದು ಸನ್ನಿವೇಶದಲ್ಲಿ ಪ್ರಸಕ್ತ ಷ್ಟ್ರೀಯ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಪಕ್ಷಗಳು ದ್ವಿವಿಧ ಕಾರ್ಯತಂತ್ರಗಳನ್ನು ಸರಿಬೇಕಾಗಿದೆ. ಒಂದೆಡೆ, ನಮ್ಮ ಆಳರಸರು -ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದರೆ ಪಕ್ಷಗಳು ಮೂಕ ಪ್ರೇಕ್ಷಕರಾಗಿರಲು ಸಾಧ್ಯವಿಲ್ಲ. ೀ ವೇಳೆಗೆ ಬಿಜೆಪಿ ಹಿಂದಿರುಗಲು ಕಾಶವಾಗುವ ಯಾವುದೇ ಕ್ರಮ ಕೈಗೊಳ್ಳಲು ್ಯವಿಲ್ಲ. ಏಕೆಂದರೆ ಸದ್ಯಕ್ಕೆ ಬಿಜೆಪಿ ಸಂಪೂರ್ಣ ಶ ಸ್ಥಿತಿಯಲ್ಲಿದ್ದರೂ, ಕರ್ಕಶ ಕೋಮುವಾದೀ ದಿಕೆಯು ಸುತ್ತ ಮತ್ತೆ ಒಂದುಗೂಡುವ ಯತ್ನವನ್ನೂ ಮಾಡುತ್ತಿದೆ.

ಈ ಎರಡು ಕೆಲಸಗಳಲ್ಲೂ ಅವುಗಳದ್ದೇ ಸ್ಯೆಗಳಿವೆ. ಉದಾಹರಣೆಗೆ, ಆರ್ಥಿಕ ನೀತಿಗಳ ಯಲ್ಲಿ ಹೆಚ್ಚಿನ ಪಕ್ಷಗಳಿಗೆ ಒಂದಿಲ್ಲೊಂದು ಟ್ಟಿದವರೆಗೆ ಐಎಂಎಫ್ - ವಿಶ್ವಬ್ಯಾಂಕ್ ತಿಗಳನ್ನು ಅನುಸರಿಸಲು ಅಭ್ಯಂತರವೇನಿಲ್ಲ. ದರೆ ಇದರರ್ಥ ಜನಗಳ ಜೀವನ ಮಟ್ಟ ಯದಂತೆ ತಡೆಯಲು ಎಡಪಕ್ಷಗಳು ಈ ಗದಲ್ಲಿ ಏಕಾಂಗಿಯಾಗಿಯೇ ಹೋರಾಡ ಕಾಗಿದೆ. ಅದೇ ರೀತಿ ಜಾತ್ಯತೀತತೆಯನ್ನು ಸುವ ಪ್ರಶ್ನೆಯಲ್ಲಿಯೂ ಈ ದೇಶದ ಜನ ಪೂರ್ಣವಾಗಿ ಜಾತ್ಯತೀತವಾಗಿದ್ದರೂ, ತ್ಯತೀತ ಪಕ್ಷಗಳು ಬಿಜೆಪಿ ಮತ್ತು ಎಸ್‌ಎಸ್ ವಿರುದ್ಧ ಒಂದು ಐಕ್ಯ ಹೋರಾಟ ಸುತ್ತಿಲ್ಲ. ಇಲ್ಲಿಯೂ ಎಡಪಕ್ಷಗಳೇ ಎಡೆಬಿಡದೆ ಪಕ್ಷಗಳನ್ನು ಜಾತ್ಯತೀತತೆ ಮತ್ತು ರಾಷ್ಟ್ರೀಯ ್ಯತೆಯ ಪ್ರಶ್ನೆಯ ಮೇಲೆ ಒಟ್ಟಿಗೆ ತ್ತಿರಬೇಕಾಗುತ್ತದೆ.

ಇಂತಹ ಒಂದು ಸನ್ನಿವೇಶದಲ್ಲಿ ಹಾಗೂ ಈ ದ್ದೇಶಗಳಿಗಾಗಿ ಎಡಪಕ್ಷಗಳು ತಮ್ಮ ಮಧ್ಯ ವೇಶವನ್ನು ಹಲವು ಪಟ್ಟು ಹೆಚ್ಚಿಸಬೇಕು. ಇಲ್ಲಿ ರಿಕೆಯ ಮಾತೊಂದು ಅಗತ್ಯ. ಮೇ 2004 ರ ಚುನಾವಣೆಗಳ ನಂತರ ಲೋಕಸಭಾದಲ್ಲಿ ಎಡಪಕ್ಷಗಳ ಬಲ ಹೆಚ್ಚಿರುವುದು ಜನಗಳ ಪ್ರಶ್ನೆಗಳ ಮೇಲೆ ಮಧ್ಯಪ್ರವೇಶಕ್ಕೆ ಹೆಚ್ಚಿನ ಅವಕಾಶ ಒದಗಿಸಿದೆ, ಇದನ್ನು ಪೂರ್ಣವಾಗಿ ಬಳಸಿಕೊಳ್ಳಬೇಕು. ಈ ರಂಗದಲ್ಲಿ ನಮ್ಮ ಕೆಲಸದಲ್ಲಿ ಕೆಲವು ಮಿತಿಗಳಿದ್ದರೂ ನಮ್ಮ ಮಧ್ಯಪ್ರವೇಶ ಕೆಲವು ಪ್ರಮುಖ ಪ್ರಶ್ನೆಗಳಲ್ಲಿ ನಿಜವಾಗಿಯೂ ಬೆಲೆ ಬೀಳುವ ಫಲಿತಾಂಶ ನೀಡಿದೆ, ಜನಗಳ ಹಿತಾಸಕ್ತಿಗಳನ್ನು ರಕ್ಷಿಸಿದೆ. ಈ ಕಾರಣಕ್ಕಾಗಿಯೇ ತಾನೇ ಬೂರ್ಜ್ವಾ ಮಾಧ್ಯಮ ನಮ್ಮ ಮೇಲೆ ದಿನ ಬೆಳಗಾದರೆ ನಮ್ಮನ್ನು ಬಯ್ಯುತ್ತಿರುವುದು. ಇಂತಹ ನಮ್ಮ ಸಂಸದೀಯ ಮಧ್ಯಪ್ರವೇಶಗಳನ್ನು ಇನ್ನಷ್ಟ ತೀವ್ರಗೊಳಿಸಬೇಕು.

ದೃಢ ಹೋರಾಟಗಳಿಂದಲೇ ಸಾಧ್ಯ

ಅದೇ ವೇಳೆಗೆ, ಸಂಸದೀಯ ಹೋರಾಟ ನಮ್ಮ ಕೆಲಸದ ಒಂದು ಸಣ್ಣ ಭಾಗವಷ್ಟೇ ಎಂಬುದೂ ನಿಜ. ಸಂಸತ್ತಿನ ಆವರಣದ ಹೊರಗೆ ಬಹಳ ದೊಡ್ಡ ಪ್ರಶ್ನೆಗಳಿವೆ, ಅಲ್ಲಿ ನಮ್ಮ ಮಧ್ಯಪ್ರವೇಶ ಅಗತ್ಯವಾಗಿದೆ. ಅಲ್ಲದೆ, ಇಂದು ಯುಪಿಎ ಆಡಳಿತ ನಮ್ಮ ಬೆಂಬಲದ ಮೇಲೆ ಬಹಳವಾಗಿ ನಿಂತಿದೆಯಾದರೂ, ಇದೇ ಸಂತೋಷದ ಸನ್ನಿವೇಶ ಸದಾ ಇರುತ್ತದೆ ಎಂಬ ಭ್ರಮೆ ನಮಗೆ ಒಳ್ಳೆಯದಲ್ಲ. ಅಷ್ಟೇ ಅಲ್ಲ, ನಮ್ಮ ಇತ್ತೀಚಿನ ಯಶಸ್ಸುಗಳನ್ನು ಕಾದುಕೊಳ್ಳಬೇಕಾದರೆ ಅದು ಹೊರಗೆ ಶ್ರಮಜೀವಿಗಳ ವಿಶಾಲ ವಿಭಾಗಗಳ ದೃಢ ಹೋರಾಟಗಳಿಲ್ಲದೆ ಸಾಧ್ಯವಿಲ್ಲ.

ಇಲ್ಲಿಯೇ ನಾವು ಎಲ್ಲೆಲ್ಲಿ ಸಾಧ್ಯವೋ ಇತರ ಪಕ್ಷಗಳೊಂದಿಗೆ ಹಾಗೂ ಶಕ್ತಿಗಳೊಂದಿಗೆ ಐಕ್ಯ ಹೋರಾಟಗಳನ್ನು ಆರಂಭಿಸಬೇಕು ಎಂಬ ಅಂಶವನ್ನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿದೆ. ಕೆಲವು ಸನ್ನಿವೇಶದಲ್ಲಿ ನಾವು ಸ್ವತಂತ್ರ ಹೋರಾಟಗಳನ್ನೂ ನಡೆಸಬೇಕಾಗುತ್ತದೆ. ನಮ್ಮ ಇತ್ತೀಚಿನ ಸಂಸದೀಯ ಯಶಸ್ಸು ಜನಗಳಲ್ಲಿ ಸಿಪಿಐ(ಎಂ) ಮತ್ತು ಇತರ ಪಕ್ಷಗಳ ಬಗ್ಗೆ ನಿರೀಕ್ಷೆಗಳನ್ನು ಇನ್ನಷ್ಟು ಹೆಚ್ಚಿಸಿರುವಾಗ ಇಂತಹ ನಿಲುವು ಇಂದು ಇನ್ನಷ್ಟು ಪ್ರಸ್ತುತವಾಗುತ್ತದೆ. ನಿರೀಕ್ಷೆಗಳು ಹೆಚ್ಚಿರುವುದು ಸ್ವಾಭಾವಿಕವೆ. ಆದರೂ ಜನಗಳು ಸಂಸದೀಯ ಭ್ರಮೆಗಳಿಗೆ ಬಲಿ ಬೀಳದಂತೆ ನಾವು ನೋಡಿಕೊಳ್ಳಬೇಕು; ಅದರ ಐಕ್ಯ ಮತ್ತು ದೃಢ ಹೋರಾಟಗಳಿಂದ ಮಾತ್ರವೇ ಆಳುವ ವರ್ಗಗಳ ಕೈಗಳಿಂದ ಅವರ ಇಚ್ಚೆಗೆ ವಿರುದ್ಧವಾಗಿ ಪರಿಹಾರಗಳನ್ನು ಪಡೆದುಕೊಳ್ಳಲು ಸಾಧ್ಯ ಎಂಬುದನ್ನು ತಾಳ್ಮೆಯಿಂದ ವಿವರಿಸಬೇಕಾಗುತ್ತದೆ.

ಹೀಗೆ, ಸನ್ನಿವೇಶ ಎಡಪಕ್ಷಗಳಿಗೆ ಸುಲಭದ್ದೇನೂ ಆಗಿರದಿದ್ದರೂ, ಅದರಲ್ಲಿ ಮುಂದಿನ ಬೆಳವಣಿಗೆಯ ಅವಕಾಶಗಳು ಖಂಡಿತವಾಗಿ ತುಂಬಿಕೊಂಡಿವೆ. ಜನಗಳ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಬೆಸೆಯಲು ಇವನ್ನು ನಾವು ಬಳಸಬೇಕು. ಇದರಲ್ಲಿ ವಿಫಲವಾದರೆ ಅದು ನಮ್ಮನ್ನು ಮೈಲಿಗಳಷ್ಟು ಹಿಂದಕ್ಕೆ ತಳ್ಳುತ್ತದೆ. ಅಂದರೆ 2005 ನೇ ವರ್ಷವನ್ನು ನಾವು ಇನ್ನಷ್ಟು ದೃಢ ಹೋರಾಟಗಳ ವರ್ಷವಾಗಿ ಮಾಡುತ್ತೇವೆ ಎಂಬ ಪಣದೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಬೇಕು.



ಬಡವರಿಗೆ ಕಡಿತ; ಶ್ರೀಮಂತರಿಗೆ ತೆರಿಗೆ ವಿನಾಯಿತಿ

ಸರಕಾರದಿಂದ ಸಬ್ಸಿಡಿ ಮಧ್ಯಾವಧಿ ಆರ್ಥಿಕ ವಿಮರ್ಶೆ

ಬಡವರು ತೀರಾ ಬಡವರಾಗುತ್ತಿರುವ ಶ್ರೀಮಂತರು ಅಗಾಧವಾಗಿ ಶ್ರೀಮಂತರಾಗುತ್ತಿರುವ ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ, ನಿಜವಾಗಿಯೂ ಅಗತ್ಯ ವಸ್ತುಗಳ ಮೇಲೆ ಸಬ್ಸಿಡಿ ದೊರಕಬೇಕಾದುದು ಬಡವರಿಗೆ. ಆದರೆ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರವಾಗಲೀ, ಇಂದಿನ ಕಾಂಗ್ರೆಸ್ ನೇತೃತ್ವದ ಸರಕಾರವಾಗಲೀ ಬಡವರು ಬಳಸುತ್ತಿರುವ ವಸ್ತುಗಳ ಮೇಲೆ ಸಬ್ಸಿಡಿ ಹಿಂತೆಗೆದುಕೊಳ್ಳುತ್ತಾ ಶ್ರೀಮಂತರಿಗೆ ವಿವಿಧ ತೆರಿಗೆಗಳಲ್ಲಿ ವಿನಾಯ್ತಿ ನೀಡುತ್ತಿವೆ.

ಇತ್ತೀಚೆಗ ಪ್ರಧಾನ ಮಂತ್ರಿಯವರು ಒಂದೆಡೆ ಮಾತನಾಡುತ್ತಾ, 'ಯಾವುದೇ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೇ ನಾವು ಸಬ್ಸಿಡಿ ನೀಡುತ್ತಿದ್ದೇವೆ. ತೀರಾ ಅಗತ್ಯವಿರುವ ಜನರಿಗೆ ಮಾತ್ರ ಸಬ್ಸಿಡಿ ನೀಡಬೇಕು.:' ಎಂದು ಹೇಳಿದ್ದು ವರದಿಯಾಗಿದೆ. ಪ್ರಧಾನ ಮಂತ್ರಿಯವರು 'ತೀರ ಅಗತ್ಯ ಇರುವವರಿಗೆ ಮಾತ್ರ ಸಬ್ಸಿಡಿ ನೀಡಬೇಕೆಂದು ಹೇಳಿದರೂ, 'ರಾಜಕೀಯ' ಪರಿಸ್ಥಿತಿಯನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿರುವ ಔಚಿತ್ಯವೇನು? ಬಹುಶಃ ಚುನಾವಣಾ ಪೂರ್ವದಲ್ಲಿ ವಿವಿಧ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರಗಳು ಘೋಷಿಸುತ್ತಿರುವ, 'ರೈತರಿಗೆ ಉಚಿತ ವಿದ್ಯುತ್' ಇತ್ಯಾದಿ ಅವರ ಗಮನದಲ್ಲಿರಬೇಕು. ಅದಕ್ಕಾಗಿಯೂ ರಾಜಕೀಯ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.



ಈ ಸಂದರ್ಭದಲ್ಲಿ ಹೆಸರಾಂತ ಆರ್ಥಿಕ ತಜ್ಞರೊಬ್ಬರು ಹೇಳಿದ ಮಾತು ನೆನಪಿಗೆ ಬರುತ್ತದೆ. 'ಬಡವರಿಗೆ ಅಗತ್ಯವಿರುವಷ್ಟು ಕೊಡಬೇಕೆಂದಾದಲ್ಲಿ, ಶ್ರೀಮಂತರಿಗೆ ಅಗತ್ಯರಿವುದಕ್ಕಿಂತ ಜಾಸ್ತಿ ನೀಡಬೇಕಾಗುತ್ತದೆ'. ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಈ ಮಾತು ನೂರಕ್ಕೆ ನೂರು ಸತ್ಯ. ಮತ್ತು ಇಂದಿನ ಕಾಂಗ್ರೆಸ್ಸಿಗಾಗಲೀ ಅಥವಾ ಬಿಜೆಪಿಗಾಗಲೀ ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವ ಯಾವುದೇ ಕಾರ್ಯಕ್ರಮ ಇಲ್ಲ.


ನಮ್ಮ ದೇಶದಲ್ಲಿ ಬಡವರಿಗೆ ಬೇಕಾದ ಕಾರ್ಯಕ್ರಮಗಳನ್ನು ಸರಕಾರಗಳು ಹಮ್ಮಿಕೊಂಡಾಗ, ಒಂದು ಸಣ್ಣ ಭಾಗ ಮಾತ್ರ ಅಗತ್ಯವಿರುವವರಿಗೆ ತಲುಪುತ್ತದೆ. ಹೆಚ್ಚಿನ ಪಾಲು ಮಧ್ಯವರ್ತಿಗಳ ಪಾಲಾಗುತ್ತದೆ. ಮಾಜಿ ಪ್ರಧಾನಿ ರಾಜೀವ ಗಾಂಧಿಯವರು ಹೇಳುವ ಪ್ರಕಾರ ಕೇವಲ ಶೇ.15ರಷ್ಟು ಮಾತ್ರ ಸರಕಾರದ ಯೋಜನೆಗಳು ನಿಜವಾದ ಬಡವರನ್ನು ತಲುಪುತ್ತಿದೆ. ಇದು ಬಹುತೇಕ ನಿಜವಾದರೂ, ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳುವುದರ ಬದಲಾಗಿ, ಈ ಯೋಜನೆಗಳು ಹೇಗ ಬಡವರ್ನು ತಲುಪುವಂತೆ ಮಾಡಬಹುದು ಎಂಬ ಬಗ್ಗೆ ಸೂಕ್ತ ಕ್ರಮವಹಿಸಬೇಕು. ಬದಲಾಗಿ ಸಬ್ಸಿಡಿಯನ್ನೇ ಕಡಿತ ಮಾಡುವುದು ವಿಪರ್ಯಾಸ.

ನಮ್ಮಲ್ಲಿ ಎರಡು ತರಹದ ಸಬ್ಸಿಡಿಗಳಿವೆ. ಒಂದು, ಬಡವರಿಗೆ ನೇರವಾಗಿ ನೀಡುವುದು, ಇನ್ನೊಂದು ಶ್ರೀಮಂತರಿಗೆ ರಿಯಾಯಿತಿ ರೂಪದಲ್ಲಿ ನೀಡುವುದು. ಬಡವರಿಗೆ ನೀಡುವ ಸಬ್ಸಿಡಿಯನ್ನು ಹೊರೆ ಎಂದು ಭಾವಿಸಲಾಗುತ್ತದೆ. ಆದರೆ, ಶ್ರೀಮಂತರಿಗೆ ನೀಡುವ ರಿಯಾಯಿತಿಯನ್ನು ಸರಕಾರದ ಬೊಕ್ಕಸಕ್ಕೆ ಹೊರೆ ಎಂದು ಭಾವಿಸಲಾಗುತ್ತಿಲ್ಲ. ಬದಲಾಗಿ ಅದು ಆರ್ಥಿಕ ಅಭಿವೃದ್ಧಿಗೆ ಅವಶ್ಯ ಎಂಬಂತೆ 'ಲೋನು' ಕೊಡಲಾಗುತ್ತಿದೆ.

ಕೇಂದ್ರ ಹಣಕಾಸು ಸಚಿವಾಲಯವು ಮಧ್ಯಾವಧಿ ಆರ್ಥಿಕ ವಿಮರ್ಶೆಯನ್ನು ಸಂಸತ್ತಿನಲ್ಲಿ ಮಂಡಿಸುವ ಸಂದರ್ಭದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿದ್ದರೂ, ಹಣಕಾಸು ಕೊರತೆ ಇರುವುದನ್ನು ಗಮನಿಸಿತು. ಆದರೆ ಈ ಕೊರತೆಯನ್ನು ತುಂಬಲು ಸರಕಾರದ ಆದಾಯವನ್ನು ಹೆಚ್ಚಿಸುವ ಬದಲಾಗಿ, ಸಬ್ಸಿಡಿ ಕಡಿತ ಮಾಡುವ ಸೂಚನೆಯನ್ನು ನೀಡುತ್ತಿದೆ.

ಇದೇ ಕಾರಣವನ್ನು ಮುಂದೆ ಮಾಡಿ, ಸಾಮಾನ್ಯ ಕನಿಷ್ಟ ಕಾರ್ಯಕ್ರಮ (ಸಿ.ಎಂ.ಪಿ.)ರಲ್ಲಿರುವ ಉದ್ಯೋಗ ಖಾತರಿ ಯೋಜನೆ, ಕೂಲಿಗಾಗಿ ಕಾಳು, ಮೊದಲಾದ ಯೋಜನೆಗಳನ್ನು ಕಡೆಗೊಳಿಸಲಾಗುತ್ತಿದೆ. ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಸಂಸತ್ತಿನಲ್ಲಿ ಮಂಡಿಸ ಬಯಸಿದ್ದರೂ, ಹಲವಾರು ಅಂಶಗಳನ್ನು ಕೈಬಿಡಲಾಗಿದೆ. ವಿವಿಧ ಹಂತಗಳಲ್ಲಿ ಚರ್ಚೆ ನಡೆಯುವಷ್ಟರಲ್ಲಿ 1 ವರ್ಷ ಕಳೆದೇ ಹೋಗುತ್ತದೆ. ಅಂದರೆ, ಈ ಸರಕಾರದ ಐದು ವರ್ಷಗಳ ಅವಧಿಯಲ್ಲಿ, 1/5 ಭಾಗ ಉಳಿತಾಯ ಮಾಡಿದಂತಾಯ್ತು! ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಬಡ ಜನರ ಪರವಾದ ಅಂಶಗಳ ಬಗ್ಗೆ ಈ ರೀತಿಯ ತಾತ್ಸಾರ ಭಾವನೆ ಸರಿಯಲ್ಲ.

ಹಣದುಬ್ಬರದ ಕುರಿತು ಸಂಸತ್ತಿನಲ್ಲಿ ಮಾತನಾಡುವಾಗ, ಹಣಕಾಸು ಸಚಿವರು, 'ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಸರಕಾರ ಮತ್ತು ತೈಲ ಕಂಪನಿಗಳು ಈಗಾಗಲೇ 25,000 ಕೋಟಿ ರೂಪಾಯಿಯ ಹೊರೆಯನ್ನು ಹೊತ್ತಿದೆ' ಎಂದು ಹೇಳಿದ್ದಾರೆ. ಅವರ ಲೆಕ್ಕದ ಪ್ರಕಾರ ಈ ಹೊರೆ, ತೈಲ ಉತ್ಪನ್ನಗಳ ಮೇಲಿನ ಆಮದು ಮತ್ತು ಅಬಕಾರಿ ತೆರಿಗೆಗಳನ್ನು ಕಡಿತ ಮಾಡಿರುವುದರಿಂದ ಆಗಿದೆ. ಕೂಲಂಕುಷವಾಗಿ ಪರಿಶೀಲಿಸಿದರೆ, ತೆರಿಗೆ ಕಡಿತದಿಂದ ಕೇಂದ್ರ ಸರಕಾರಕ್ಕೆ ನಷ್ಟವೇನೂ ಆಗಿಲ್ಲ. ಏಕೆಂದರೆ, ಶೇಕಡಾ 20ರ ತೆರಿಗೆ ನಿರ್ಧಾರವಾಗಿದ್ದು, ತೈಲ ಉತ್ಪನ್ನಗಳ ಬೆಲೆ ಕಡಿಮೆ ಇರುವಾಗ, ಉದಾಹರಣೆಗೆ ತೈಲ ಬೆಲೆ ರೂ.100 ಇರುವ 20 ಶೇಕಡಾ ತೆರಿಗೆ ಎಂದರೆ, ಸರಕಾರಕ್ಕೆ 20 ರೂ. ಸಿಗುತ್ತದೆ. ತೈಲ ಬೆಲೆ 20 ರೂ. ಆದಾಗ? ಸರಕಾರಕ್ಕೆ ಶೇ.20ರ ಪ್ರಕಾರ 40 ರೂ. ಸಿಗುತ್ತದೆ. ಅಂದರೆ ಪ್ರತಿ ಬಾರಿ ಬೆಲೆ ಏರಿಕೆ ಆದಾಗಲೂ ಸರಕಾರಕ್ಕೆ ತೆರಿಗೆ ರೂಪದಲ್ಲಿ ಸಿಗುತ್ತಿದ್ದ ಹಣ ಹೆಚ್ಚಾಗಿದೆ. ಆದ್ದರಿಂದ ತೆರಿಗೆಯನ್ನು ಶೇ.10ಕ್ಕೆ ಇಳಿಸಿದುದರಿಂದ ನಷ್ಟವೇನೂ ಆಗಿಲ್ಲ. ಅಂದರೆ ತೈಲ ಬೆಲೆ 200 ರೂ. ಆದಾಗ, ತೆರಿಗೆಯನ್ನು ಶೇ.10ಕ್ಕೆ ಇಳಿಸಿರುವುದರಿಂದ, ಸರಕಾರಕ್ಕೆ ಮೊದಲು ಸಿಗುತ್ತಿದ್ದ 20 ರೂ. ಸಿಗುತ್ತದೆ (ರೂ.100 ಬೆಲೆ ಇರುವಾಗ ಶೇ.20ರ ದರದಂತೆ). ಆದ್ದರಿಂದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಕಡಿತ ಮಾಡಿರುವುದರಿಂದ ಕೇಂದ್ರ ಸರಕಾರಕ್ಕೆ ಯಾವುದೇ ನಷ್ಟವಾಗಿಲ್ಲ.



ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಪೆಟ್ರೋಲಿಯಂ ಉತ್ಪನ್ನ ತೀರಾ ಅಗತ್ಯ ವಸ್ತುಗಳ ಸಾಲಿಗೆ ಸೇರುತ್ತದೆ. ಇದರ ಮೇಲೆ ದೇಶದ ಆರ್ಥಿಕತೆಯೂ ಹೊಂದಿಕೊಂಡಿದೆ.


ಅಮೇರಿಕಾವು ಸೇರಿದಂತೆ ಹಲವಾರು ದೇಶಗಳಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಆಮದಿನ ಮೇಲೆ ಯಾವುದೇ ತೆರಿಗೆಯನ್ನು ವಿಧಿಸುತ್ತಿಲ್ಲ. ನಮ್ಮ ದೇಶದಲ್ಲೂ ಕೂಡಾ ಆಡಳಿತಾತ್ಮಕ ಬೆಲೆಯನ್ನು ನಿಗದಿ ಪಡಿಸುವಾಗ, ಆಮದು ಶುಲ್ಕವನ್ನು ಕಡಿಮೆ ಮಾಡುವುದಾಗಿಯೂ ಅದನ್ನು ಶೇಕಡಾ 0 (ಸೊನ್ನೆ)ಯಿಂದ 5ರ ನಡುವೆ ಇಡುವುದಾಗಿಯೂ ಆಶ್ವಾಸನೆ ನೀಡಲಾಗಿತ್ತು. ಆದರೆ ಅದನ್ನು ಉಳಿಸಿಕೊಳ್ಳಲಿಲ್ಲ.

ಈಗ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿರುವ ಯೋಜನೆಗಳಿಗೆ ಹಣ ಸಾಕಾಗುವುದಿಲ್ಲ ಎಂದು ವಾದಿಸಲಾಗುತ್ತಿದೆ. ಆದರೆ ಹಣಕಾಸು ಸಚಿವರು ಹೇಳಿದಂತೆ 1 ಲಕ್ಷ ಕೂಟಿ ರೂ. (100,000 ಕೋಟಿ ರೂ.) ತೆರಿಗೆ ಬಾಕಿಗಳ ಮೂಲಕ ಈ ದೇಶದ ಶ್ರೀಮಂತರಿಂದ ಬರಬೇಕಾಗಿದೆ. ವಿವಿಧ ಬ್ಯಾಂಕುಗಳಿಗೆ ಕೆಟ್ಟ ಸಾಲ (ಎನ್.ಪಿ.ಎ.) ಹೆಸರಿನಲ್ಲಿ ಇನ್ನೊಂದು ಲಕ್ಷ ಕೋಟಿ ರೂ. ಗಳಿಗಿಂತಲೂ ಹೆಚ್ಚಿಗೆ ಹಣ ಬರಬೇಕಾಗಿದೆ. ಈ ಎರಡು ಬಾಬತ್ತಿನ ಹಣದಲ್ಲಿ ಒಟ್ಟು 2 ಲಕ್ಷ ಕೋಟಿ ರೂ. ಈ ದೇಶದ ಶ್ರೀಮಂತರಿಂದ ಸರಕಾರದ ಖಜಾನೆಗೆ ಬರಬೇಕಾಗಿದ್ದು. ಈ ಹಣ ಬಂದಲ್ಲಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿರುವ ಎಲ್ಲ ಅಂಶಗಳನ್ನು ಯಾವುದೇ ಸಾಲ ಮಾಡದೆ ಜ್ಯಾರಿ ಮಾಡಲು ಸಾಧ್ಯವಿದೆ.

ಆದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು ಅಷ್ಟೆ. ಆದರೆ ಕಾಂಗ್ರೆಸ್ ಸರಕಾರವೂ ಕೂಡಾ, ಹಿಂದಿನ ಬಿಜೆಪಿ ನೇತೃತ್ವದ ಸರಕಾರದಂತೆ, ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಿಪಡಿಸುತ್ತಿಲ್ಲ.

ಈ ನಿಟ್ಟಿನಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳು, ಸಂಸತ್ತಿನ ಒಳಗೂ, ಹೊರಗೂ ಸಾಕಷ್ಟು ಒತ್ತಡವನ್ನು ತರುತ್ತಿವೆ. ಇದಕ್ಕೆ ಬೆಂಬಲವಾಗಿ ಅಗಾಧವಾದ ಜನ ಸಮೂಹದ ಚಳುವಳಿ ಮೇಲೆದ್ದು ಬರಬೇಕು. ಆಗ ಮಾತ್ರವೇ ಆಳುವ ಸರಕಾರಗಳು ತಮ್ಮ ನೀತಿಗಳನ್ನು ಬದಲಿಸಲು ಸಾಧ್ಯ.

ಬಿ.ಶೆಟ್ಟಿ



ಶಂಕರಾಚಾರ್ಯರ ಬಂಧನ ಮತ್ತು ಕಾನೂನು ಜಾರಿ

ಹುಸಿ ಹಿಂದು ವಕ್ತಾರರ ಹುಯಿಲು

ನಾಗರೀಕ ಸಮಾಜದ ಅತಿ ಪ್ರಮುಖ ಅಂಶವೆಂದರೆ ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬರು ಸಮಾನರು ಎಂಬುದು. ಸಮಾನತೆಯೇ ಅದರ ಬುನಾದಿ. ಅಸಮಾನತೆಯ ಪ್ರತಿಪಾದಕರು ಸದಾ ಅದರ ವಿರುದ್ಧ ಕಾರ್ಯಾಚರಿಸುತ್ತಿರುತ್ತಾರೆ. ಇಂತಹ ಕಾರ್ಯಾಚರಣೆಯ ಭಾಗವಾಗಿಯೇ ಕಂಚಿಶ್ರೀಗಳ ಬಂಧನದ ವಿಷಯವನ್ನು ಕೋಮುವಾದೀಕರಿಸಿ, ಜನತೆಯ ಭಾವನೆ ಕೆರಳಿಸಲು ಹುಸಿ ಹಿಂದುವಾದಿಗಳು ಯತ್ನಿಸುತ್ತಿದ್ದಾರೆ. ಭಾರತದ ಜನತೆ ಜಾತ್ಯತೀತ-ಪ್ರಜಾಸತ್ತಾತ್ಮಕ ಹಾಗೂ ಸಮಾನತೆಯ ಮನಸ್ಸುಳ್ಳವರಾದ ಕಾರಣ ಹುಸಿ ಹಿಂದುವಾದಿಗಳ ಕರೆಗೆ ಓಗೊಟ್ಟಿಲ್ಲ....

ಕೆ.ಎನ್.ಉಮೇಶ್

ಭಾರತ ಹಾಗೂ ಇತರೆ ರಾಷ್ಟ್ರಗಳಲ್ಲಿ ಲಕ್ಷಾಂತರ ಹಿಂದು ಮಠಗಳಿವೆ. ಈ ಮಠಗಳ ಮಠಾಧಿಪತಿಗಳೆಂದರೆ ಲೋಕಕಲ್ಯಾಣಕ್ಕಾಗಿ ಸರ್ವ ಸಂಗ ಪರಿತ್ಯಾಗ ಮಾಡಿದವರು, ನಿತ್ಯ ಪೂಜೆ-ಪ್ರವಚನ ನಿರತರು, ಆಶೀರ್ವಚನ ನೀಡುವವರು, ಸಕಲ ಜೀವಕೋಟಿಯ ಹಿತ ಬಯಸುವವರು, ದೈವೀಸಂಭೂತರು ಎಂಬುದು ಭಕ್ತರ ನಂಬಿಕೆ. ವರ್ಣಾಧಾರಿತ ಹಿಂದು ಧರ್ಮದಲ್ಲಿ ಶಂಕರಮಠ- 'ಶಂಕರಾಚಾರ್ಯರು ಎಂದರೆ ಅದಕ್ಕೆ ತನ್ನದೇ ಆದ ಸ್ಥಾನ-ಮಾನ ಪರಂಪರೆ, ಗೌರವ-ಘನತೆ ಇದೆ. 2500 ವರ್ಷಗಳ ಇತಿಹಾಸ ಕಂಚಿ ಕಾಮಕೋಟಿ ಶಂಕರ ಮಠಕ್ಕಿದೆ. ಶಂಕರಾಚಾರ್ಯರಾದ ಜಯೇಂದ್ರ ಸರಸ್ವತಿಯವರ ಬಂಧನ ಎಂದರೆ ಹಿಂದುಗಳಿಗೆ ಮಾಡಿದ ಅವಮಾನ- ಹಿಂದುಗಳ ಭಾವನೆಯನ್ನು ಘಾಸಿಗೊಳಿಸಿದೆ. ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು, ಗೃಹಬಂಧನದಲ್ಲಿಡಬೇಕು. ಅಷ್ಟೇ ಸಾಲದೆಂಬಂತೆ ಎಲ್ಲಾ ಮಠಾಧೀಶರು ಧರ್ಮಗುರುಗಳನ್ನು ಭಾರತದ ಕಾನೂನು ವ್ಯಾಪ್ತಿಯಿಂದ ಹೊರಗುಳಿಸಲು ಕಾಯ್ದೆ ರೂಪಿಸಬೇಕು' ಎಂಬಿತ್ಯಾದಿ ಆಗ್ರಹಗಳನ್ನು ಮಾಡುತ್ತ ಸಮಸ್ತ ಹಿಂದುಗಳನ್ನು ಗುತ್ತಿಗೆ ಪಡೆದವರಂತೆ, 'ಹಿಂದುತ್ವ'ದ ಪ್ರತಿಪಾದಕರಾದ ಸಂಘಪರಿವಾರದ ವಿಶ್ವಹಿಂದು ಪರಿಷತ್, ಆರ್.ಎಸ್.ಎಸ್ ಬಜರಂಗದಳ, ಎಬಿವಿಪಿ, ಬಿಜೆಪಿ ಮತ್ತದರ ಸಂಬಂಧಿತ ಸ್ವಾಮಿಗಳು ಹಾಗೂ ಇತರೆ ಕೆಲವು ಸ್ವಾಮಿಗಳು, ಶಕ್ತಿಗಳು- ವ್ಯಕ್ತಿಗಳು ದೇಶದ ಕೆಲವೆಡೆ ಪ್ರತಿಭಟನೆ, ಸಭೆ, ನಿರಶನ ಮಾಡಿದ್ದಾರೆ. ಭಾರತ ಬಂದ್‌ಗೂ ಕರೆ ನೀಡಿ, ನಿರೀಕ್ಷಿತ ಪ್ರತಿಕ್ರಿಯೆ ದೊರಕದ ಕಾರಣ ಚಡಪಡಿಸುತ್ತಿದ್ದಾರೆ. ಮಾಜಿ ಪ್ರಧಾನಿಗಳಿಬ್ಬರು, ಮಾಜಿ ರಾಷ್ಟ್ರಪತಿ ಓರ್ವರು ಮತ್ತಿತರೆ ಹಿರಿ-ಕಿರಿ ನಾಯಕಮಣಿಗಳು ದೆಹಲಿಯಲ್ಲಿ ಉಪವಾಸ ಸತ್ಯಾಗ್ರಹವನ್ನು ನಡೆಸಿದ್ದಾರೆ.

ವಿತಂಡ ವಾದಗಳು

ಶಂಕರಾಚಾರ್ಯ ಜಯೇಂದ್ರ ಸರಸ್ವತಿಯವರನ್ನು ನವೆಂಬರ್ 11'ರ ರಾತ್ರಿ ತಮಿಳುನಾಡಿನ ಪೊಲೀಸರು ಆಂಧ್ರ ಪ್ರದೇಶದ ಮೆಹಬೂಬ್ ನಗರದಲ್ಲಿ ಬಂಧಿಸಿ, ಜೈಲಿಗೆ ಕಳುಹಿಸಿರುವುದನ್ನು ಪ್ರಶ್ನಿಸಿ ಇಂತಹ ವಾದವನ್ನು ಸಂಘಪರಿವಾರ ಮಂಡಿಸುತ್ತಿದೆ.

ಇದೇ ಹುಸಿ ಹಿಂದೂವಾದಿಗಳು ಹಿಂದೆ ಭಾವನೆಗಳ ವಿಷಯವನ್ನು ನ್ಯಾಯಾಲಯ ಇತ್ಯರ್ಥಪಡಿಸಲಾಗದು, ಅದನ್ನು ನಾವು ಒಪ್ಪುವುದಿಲ್ಲ ಎಂಬ ವಿತಂಡ ವಾದ ಮಾಡುತ್ತಲೇ ಅಯೋಧ್ಯೆಯ ಬಾಬ್ರಿ ಮಸೀದಿಯನ್ನು ಕೆಡವಿ ಹಾಕಿದವರು. ರಾಮ ಮಂದಿರ ನಿರ್ಮಾಣಕ್ಕಾಗಿ ರಥಯಾತ್ರೆ ನೆಪದಲ್ಲಿ ದೇಶದುದ್ದಕ್ಕೂ ಕೋಮು ಕಿಚ್ಚನ್ನು ಹಚ್ಚಿದವರು. ಅಂತೆಯೇ ರಾಜ್ಯದಲ್ಲೂ ಸಹಾ ಬಾಬಾಬುಡನ್‌ಗಿರಿ- ದತ್ತಪೀಠ, ರಾಷ್ಟ್ರಧ್ವಜ ಮುಂತಾದ ಭಾವನಾತ್ಮಕ ವಿಚಾರಗಳನ್ನು ಎತ್ತಿ ಸುಳ್ಳನ್ನು - ಸತ್ಯ ಮಾಡುವ ಕೃತ್ಯದಲ್ಲಿ ನಿರತರಾಗಿರುವವರು. ವಿಷಯವೇ ಅಲ್ಲದ ಸಿಕ್ಕ ಸಣ್ಣಪುಟ್ಟ ವಿಷಯವನ್ನು ಎತ್ತಿಕೊಂಡು ಎಲ್ಲೆಡೆ ಕೋಮುವಾದ ಬಿತ್ತರಿಸುತ್ತಾ ಹಿಂದುಗಳನ್ನು ಮುಸ್ಲಿಂರ ಮೇಲೆ ಎತ್ತಿಕಟ್ಟುವ ನಿತ್ಯ ಪಿತೂರಿಯಲ್ಲಿ ನಿರತರಾಗಿದ್ದಾರೆ.

ಹಿಂದು ಎಂದರೆ ಯಾರು?

ಹಾಗಾಗಿಯೇ ಕಂಚಿ ಶಂಕರಮಠದ ಅನುಯಾಯಿ ಹಿಂದಿನ ಪರಮಾಚಾರ್ಯ ಚಂದ್ರಶೇಖರ್ ಸ್ವಾಮಿಗಳ ಅನುಯಾಯಿ ವರದರಾಜ ಪೆರುಮಾಳ ದೇವಸ್ಥಾನದ ವ್ಯವಸ್ಥಾಪಕರಾಗಿದ್ದ ಶಂಕರರಾಮನ್ 2004 ಸೆಪ್ಟೆಂಬರ್ 3 ರಂದು ದೇವಸ್ಥಾನದ ಆವರಣದಲ್ಲೇ ಬರ್ಬರವಾಗಿ ಕೊಲೆಯಾದಾಗ ಚಕಾರವೆತ್ತದ ಈ ಹುಸಿ ಹಿಂದು ಪ್ರತಿಪಾದಕರು, ಅವರ ಕೊಲೆಗೆ ಉತ್ತೇಜನ ನೀಡಿದ, ಕ್ರಿಮಿನಲ್ ಪಿತೂರಿ ನಡೆಸಿದ, ಸಾಕ್ಷಿಗಳನ್ನು ನಾಶಮಾಡಲು ಯತ್ನಿಸಿದ, ಆರೋಪಿಗಳನ್ನು ರಕ್ಷಿಸಲು ಇತರರನ್ನು ಆರೋಪಿಗಳನ್ನಾಗಿಸಲು ಪ್ರೇರೇಪಿಸಿದ ಅಪರಾಧಗಳ ಆರೋಪದ ಮೇಲೆ ಕಂಚಿಶ್ರೀಗಳನ್ನು ಬಂಧಿಸಿದ ವಿಷಯವನ್ನೇ ಬಂಡವಾಳ ಮಾಡಿಕೊಂಡು ಕೋಮು ಭಾವನೆ ಕೆರಳಿಸಲು ಮುಂದಾಗಿದ್ದಾರೆ. ಅವರ ಲೆಕ್ಕದಲ್ಲಿ ಬಡಪಾಯಿ ಶಂಕರರಾಮನ್ ಹಿಂದುವಲ್ಲ!

ದೀಪಾವಳಿ ಹಬ್ಬದಂದು ಬಂಧಿಸಿದ್ದೀರಿ, ಇತರೆ ಧರ್ಮದ ಮುಖಂಡರನ್ನು ಅವರ ಹಬ್ಬಗಳ ದಿನದಂದು ಬಂಧಿಸುತ್ತಿದ್ದೀರಾ? ರಾಜಕಾರಣಿಗಳನ್ನಾದರೆ ಗೃಹಬಂಧನದಲ್ಲಿ ಇಡುತ್ತೀರಿ, ಶಂಕರಾಚಾರ್ಯರನ್ನೇಕೆ ಜೈಲಿನಲ್ಲಿಟ್ಟಿದ್ದೀರಿ? ಎಂಬ ಪ್ರಶ್ನೆಗಳಲ್ಲದ ಪ್ರಶ್ನೆಗಳನ್ನು ಮುಂದೆ ಮಾಡುತ್ತಾ ಹುಯಿಲೆಬ್ಬಿಸುತ್ತಿದ್ದಾರೆ.

ಭಾರತದ ಅಪರಾಧ ಕಾನೂನಿನ ಪ್ರಕಾರ ಅಪರಾಧದ ಆರೋಪಕ್ಕೆ ಒಳಗಾದ ಎಲ್ಲರೂ ಸಮಾನರು. ಅವರು ಯಾವುದೇ ಸ್ಥಾನದಲ್ಲಿರಲಿ, ಎಷ್ಟೇ ಉನ್ನತ ವ್ಯಕ್ತಿಯಾಗಿರಲಿ ಅವರೆಲ್ಲಾ ಭಾರತೀಯ ದಂಡ ಸಂಹಿತೆ (IPC), ದಂಡ ಪ್ರಕ್ರಿಯಾ ಸಂಹಿತೆ(GPC) ಅಡಿಯಲ್ಲಿ ಸಮಾನರು. ಅದರಂತೆ ಕಂಚಿಶ್ರೀಗಳ ಮೇಲಿನ ಆರೋಪಗಳು ಗುರುತರವಾಗಿರುವ ಕಾರಣ, ಮೇಲ್ನೋಟಕ್ಕೆ ಅಪರಾಧ ಸಾಬೀತಾಗುವ ಸಾಧ್ಯತೆ ಹೆಚ್ಚಿರುವ ಕಾರಣ, ಸಾಕ್ಷ್ಯಗಳನ್ನು ನಾಶ ಪಡಿಸುವ ಸಾಧ್ಯತೆ ಇಲ್ಲ ಎನ್ನಲಾಗದ ಕಾರಣ ಬಂಧಿಸಿ ತಿಂಗಳಾದರೂ ಪ್ರಧಾನ ಸೆಷನ್ಸ್ ನ್ಯಾಯಾಲಯ ಜಾಮೀನು ನೀಡಿಲ್ಲ, ಅಂತೆಯೇ ಚೆನ್ನೈ ಹೈಕೋರ್ಟ್ ಜಾಮೀನು ನಿರಾಕರಿಸಿದೆ. ಸುಪ್ರಿಂ ಕೋರ್ಟ್‌ನಲ್ಲಿ ಕಂಚಿಶ್ರೀಗಳ ಸ್ವಯಂಘೋಷಿತ ವಕೀಲರೊಬ್ಬರು ಆರೋಪಿಯ ಸಹಿ ಪಡೆಯದೇ ಜಾಮೀನು ಅರ್ಜಿ ಸಲ್ಲಿಸಿದ ಕಾರಣ, ಸಹಿ ಪಡೆದು ಅರ್ಜಿ ಸಲ್ಲಿಸಲು ಸುಪ್ರಿಂಕೋರ್ಟ್ ಮುಖ್ಯ ನ್ಯಾಯಾಧೀಶರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು ವಕೀಲರಿಗೆ 10 ದಿನಗಳ ಗಡುವು ನೀಡಿದೆ. ಈ ನಡುವೆ ಪತ್ರಕರ್ತೆಯೋರ್ವಳೊಂದಿಗೆ ಅನುಚಿತ ವರ್ತನೆ, ಉಷಾ ಎಂಬುವರೊಂದಿಗೆ ಅನೈತಿಕ ಸಂಬಂಧ, ಮತ್ತೋರ್ವ ಮಠದ ಭಕ್ತ ರಾಧಾಕೃಷ್ಣನ್ ಮತ್ತವರ ಪತ್ನಿಯ ಮೇಲೆ ಮಾರಣಾಂತಿಕ ಹಲ್ಲೆ, ಮಠದ ವಿದ್ಯಾರ್ಥಿನಿಯರ ವಸತಿ ನಿಲಯದ ಅಪ್ರಾಪ್ತ ವಿದ್ಯಾರ್ಥಿನಿಯ ಅಸಹಜ ಸಾವು ಮುಂತಾದ ಆರೋಪಗಳ ವರದಿಗಳು ಬರಲಾರಂಭಿಸಿವೆ.

ಇಂತಹ ಅಪರಾಧದ ಆರೋಪ ಹೊತ್ತು ಸಾಕ್ಷಿ ಪುರಾವೆಗಳು ಆರೋಪವನ್ನು ಸಾಬೀತು ಪಡಿಸುವಷ್ಟು ಪ್ರಬಲವಾಗಿರುವಾಗ, ಬಂಧನದಲ್ಲೇ ಒಂದು ತಿಂಗಳು ಕಳೆದಿದ್ದರೂ ಸಹಾ ಪೀಠ ತ್ಯಜಿಸಲು ತಯಾರಿಲ್ಲದ ಕಂಚಿಶ್ರೀಗಳನ್ನು ಗೃಹ ಬಂಧನದಲ್ಲಿ ಇಡಬೇಕೆಂದರೆ, ಅದಕ್ಕೆಂದೇ ವಿಶೇಷ ತಿದ್ದುಪಡಿಯನ್ನು ದಂಡ ಪ್ರಕ್ರಿಯಾ ಸಂಹಿತೆಗೆ (CPC) ತರಬೇಕಾಗುತ್ತದೆ. ಭ್ರಷ್ಟಾಚಾರವೋ ಅಥವಾ ದೊಂಬಿ ಅಪರಾಧದ ಆರೋಪಗಳನ್ನೋ ಎದುರಿಸು ತ್ತಿರು ವವರನ್ನು ಗೃಹಬಂಧನದಲ್ಲಿಟ್ಟಿರುವ ನಿದರ್ಶನಗಳಿವೆ. ಆದರೆ ಕೊಲೆ, ಕ್ರಿಮಿನಲ್ ಪಿತೂರಿ, ತತ್ಸಂಬಂಧಿತ ಸಾಕ್ಷಿ ನಾಶದ ಅಪರಾಧದ ಆರೋಪಿಗಳನ್ನು ಗೃಹಬಂಧನದಲ್ಲಿರಿಸಿ ಸತ್ಕರಿಸಿರುವ ಕಾರ್ಯವನ್ನಂತೂ ಇದುವರೆಗೆ ಭಾರತದ ನ್ಯಾಯಾಲಯಗಳು ಮಾಡಿಲ್ಲ. ಹಾಗಾಗಿ ಗೃಹಬಂಧನದಲ್ಲಿರಿಸಬೇಕಿತ್ತು ಎಂಬ ವಾದ ವಿತಂಡವಾದವೇ ಸರಿ. ಜೈಲಿನಲ್ಲೇ ಅವರ ಧಾರ್ಮಿಕ ವಿಧಿ-ವಿಧಾನಗಳಿಗೆ, ಮಡಿ ಮುಂತಾದ ಆಚರಣೆಗಳಿಗೆ, ಆರೋಗ್ಯ ತಪಾಸಣೆ 4 ಜನ ತಜ್ಞ ವೈದ್ಯರ ತಂಡ ಎಲ್ಲವನ್ನು ಒದಗಿಸಲಾಗಿರುವಾಗ ಗೃಹಬಂಧನ ಏಕೆ? ಎಂಬುದೇ ನ್ಯಾಯಾಲಯದ ಪ್ರತಿಕ್ರಿಯೆ.

ಮುಸ್ಲಿಂರ ಮೇಲೆ ಕಣ್ಣಿರಿಸಿ ಇಡೀ ದೇಶಕ್ಕೆಲ್ಲಾ ಸಮಾನ ನಾಗರೀಕ ಸಂಹಿತೆಗೆ ಒತ್ತಾಯಿಸುವ, ಅದರ ಹೆಸರಿನಲ್ಲೇ ರಾಜಕೀಯ ಮಾಡುವ ಸಂಘ ಪರಿವಾರದವರಿಗೆ ಈ ದೇಶದ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವ ಭಾರತ ದಂಡ ಸಂಹಿತೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆ ಸಹ್ಯವಲ್ಲ ಎನ್ನುವುದರ ಹಿಂದೆ ಇರುವ ಮರ್ಮ ಎಂದರೆ "ಅಸಮಾನತೆಯನ್ನೇ ಮೈವೆತ್ತ ಹಿಂದುಧರ್ಮದ ವರ್ಣಾಶ್ರಮ ಧರ್ಮ" ಅವರ ಚಿಂತನೆಯ ಆಧಾರವಾಗಿರುವುದು. ಅವರು ಎತ್ತುವ ಪ್ರತಿಯೊಂದು ಪ್ರಶ್ನೆಯಲ್ಲೂ ಅವರು "ಭಾವನೆಗಳನ್ನು ನ್ಯಾಯಾಲಯಗಳು ಇತ್ಯರ್ಥಪಡಿಸಲಾರವು" ಎಂದು ವಾದಿಸುವುದಕ್ಕೆ ಕಾರಣ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತ ಗಣರಾಜ್ಯದ ಪರಿಕಲ್ಪನೆಯನ್ನಾಗಲಿ ಅಥವಾ ಅದರ ಆಧಾರವಾದ ಸಂವಿಧಾನವನ್ನಾಗಲಿ ಅವರು ಒಪ್ಪದಿರುವುದು. ಅವರ ಸೈದ್ಧಾಂತಿಕ ಗುರು ಗೋಲ್ವಾಲಕರ್ ಸಂವಿಧಾನ ರಚನೆ ಸಂದರ್ಭದಲ್ಲೇ ಭಾರತದ ಸಂವಿಧಾನ "ಹಿಂದು ವಿರೋಧಿ" ಎಂದು ಘೋಷಿಸಿದ್ದಾರೆ. ಹಾಗಾಗಿಯೇ ಅವರು ಕಂಚಿಶ್ರೀ ಬಂಧನ ಪ್ರಶ್ನೆಯನ್ನಾಗಲಿ ಅಥವಾ ಇತರೆ ಪ್ರಶ್ನೆಯನ್ನು ಎ[illegible]ವ ಮೂಲಕವಾಗಲಿ ಉಗ್ರ ಕೋಮುವಾದಿ ಹಿ[illegible] ರಾಷ್ಟ್ರದ ಪ್ರತಿಪಾದನೆಯನ್ನೇ ಮುಂದಿಡುತ್ತಾ ಬಂದಿದ್ದಾರೆ. ಕಾನೂನಿನ ಮುಂದೆ ಎಲ್ಲರೂ ಸಮಾನರು; ನ್ಯಾಯಾಂಗ ತನ್ನ ಪ್ರಕ್ರಿಯೆ ನಡೆಸಲಿ ಎಂಬ ನಿಲುಮೆಯನ್ನು ನಿರಾಕರಿಸುತ್ತಾ ಬಂದಿದ್ದಾರೆ. ○

ದೇಶಕ್ಕೆಲ್ಲಾ ಸಮಾನ ನಾಗರೀಕ ಸಂಹಿತೆಗೆ ಒತ್ತಾಯಿಸುವ, ಅದರ ಹೆಸರಿನಲ್ಲೇ ರಾಜಕೀಯ ಮಾಡುವ ಸಂಘ ಪರಿವಾರದವರಿಗೆ ಈ ದೇಶದ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವ ಭಾರತ ದಂಡ ಸಂಹಿತೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆ ಸಹ್ಯವಲ್ಲ ಎನ್ನುವುದರ ಹಿಂದೆ ಇರುವ ಮರ್ಮ

ಆಪತ್ತು ತರುವ ಕೋಮುವಾದದ ಬಗ್ಗೆ ಎಚ್ಚರ ಅಗತ್ಯ

ಪ್ರಾಂತಿಯತೆ, ಭ್ರಷ್ಟಾಚಾರ ಮತ್ತು ಸರ್ವವ್ಯಾಪಿಯಾಗಿರುವ ಅಶಿಸ್ತು ರಾಷ್ಟ್ರದ ಏಕತೆಗೆ ಸವಾಲಾಗಿವೆ. ಆದರೆ ಕೋಮುವಾದವು ಇವೆಲ್ಲಕ್ಕೂ ಹೆಚ್ಚು ಆಪತ್ತನ್ನು ಉಂಟುಮಾಡಲಿದೆ. ಭಾರತವನ್ನು ನಿಜವಾಗಿಯೂ ಪ್ರೀತಿಸುವವರು ಹಾಗೂ ಪ್ರಾಮಾಣಿಕವಾಗಿ ಕೋಮುವಾದವನ್ನು ರಾಷ್ಟ್ರ ರಾಜಕಾರಣದಿಂದ ತೊಡೆದು ಹಾಕಬಯಸುವವರು ನಿರ್ದಾಕ್ಷಿಣ್ಯವಾಗಿ ಕೋಮುವಾದಿ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವುದನ್ನು ನಿರಾಕರಿಸಬೇಕು. ಎಲ್ಲಾ ನಾಗರೀಕರು ಮತ್ತು ಪಕ್ಷಗಳು ಸಂವಿಧಾನಕ್ಕೆ ಬದ್ಧವಾಗಿರಬೇಕು. ನಮ್ಮದು ಜಾತ್ಯಾತೀತ ರಾಷ್ಟ್ರ. ರಾಷ್ಟ್ರಕ್ಕೆ ಕೋಮುವಾದಿ ಪಕ್ಷಗಳಿಂದ ಉಂಟಾಗಿರುವ ಅಪಾಯವನ್ನು ಗಮನದಲ್ಲಿರಿಸಿ ಅಗತ್ಯಬಿದ್ದಲ್ಲಿ ಹಾಗೂ ಸಂವಿಧಾನದ ಪರಿಮಿತಿಯಲ್ಲಿ ಕಾನೂನಿನ ಮೂಲಕ ಕೋಮುವಾದಿ ಪಕ್ಷಗಳು ತಾವಾಗಿಯೇ ಅಥವಾ ಇತರೆ ರಾಷ್ಟ್ರೀಯ ಪಕ್ಷಗಳ ಮೈತ್ರಿಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಬೇಕು.

- ಚಂದ್ರಶೇಖರ್ ಸರಸ್ವತಿ

ಕಂಚಿಕಾಮಕೋಟಿ ಮಠದ ಪರಮಾಚಾರ್ಯರು 1980 ರಲ್ಲಿ ಮಾಜಿ ಕೇಂದ್ರ ಸಚಿವರಾದ ಸಿ.ಸುಬ್ರಮಣ್ಯಂ ರವರೊಂದಿಗಿನ ಚರ್ಚೆಯಲ್ಲಿ

ಮೂಲ : 6.11.90 ರ ಹಿಂದೂ ಪತ್ರಿಕೆಯಿಂದ

ಸ್ವಾವಲಂಬನೆಯತ್ತ ತ್ರಿಪುರಾ ಜನತೆ

ತ್ರಿಪುರಾಕ್ಕೆ ಸಭೆಗೆಂದು ಹೋಗಿದ್ದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಮುಖಂಡರಾದ ಎಸ್.ವರಲಕ್ಷ್ಮಿಯವರು ಬಿಡುವಿನ ಸಮಯದಲ್ಲಿ ಹಸಿರು-ದುರ್ಗಮ ಬೆಟ್ಟಗುಡ್ಡಗಳ ನಡುವೆ ಜನರತ್ತ ಕಣ್ಣು ಹಾಯಿಸಿದಾಗ ಕಂಡ ವಿಸ್ಮಯಗಳೇನು? ವಿಶಿಷ್ಟತೆ ಏನು? ಕೆಂಪು ನಾಡಿನಿಂದ ಅಚ್ಚಳಿಯದ ಹಸಿರು ನೆನಪುಗಳ ಅನಾವರಣ...

ಸಿಐಟಿಯುವಿನ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆ ತ್ರಿಪುರಾದ ಅಗರ್ತಲಾ ದಲ್ಲಿ ಡಿಸೆಂಬರ್ 3 ರಿಂದ 5ರ ತನಕ ನಡೆಯುತ್ತದೆ ಎಂಬ ಸುತ್ತೋಲೆ ಕಂಡ ಕೂಡಲೇ ಆ ರಾಜ್ಯಕ್ಕೆ ಹೋಗಬಹುದಲ್ಲ ಎಂಬ ಸಂತೋಷ. ಬಹುಶಃ ಈ ಸಂತೋಷ ದುಡಿಯುವ ವರ್ಗದ ಚಳುವಳಿಯಲ್ಲಿ ತೊಡಗಿಸಿಕೊಂಡವರಿಗಲ್ಲಾ ಆಗಬಹುದಾದದ್ದೇ!

ಇಡೀ ದೇಶದಲ್ಲಿ 3ನೇ ಸಣ್ಣ ರಾಜ್ಯ ತ್ರಿಪುರಾ. ಗೋವಾ ಮತ್ತು ಸಿಕ್ಕಿಂ ಮತ್ತೆರೆಡು ರಾಜ್ಯಗಳು ಅತಿ ಸಣ್ಣ ರಾಜ್ಯಗಳು. ತ್ರಿಪುರಾ ಭಾರತ ದೇಶದ ಒಂದು ಮೂಲೆಯಲ್ಲಿರುವ ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿರುವ ಈ ಕೆಂಪು ನೆಲದಲ್ಲಿ ಯಾವಾಗಲೂ ಉದ್ದೇಶಪೂರ್ವಕ ಉಗ್ರಗಾಮಿಗಳ ನಿರಂತರ ದಾಳಿ. ಉಗ್ರಗಾಮಿಗಳ ದಾಳಿಯಷ್ಟೇ ಅಲ್ಲದೇ ಕೇಂದ್ರ ಸರ್ಕಾರದ ತಾರತಮ್ಯ ನೀತಿಗಳಿಂದಾಗಿ ಇನ್ನಿತರ ಧಾಳಿಗಳನ್ನು ಎದುರಿಸಬೇಕಾಗಿದೆ.

ಎಲ್ಲಾ ನೀತಿಗಳ ಮಧ್ಯೆಯೇ ದುಡಿಯುವ ಜನತೆಯ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳ ಫಲವಾಗಿ ಇಂದು ಎಡರಂಗ ತನ್ನ ಅಧಿಕಾರವನ್ನು 5ನೇ ಬಾರಿಯೂ ಹಿಡಿದಿದೆ. ಇದರ ಮಧ್ಯದಲ್ಲಿಯೇ ನಡೆದ ಚಳುವಳಿಯ ಇತಿಹಾಸವನ್ನು ಗ್ರಹಿಸಬೇಕಾಗಿದೆ.

10,491.69 ಚದುರ ಕಿ.ಮಿ. ಭೂ ವಿಸ್ತೀರ್ಣದಲ್ಲಿ 32 ಲಕ್ಷ ಜನತೆ ವಾಸಿಸುವ, ಅದರಲ್ಲಿ ಶೇ 33 ಗುಡ್ಡಗಾಡು ಜನತೆಯಿಂದ ಕೂಡಿರುವ ತ್ರಿಪುರಾ, ಹೊರ ರಾಜ್ಯಗಳಿಂದ ಹೋದವರಿಗೆ ಸದ್ದು-ಗದ್ದಲಗಳ ಆರ್ಭಟವಿಲ್ಲದ ಒಂದು ಶಾಂತಿಯುತ ವಾತಾವರಣವನ್ನು ಕಲ್ಪಿಸುತ್ತದೆ.

ಈ ರಾಜ್ಯದಲ್ಲಿ ಎಡರಂಗ ಸರ್ಕಾರವಿದೆ ಅನ್ನುವ ಕಾರಣಕ್ಕಾಗಿಯೇ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತಿಲ್ಲ. ಒಂದು ರಾಜ್ಯ ಅಭಿವೃದ್ಧಿಯಾಗಬೇಕಾದರೆ ಸಾರಿಗೆ ಸಂಪರ್ಕಗಳನ್ನು ಕಲ್ಪಿಸಬೇಕಾಗುತ್ತದೆ. ಆದರೆ ತ್ರಿಪುರಾ ರಾಜ್ಯದ ರಾಜಧಾನಿಗೆ ಹೋಗಲು ಕಲ್ಕತ್ತಾದಿಂದ ವಿಮಾನದಲ್ಲಿ ಅಥವಾ ಗೌಹಾತಿಯಿಂದ ರಸ್ತೆಗಂಟು 24 ಗಂಟೆಗಳ ದುರ್ಗಮ ಪ್ರದೇಶಗಳಲ್ಲಿ ಬಸ್ ಪ್ರಯಾಣ. ರಾಜಧಾನಿ ಅಗರ್ತಲದಿಂದ 140 ಕಿ.ಮಿ. ದೂರದಲ್ಲಿರುವ ಕುಮಾರ ಘಾಟ್‌ನಿಂದ ರೈಲು ಇಷ್ಟು ಬಿಟ್ಟರೆ ದಿನನಿತ್ಯ ಸಾಧಾರಣ ಜನತೆ ಹೋಗಿಬರುವ ವ್ಯವಸ್ಥೆಯೇ ಇಲ್ಲ. ಜನತೆ ಮತ್ತು ಸರ್ಕಾರಗಳು ಹಲವಾರು ಕೇಂದ್ರ ಸರ್ಕಾರಕ್ಕೆ ಯೋಜನೆಗಳನ್ನು ರೂಪಿಸಿ ಅದರ ಜಾರಿಗಾಗಿ ಹೋರಾಡುತ್ತಲೇ ಇದ್ದಾರೆ.

ಅಗರ್ತಲಾ ಸಭೆಯನ್ನು ಮುಗಿಸಿ ಬರುವಾಗ 6.12.04 ರಂದು ಇಂಡಿಯನ್ ಏರ್‌ಲೈನ್ಸ್‌ನ ವಿಮಾನ ಬೆಳಿಗ್ಗೆ 8 ಗಂಟೆಗೆ ಕಲ್ಕತ್ತಾಗೆ ಹೋಗಬೇಕಾದ್ದು ಮಧ್ಯಾಹ್ನ 3.50 ಕ್ಕೆ ಹೊರಟಿತು. ಅಂದರೆ ಇರುವ ವಿಮಾನಗಳು ಕೂಡಾ ಸಮಯಕ್ಕೆ ಸರಿಯಾಗಿ ಹಾರಾಡದ ಪರಿಸ್ಥಿತಿ.

ಪರಿಸ್ಥಿತಿ ಹೀಗಿದ್ದಾಗ ಕೈಗಾರಿಕೆಗಳ ಸ್ಥಾಪನೆ ಹೇಗೆ ? ಅಭಿವೃದ್ಧಿ ಹೇಗೆ?


ತ್ರಿಪುರಾದ ಜನತೆ ನಿರಾಶರಾಗದೆ ರಾಜ್ಯದಲ್ಲಿ ಅತ್ಯಂತ ಹೆಚ್ಚು ಬೆಳೆಯುವ ಬಿದಿರು, ಫೈನಾಪಲ್, ಟೀ, ರಬ್ಬರ್, ಸೆಣಬು (ಜೂಟ್)ಗಳನ್ನೇ ಬಳಸಿಕೊಂಡು ಅಲ್ಲಿಯ ಬುದ್ಧಿಜೀವಿಗಳ, ತಂತ್ರಜ್ಞರ, ಮತ್ತು ದುಡಿಯುವ ಜನತೆಯನ್ನು ಬಳಸಿಕೊಂಡು ಅಭಿವೃದ್ಧಿ ಪಥದತ್ತ ಸಾಗುತ್ತಿದ್ದಾರೆ.

ತ್ರಿಪುರಾದ ಈ ಎಲ್ಲಾ ವಸ್ತುಗಳನ್ನು ರಾಜ್ಯ ಸರ್ಕಾರ ಕೊಂಡು ಜನತೆಗೆ ಸಬ್ಸಿಡಿ ದರದಲ್ಲಿ ನೀಡುತ್ತಾ ಹೊರದೇಶಗಳಿಗೆ ಸಾಗಾಣಿಕೆಯನ್ನು ಮಾಡುವಲ್ಲಿ ಸಫಲವಾಗುತ್ತಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಭಾರತದ ವಸ್ತುಗಳು ವಿದೇಶದಲ್ಲಿ ಪೈಪೋಟಿಯನ್ನು ಎದುರಿಸಲಾರದೆ ಸಂಕಷ್ಟದಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಕಾಫಿ ಪ್ಲಾಂಟೇಶನ್‌ಗಳು ಮುಚ್ಚುತ್ತಿವೆ. ಹಾಗೆಯೇ ಅದರ ಮಾಲೀಕರು ಕೆಲವರು ಆತ್ಮಹತ್ಯೆಯೂ ಮಾಡಿಕೊಂಡಿದ್ದಾರೆ.

ಈ ಪರಿಸ್ಥಿತಿಗೆ ಭಿನ್ನ ಎಂಬಂತೆ ದುರ್ಗಾಬಾರಿ ಗೋಲ್ಡ್ ಟೀ ಎಸ್ಟೇಟ್‌ನಲ್ಲಿ ಕಾರ್ಮಿಕರು 1927 ರಲ್ಲಿ ಬಗೆಲ್ ಘೋಷ್ ಎಂಬ ಖಾಸಗಿ ಮಾಲೀಕರ ಒಡೆತನದಲ್ಲಿದ್ದ ಈ ತೋಟವನ್ನು 1978 ರಲ್ಲಿ ಮುಚ್ಚಲು ನಿರ್ಧರಿಸಿದಾಗ ಅಲ್ಲಿಯ ಸಿಐಟಿಯು ಸಂಘಟನೆಯ ಸದಸ್ಯ ಎಲ್ಲಾ ಕಾರ್ಮಿಕರು ಸೇರಿ ಅವರೇ ಈ ತೋಟವನ್ನು ನಡೆಸಲು ತೀರ್ಮಾನಿಸಿದರು. ರಾಜ್ಯ ಸರ್ಕಾರದ ಬಂಡವಾಳವಿಲ್ಲದೇ ನಬಾರ್ಡ್‌ನ





ಮತ್ತು ಮತ್ತಿತರ ಬ್ಯಾಂಕುಗಳ ಸಹಾಯದಿಂದ 45 ಕಾರ್ಮಿಕರೇ ಷೇರುದಾರರಾಗಿ 'ದುರ್ಗಾಬಾರಿ ಟೀ ಎಸ್ಟೇಟ್ ಸಹಕಾರಿ ಸಂಸ್ಥೆ' ಯನ್ನಾಗಿ ಮಾರ್ಪಡಿಸಿದ್ದಾರೆ. ಈ ತೋಟ ಇಂದು 155 ಎಕರೆಯಿದ್ದು, 9 ಲಕ್ಷ ಗಿಡಗಳಿವೆ. 250 ಕಾರ್ಮಿಕರು ದುಡಿಯುತ್ತಿದ್ದಾರೆ. 1979 ರಲ್ಲಿ 1.70 ಸಾವಿರ ಕೆ.ಜಿ. ಉತ್ಪಾದನೆ ಇದ್ದದ್ದು ಇಂದು 8 ಲಕ್ಷ ಕೆ.ಜಿ. ಉತ್ಪಾದನೆಗೆ ಏರಿದೆ.

ಕಾರ್ಮಿಕರ ಪರಿಸ್ಥಿತಿ :

ಮಾಲೀಕರೇ ಇಲ್ಲ, ಕೆಲಸ ಮುಗಿದು ಹೋಗುವಾಗ ತಪಾಸಣೆಯಿಲ್ಲ, ದಿನಕ್ಕೆ 26 ರೂ.ಗಳ ಕೂಲಿ, ಸಂಸ್ಥೆಯಿಂದ ವಾಸಿಸಲು ಮನೆ, ಉಚಿತ ಅಡುಗೆ ಗ್ಯಾಸ್, ಶೇ 40 ಬೋನಸ್ (ಲಾಭದ ಆಧಾರದಲ್ಲಿ) ಅತ್ಯಂತ ಕಡಿಮೆ ದರಕ್ಕೆ ಪಡಿತರ ವ್ಯವಸ್ಥೆ, ಒಬ್ಬಕಾರ್ಮಿಕನಿಗೆ ವಾರಕ್ಕೆ ಅಕ್ಕಿ-ಗೋಧಿ ಮೂರುವರೆ ಕೆ.ಜಿ., ಕಾರ್ಮಿಕನ ಕುಟುಂಬದವರಿಗೆ ತಲಾ ಒಂದು ಕೆ.ಜಿ. 750 ಗ್ರಾಂ ಆಹಾರ ಧಾನ್ಯಗಳು (ಒಂದು ಕೆ.ಜಿ. ಅಕ್ಕಿ 64 ಪೈಸೆ, ಒಂದು ಕೆಜಿ ಗೋದಿ 65 ಪೈಸೆ)

ಒಬ್ಬ ಕಾರ್ಮಿಕ ದಿನಕ್ಕೆ 20 ಕೆಜಿ ಎಲೆಯನ್ನು ಬಿಡಿಸಬೇಕು. ಆ ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿಯ ಕುಮಾರಿ ಬಾರ್ಗ್ ಎಂಬ ಮಹಿಳೆ 25 ವರ್ಷದಿಂದ ದುಡಿಯುತ್ತಿದ್ದಾಳೆ. ಆಕೆಗೆ ನಾನು ಪ್ರಶ್ನಿಸಿದೆ ನಿಮಗೇನಾದರೂ ಸಮಸ್ಯೆಯಿದೆಯೇ ಎಂದು ಅದಕ್ಕೆ ಆಕೆಯ ಉತ್ತರ 'ಇದು ನಮ್ಮದು ನಾವೇ ಮಾಲೀಕರು - ಕಾರ್ಮಿಕರು. ನಮ್ಮ ಆಸ್ತಿಯನ್ನು ಕಾಪಾಡುವುದು - ಬೆಳೆಸುವುದು ನಮ್ಮ ಕರ್ತವ್ಯ'.

'ಕಾಂಗ್ರೆಸ್ ಸರ್ಕಾರ ಇದ್ದಾಗ ನನಗೆ ಉಡಲು ಒಂದು ಸಾಧಾರಣ ಸೀರೆಯೂ ಇರಲಿಲ್ಲ. ಆದರೆ ಇಂದು ನಾನು ಸ್ವಾವಲಂಬಿ'.

ಎಡರಂಗ ಸರ್ಕಾರ ಹಣಕಾಸು ಸಹಾಯ ನೀಡದಿದ್ದರೂ ತನ್ನ ಕಾಲಮೇಲೆ ನಿಂತು ಆದಾಯ ಗಳಿಸುವ, ವ್ಯವಸ್ಥೆಯನ್ನು ಕಲ್ಪಿಸಿದ್ದಕ್ಕೆ ಒಬ್ಬ ಟೀ ಎಸ್ಟೇಟನಲ್ಲಿ ದುಡಿಯುವ ಮಹಿಳೆಯ ಹೆಮ್ಮೆಯ ಮಾತಿದು.

ಅದೇ ರೀತಿ ಉತ್ತರ ಪೂರ್ವಾಂಚಲ ಜಿಲ್ಲೆಯ ಕೆಲವು ಹಳ್ಳಿಗಳಿಗೆ ಭೇಟಿ ನೀಡಿದಾಗ ಅಲ್ಲಿಯ ಸ್ಥಳೀಯ ಪಂಚಾಯ್ತಿ ಅಧ್ಯಕ್ಷರು, ತ್ರಿಪುರಾ ಗುಡ್ಡಗಾಡು ಜನತೆಗಾಗಿ ಇರುವ ಅಟಾನಮಿ ಕೌನ್ಸಿಲ್‌ನ ಸದಸ್ಯರು ಇನ್ನು ಕೆಲವು ಜನರನ್ನು ಭೇಟಿಯಾದೆವು. ಬೇರೆ ರಾಜ್ಯದ ಸಂಗಾತಿಗಳು ನಮ್ಮ ಹಳ್ಳಿಗೆ ಬಂದಿದ್ದಾರೆ ಎಂಬ ಸುದ್ದಿ ತಿಳಿದ ಕೂಡಲೇ ಹಲವಾರು ಜನ, ಸ್ಥಳೀಯ ಅಧಿಕಾರಿಗಳು, ಅಂದರೆ ಬಿಡಿಓ (Black Development Officer) ಪೋಲೀಸ್‌ಎಲ್ಲರು ನಮ್ಮ ರಕ್ಷಣೆಗೆ ಮತ್ತು ಮಾಹಿತಿ ನೀಡಲು ಅತ್ಯಂತ ವಿನಮ್ರದಿಂದ ವಿವರಿಸಿದರು.

ಹಣದ ಸಮಸ್ಯೆ ಮತ್ತು ಸಾಂಪ್ರದಾಯಿಕ ಜೀವನದಿಂದ - ಹಳ್ಳಿ, ಗುಡ್ಡಗಾಡಿನ ಮತ್ತು ನಗರದ ಕೆಲವೆಡೆ ಇಂದಿಗೂ ಗುಡಿಸಲುಗಳಲ್ಲೇ ಜನ ವಾಸಿಸುತ್ತಾರೆ. ರಾಷ್ಟ್ರೀಯ ಹೆದ್ದಾರಿಗಳು ಇಟ್ಟಿಗೆ ಮತ್ತು ತಾರ್‌ನಿಂದ ಕೂಡಿವೆ. ಏಕೆಂದರೆ ಕಲ್ಲುಗಳನ್ನು ಪಕ್ಕದ ರಾಜ್ಯ ಮೇಘಾಲಯದಿಂದ ತುಂಬಾ ವೆಚ್ಚದಲ್ಲಿ ತರಿಸಲು ಆಗದೆ ಅವರೇ ಕಂಡುಕೊಂಡಿರುವ ಪರಿಹಾರ. ಇಡೀ ರಾಜ್ಯದಲ್ಲಿ ಶೇ 66 ಬಡತನ ರೇಖೆ ಕೆಳಗಿರುವವರಿದ್ದಾರೆ. ಶೇ 33 ಮಾತ್ರವೇ ಬಡತನ ರೇಖೆಯ ಮೇಲಿರುವವರು.

ಪಡಿತರ ವ್ಯವಸ್ಥೆ: ಬಿಪಿಎಲ್‌ನವರಿಗೆ
ಅಕ್ಕಿ 35 ಕೆ.ಜಿ., ಬೆಲೆ ಕೆ.ಜಿ.ಗೆ 3.15
ಸಕ್ಕರೆ 4 ಕೆ.ಜಿ., ಬೆಲೆ ಕೆ.ಜಿ.ಗೆ 12 ರೂ
ಸೀಮೆ ಎಣ್ಣೆ ಒಬ್ಬರಿಗೆ ಒಂದು ಲೀಟರ್. ತಲಾ ಕುಟುಂಬದ ಸದಸ್ಯರ ಸಂಖ್ಯೆಯ ಆಧಾರದಲ್ಲಿ ವಿತರಣೆ. ಬೆಲೆ ಲೀಟರ್‌ಗೆ 9.15 ರೂ.

ಎಡರಂಗ ಸರ್ಕಾರ ಗುಡ್ಡಗಾಡಿನ ಜನರನ್ನು ಐಡೆಂಟಿಟಿ ಮಾಡಿ, ಅಟಾನಮಿ ಕೌನ್ಸಿಲ್‌ಗೆ ರಾಜಕೀಯ ಅಧಿಕಾರವನ್ನು ನೀಡಿದ್ದಾರೆ.

ಗ್ರಾಮ ಪಂಚಾಯ್ತಿಗಳ ಪಾತ್ರ :

ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಗ್ರಾಮ ಪಂಚಾಯಿತಿಯಿಂದ ಗುರ್ತಿಸಿ ಐಡೆಂಟಿ ಕಾರ್ಡ್ ವಿತರಿಸುತ್ತಾರೆ. ಯುಪಿಎ ಸರ್ಕಾರ ಕನಿಷ್ಟ ಕಾರ್ಯಕ್ರಮದಲ್ಲಿ 100 ದಿನಗಳ ಕೆಲಸ ಕೊಡಬೇಕು ಎಂದಿದೆ. ಇದು ಈಗಾಗಲೇ ತ್ರಿಪುರಾದಲ್ಲಿ ಜಾರಿಯಲ್ಲಿದೆ.

ಗ್ರಾಮ ಸಂಸತ್ತುಗಳಲ್ಲಿ ಬಿಪಿಎಲ್ ನಲ್ಲಿರುವ ಜನರಿಗೆ ಪ್ರತಿ ಕುಟುಂಬದವರನ್ನು 100 ದಿನಗಳ ಕೆಲಸಕ್ಕೆ ಆಯ್ಕೆ ಮಾಡುತ್ತಾರೆ. ಗ್ರಾಮಗಳಲ್ಲಿಯೂ ಕೂಡಾ ಎಲ್ಲರಿಗೂ ದುಡಿಮೆ ಸಿಗಬೇಕು, ನನಗೆ ಮಾತ್ರ ಹೆಚ್ಚು ಬೇಕು ಎಂಬ ಆಸೆ ಇಲ್ಲದ ಮನಸ್ಸುಗಳನ್ನು ನಾವು ತ್ರಿಪುರಾದಲ್ಲಿ, ಕಮ್ಯುನಿಸ್ಟ ಚಳುವಳಿ ಇರುವ ರಾಜ್ಯಗಳಲ್ಲಿ ನೋಡಬಹುದಾಗಿದೆ. ಎಲ್ಲರಿಗೂ ರಾಜ್ಯ ಸರ್ಕಾರವೇ ಕೆಲಸ ಕೊಡಬೇಕೆಂಬುದರ ಬದಲಿಗೆ ಸ್ವಂತ ಕೆಲಸಗಳನ್ನು ಮಾಡಲು 3 ವರ್ಷಗಳಿಂದ ಸ್ವ-ಸಹಾಯ ಗುಂಪುಗಳನ್ನು ಮಾಡಲು ತೀರ್ಮಾನಿಸಿ, ಮಹಿಳೆಯರು ಮತ್ತು ಪುರುಷರು ರಾಜ್ಯದಾದ್ಯಂತ ಸ್ವ-ಸಹಾಯ ಗುಂಪುಗಳನ್ನು ರಚಿಸಿ ಅದರಲ್ಲಿ ಸ್ವ-ಉದ್ಯೋಗದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಶೌಚಾಲಯಕ್ಕೆ ಉಪಯೋಗಿಸುವ ಕಾಂಡೋಮ್‌ಗಳನ್ನು ತಯಾರಿಸುವ ಸಣ್ಣ ಕಾರ್ಖಾನೆ - ಅದರಲ್ಲಿ ದುಡಿಯುವ ಕಾರ್ಮಿಕರು ಸ್ವ-ಸಹಾಯ ಗುಂಪಿನಲ್ಲಿ ತರಬೇತಿ ಪಡೆದವರು. ಅವರಿಗೆ ದಿನಕ್ಕೆ 110 ರೂ.ಗಳ ಕೂಲಿ. ಪ್ರತಿಯೊಂದು ಸ್ಥಳ, ಕಟ್ಟಡ, ಬಂಡವಾಳ, ಕಾರ್ಮಿಕ, ಕೂಲಿ ಎಲ್ಲವನ್ನು ನಡೆಸುವುದು ಅದಕ್ಕೆ ಸಂಬಂಧಿಸಿದ ಸ್ವ-ಸಹಾಯ ಗುಂಪಿನದ್ದೆ.

ಸುಭಾಷ ನಗರ ಸ್ವ-ಸಹಾಯ ಗುಂಪಿನ ಸಾಧನೆ ಮೀನು ಸಾಕಾಣಿಕೆ, ಆ ಗುಂಪಿನ 10 ಜನ ಅದರಲ್ಲಿ ಬಿಪಿಎಲ್‌ನವರು 7 ಜನ ದಿನನಿತ್ಯ ಕೆಲಸ, ತಿಂಗಳುಇಡಿಯಾಗಿ 20 ಸಾವಿರ ರೂ. ಗಳಿಕೆ, ಎಲ್ಲವೂ ಅವರೇ ನಿರ್ವಹಿಸುತ್ತಾರೆ. ಅದೇ ಹಂದಿ ಸಾಕಾಣಿಕೆ, ಮೀನುಗಳನ್ನು ಸಾಕುವುದು ಹೀಗೆ - ಆ ರಾಜ್ಯದ ವಿಶೇಷವೆಂದರೆ ಸ್ವ-ಸಹಾಯ ಸಂಪುಟಗಳು ಉತ್ಪಾದಿಸಿದ ವಸ್ತಗಳನ್ನು ಸರ್ಕಾರವೇ ಖರೀದಿ ಮಾಡುವುದು.

ಕುಡಿಯುವ ನೀರು :

ರಾಜ್ಯ ಸರ್ಕಾರದ 90 ಅಂಶಗಳ ಕಾರ್ಯಕ್ರಮದ ಆಧಾರದಲ್ಲಿ ಕುಡಿಯುವ ನೀರನ್ನು 'ಶಾಜಲ್ ದರಿ' (Shajal Dari) ಯೋಜನೆಯಿಂದ ಒದಗಿಸುತ್ತದೆ. ತಲಾ 31 ಕುಟುಂಬಗಳಿಗೆ ದಿನನಿತ್ಯ 2 ಬಾರಿ ನಲ್ಲಿಯ ಮುಖಾಂತರ ನೀರು ರಾಜ್ಯದೆಲ್ಲೆಡೆ ಸರಬರಾಜಿದೆ. ಇದಕ್ಕೆ ಜನರಿಂದ ಶೇ 10 ಮಾತ್ರ ಹಣವನ್ನು ಸಂಗ್ರಹಿಸಿ ಸರ್ಕಾರ ಉಳಿದ ಶೇ 90 ಭಾಗ ವೆಚ್ಚ ಭರಿಸುತ್ತದೆ.

. ಗ್ರಾಮ ಪಂಚಾಯ್ತಿಗಳಿಗೆ 2 ಎಕರೆಗಿಂತ ಹೆಚ್ಚು ಭೂಮಿ ಇರುವವರು ಮಾತ್ರವೇ ತೆರಿಗೆಯನ್ನು ಕೊಡುತ್ತಾರೆ. ಉಳಿದ ಯಾವುದಕ್ಕೂ ತೆರಿಗೆಯಿಲ್ಲ 'ಲಂಚ ಆ ಜನರಿಗೆ ಗೊತ್ತೇ ಇಲ್ಲ'.!

- ದುಷ್ಯಂತ್ ನಾರಾಯಣಪುರ ಆ ಹಳ್ಳಿಯಲ್ಲಿಯೇ ಈ ಎಲ್ಲಾ ವಿಚಾರಗಳನ್ನು ಚರ್ಚಿಸಿದ್ದು ಮತ್ತು ನೋಡಿದ್ದು ಕೂಡಾ. ಅಲ್ಲಿಯ ಕೌಟುಂಬಿಕ ಮತ್ತು ಸಾಮಾಜಿಕ ಜೀವನ ಹೆಚ್ಚು ಕಡಿಮೆ ಮಹಿಳೆ - ಪುರುಷರಲ್ಲಿ ಸಮಾನ ಗೌರವ ಮತ್ತು ಸಮಾನ ಸ್ಥಾನಮಾನಗಳು ಇವೆ. ಉತ್ತರ ಪೂರ್ವಾಂಚಲದಲ್ಲಿ ಪಂಚಾಯ್ತಿ ಅಧ್ಯಕ್ಷೆ ಮಹಿಳೆ ಮತ್ತು ಜನವಾದಿ ಮಹಿಳಾ ಸಂಘಟನೆ ಸ್ಥಳೀಯ ಕಾರ್ಯದರ್ಶಿ ಆಕೆಯ ವಯಸ್ಸು ಸುಮಾರು 60 ಇರಬಹುದು.

ಆ ಪಂಚಾಯ್ತಿಗೆ ಶೇ 40 ಮಹಿಳಾ ಚುನಾಯಿತ ಸದಸ್ಯರು. ಕೌಟುಂಬಿಕ ಕಲಹಗಳು ತುಂಬಾ ಕಡಿಮೆ. ಕಲಹಗಳು ಬಂದಾಗ ಪಂಚಾಯ್ತಿಕೆ ನಡೆಯುತ್ತವೆ. ವರದಕ್ಷಿಣೆ ಮೇಲ್ಮಟ್ಟದ ಜನರಲ್ಲಿದೆ. ಆದರೆ ವರದಕ್ಷಿಣೆ ಸಾವುಗಳಿಲ್ಲ. ಈ ವರದಿ ಕೇವಲ ಹಳ್ಳಿಯ ಅಧ್ಯಕ್ಷರದ್ದು ಅಷ್ಟೇ ಅಲ್ಲ ಆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರದ್ದು ಕೂಡಾ.

ಅಂತರಜಾತಿಯ ಸಮಸ್ಯೆ ಹೆಚ್ಚೇನಿಲ್ಲ, ಅಲ್ಲಿಯ ಮಹಿಳೆಯರ ಆರೋಗ್ಯ, ಬಾಣಂತಿತನ, ಮಕ್ಕಳನ್ನು ನೋಡಿಕೊಳ್ಳಲು ಸಹಾಯ ಮಾಡಲು ಊರಿಗೆ ಒಬ್ಬರಿಗೆ ಮಹಿಳಾ ಮುಖಂಡರು ಇರುತ್ತಾರೆ.

ಮಹಿಳಾ ಆಯೋಗದ ಅಧ್ಯಕ್ಷರನ್ನು ಮಾತನಾಡಿಸಿದಾಗ ಅವರು ಹೇಳುವುದು 'ಇಲ್ಲಿ ಮಹಿಳಾ ಚಳುವಳಿ ಹೆಚ್ಚು ಬಲಿಷ್ಟವಾಗಿರುವುದರಿಂದ ನಮಗೆ ಹೆಚ್ಚು ಕೆಲಸವಿಲ್ಲ' ಎಂದು.

ಅಲ್ಲಿಯ ದುಡಿಯುವ ಜನತೆಯ ಸರ್ಕಾರದ ಸಾಧನೆಯೆಂದರೆ ಸಿಪಿಐ(ಎಂ) ನ ನೇತೃತ್ವ ರಾಜ್ಯಕ್ಕಿಲ್ಲದಿದ್ದರೆ ಬದುಕೇ ಇಲ್ಲ' ಎಂಬ ಕಟು ವಾಸ್ತವವನ್ನು ಅರಿತಿರುವ ಆ ಜನರಿಗೆ ನಮ್ಮೆಲ್ಲರ ಕೆಂಪು ವಂದನೆ ಮತ್ತು ಶುಭ ಹಾರೈಕೆ.

ಸಂಭ್ರಮದ ಸಿದ್ಧತೆ

ಸಿಐಟಿಯುವಿನ ಕಾರ್ಯಕಾರಿ ಸಮಿತಿ ಸಭೆ ಬಹುಶಃ ಅಗರ್ತಲಾದಲ್ಲಿ ಮೊದಲು ನಡೆದ ಅಖಿಲ ಭಾರತ ಕಾರ್ಯಕ್ರಮ. ಇದಕ್ಕೆ ಮೊದಲು ರಾಜ್ಯ ಸರ್ಕಾರಿ ನೌಕರರ ಅಖಿಲ ಭಾರತ ಸಮ್ಮೇಳನ ನಡೆದಿತ್ತು.

ಸಿಐಟಿಯುವಿನ ಸಭೆಗೆ ತ್ರಿಪುರಾದ ಪ್ರತಿಯೊಬ್ಬ ಕಾರ್ಮಿಕ ಒಂದು ದಿನದ ವೇತನ ನೀಡಿದ್ದರು. ಪ್ರತಿಯೊಬ್ಬ ಸದಸ್ಯರನ್ನು ಅತ್ಯಂತ ಗೌರವಯುತವಾಗಿ ಕಂಡರು. ಡಾಕ್ಟರ್ಸ್, ಲೆಕ್ಚರರ್ಸ್, ಸರ್ಕಾರಿ ನೌಕರರು, ಸಾಮೂಹಿಕ ಸಂಘಟನೆಗಳ ನಾಯಕರು ಸ್ವಯಂ ಸೇವಕರಾಗಿ ಕೆಲಸ ನಿರ್ವಹಿಸಿದರು.

ನವೆಂಬರ್ 3 ರಂದು ಕಾರ್ಯಕಾರಿ ಸಮಿತಿಯ ಧ್ವಜಾರೋಹಣವನ್ನು ಕಾಂ. ಎಂ.ಕೆ.ಪಂಧೆ ನೆರವೇರಿಸಿ, ಉದ್ಘಾಟನೆಯನ್ನು ಮಾಡಿದರು. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಚಿತ್ರಬ್ರತ ಮಜುಂದಾರ್ ವರದಿ ಮಂಡಿಸಿ ಕೆಲವೊಂದು ತೀರ್ಮಾನಗಳನ್ನು ಮಾಡಲಾಯಿತು. ಈ ಸಭೆಗೆ ಶುಭ ಹಾರೈಸಿ ತ್ರಿಪುರಾದ ಮುಖ್ಯಮಂತ್ರಿಗಳಾದ ಕಾಂ. ಮಾಣಿಕ್ ಸರ್ಕಾರ್ ಮಾತನಾಡಿದರು. ಸಿಐಟಿಯು ವನ್ನು ದೇಶದಾದ್ಯಂತ ಚಳುವಳಿಯಾಗಿ ಬೆಳೆಸಲು ಕರೆ ಕೊಟ್ಟರು.

ಇಡೀ ದೇಶದಲ್ಲಿ ಒಂದು ರಾಜ್ಯದ ಮುಖ್ಯಮಂತ್ರಿಗಳ ಪತ್ನಿ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದರೆ ನಂಬಲು ಅಸಾಧ್ಯ. ಆದರೆ ಮಾಣಿಕ್ ಸರ್ಕಾರ ಜೀವನದ ಸಂಗಾತಿ ಕಾಂ. ಪಾಂಚಾಲಿ ಈಗಲೂ ಕೇಂದ್ರ ಸೇವೆಯಲ್ಲಿ ದುಡಿಯುವ ಮಹಿಳೆ ಮತ್ತು ಚಳುವಳಿಯಲ್ಲಿ ಕ್ರಿಯಾತ್ಮಕವಾಗಿರುವ ಸಂಗಾತಿ.

ಎಸ್.ವರಲಕ್ಷ್ಮಿ


ಬಡ ಬದುಕ ಹೀರುವುದೇ ಉದಾರೀಕರಣ

ಉದಾರೀಕರಣಕ್ಕೆ ಬಹಳ ಉನ್ನತ ಧ್ಯೇಯಗಳಿವೆ ಎಂದು ಉದಾರೀಕರಣವಾದಿಗಳು ಶಂಖ ಊದುತ್ತಾರೆ. ಆದರೆ ಉದಾರೀಕರಣದ ಪರಿಣಾಮಗಳನ್ನು ನೋಡಿದರೆ ಇದು ಅಪ್ಪಟ ಸುಳ್ಳು ಎಂಬುದು ಗೊತ್ತಾಗುತ್ತದೆ.

ಉದಾರೀಕರಣದಲ್ಲೆಲ್ಲ ಹಣಕಾಸು ವಲಯದ ಉದಾರೀಕರಣ ಬಹಳ ದೊಡ್ಡ ಪ್ರಮಾಣದಲ್ಲಿ ಆಗಿದೆ. ಈಗ ಸಾಲ ದೊರೆಯುವುದು ಬಹಳ ಸುಲಭ, ಬಡ್ಡಿ ದರಗಳೂ ಕಡಿಮೆ, ಷರತ್ತುಗಳೂ ಅನುಕೂಲಕರ ಎಂದೆಲ್ಲ ನಗರ ಪಟ್ಟಣವಾಸಿ ಮಧ್ಯಮ ವರ್ಗದವರು ಹೇಳುತ್ತಾರೆ. ಬಂಡವಾಳರಿಗಂತೂ ಇದು ಸ್ವರ್ಗ ಸಮಾನ ಪರಿಸ್ಥಿತಿ.

ಆದರೆ ಬಡರೈತರು, ಬಡ ಕಾರ್ಮಿಕರು ಏನು ಅನುಭವಿಸುತ್ತಿದ್ದಾರೆ ಎಂಬುದು ತಿಳಿದರೆ ಮಾತ್ರ ವಾಸ್ತವ ಅರ್ಥವಾದೀತು. ಈ ಬಡರೈತರು ಕಾರ್ಮಿಕರು ದಿನ ಪತ್ರಿಕೆಗಳನ್ನು ಓದುವುದಿಲ್ಲ. ದಿನಪತ್ರಿಕೆಗಳ ವರದಿಗಾರರು ಈ ಜನರ ಬದುಕನ್ನು ನೋಡುವುದಿಲ್ಲ, ಕೇಳುವುದಿಲ್ಲ, ವರದಿ ಬರೆಯುವುದಿಲ್ಲ. ಆದ್ದರಿಂದ ಅಕ್ಷರಸ್ಥ ಲೋಕಕ್ಕೆ ಈ ಜನ ಇರುವುದೇ ತಿಳಿದಿಲ್ಲ(?) ಅಂದರೆ ಅವರ ಪರಿಸ್ಥಿತಿ ಅರ್ಥವಾದೀತು ಹೇಗೆ.

ಕಂಪನಿಗಳಿಗೆ ಬ್ಯಾಂಕುಗಳು ತಮ್ಮ ಎಲ್.ಆರ್. ಅಂದರೆ ಅಗ್ರ ಸಾಲ ದರದಲ್ಲಿ ಸಾಲ ನೀಡುತ್ತಾರೆ. ಈಗ ಈ ದರ ಶೇ. 8ಕ್ಕಿಂತ ಮೇಲೆ ಹೋಗದು. ರೈತರಿಗೆ ಈ ದರ ರೂ.50,000ದ ವರೆಗೆ ಶೇ.9 ಆದರೆ ಅದಕ್ಕೂ ಮೇಲಿನ ಮಿತಿಗೆ ಶೇ.11 ರಷ್ಟು. ಈ ದರ ಶೇ 13-14 ವರೆಗೂ ಹೋಗಬಹುದು.



ಜಿ.ಎಸ್.ಮಣಿ

ದೇಶದಾದ್ಯಂತ ಸಣ್ಣ ಉಳಿತಾಯಗಾರರ ಹಣವೇ ಬ್ಯಾಂಕುಗಳನ್ನು ನಡಸುವುದು. ಹೀಗಿದ್ದರೂ ಈ ವರ್ಗದವರಿಗೆ, ಸಾಲವನ್ನು ಸುಲಭ ಷರತ್ತುಗಳಲ್ಲಿ ನೀಡುವ ಪದ್ಧತಿಯಿಲ್ಲ.

ಈಗ ಹೇಳಿ ಉದಾರೀಕರಣದ ನಿಜವಾದ ಅರ್ಥವೇನೆಂದರೇ ಬಡವರ ಹಣದಿಂದ ಶ್ರೀಮಂತರಿಗೆ ಅತಿ ಕಡಿಮೆ ದರದಲ್ಲಿ ಸಾಲ ನೀಡುವುದೆ/ ರೈತರಿಗೆ ಕೊಡಮಾಡುವ ಪ್ರತಿಯೊಂದು ಸಹಾಯಧನದ ಬಗ್ಗೆ ಬೊಬ್ಬೆಯಿಡುವ ಬಂಡವಾಳಿಗರು ಮತ್ತು ಅವರ ಮಾಧ್ಯಮಗಳು ಇಂತಹ ಅನ್ಯಾಯದ ಕಡೆಗೇಕೆ ಕಣ್ಣು ಬಿಟ್ಟು ನೋಡುವುದಿಲ್ಲ?

ಯಾಕೆಂದರೆ ಉದಾರೀಕರಣ ಶ್ರೀಮಂತರ ಅನುಕೂಲಕ್ಕಾಗಿ ಮಾತ್ರ ಅಲ್ಲವೆ?

ಮಂಗ ಮಾಯದ ಕಂಪನಿಗಳು

ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯದ ಕಂಪನಿ ವಿಚಾರಗಳ ವಿಭಾಗ 1994-95ರ ಕಾಲದಲ್ಲಿ ನಾಯಿ ಕೊಡೆಗಳಂತೆ ಮೇಲೆದ್ದು ಸಾರ್ವಜನಿಕರ ಹಣವನ್ನು 'ಸ್ವಾಹಾ' ಮಾಡಿ ಮಂಗ ಮಾಯವಾಗಿದ್ದ ಕಂಪನಿಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವ ವಿಚಾರ ಮಾಡಿದೆಯಂತೆ.

ಸರ್ಕಾರಿ ಮಾಹಿತಿಯ ಪ್ರಕಾರ ದೇಶದ ಪಶ್ಚಿಮ ಭಾಗದಿಂದ ಇಂತಹ 52 ಕಂಪನಿಗಳು ಹುಟ್ಟಿಕೊಂಡಿದದವು. ದಕ್ಷಿಣದಲ್ಲಿ 36 ಕಂಪನಿಗಳು, ಉತ್ತರದಲ್ಲಿ 20 ಕಂಪನಿಗಳು, ಪೂರ್ವ ಭಾಗದಲ್ಲಿ 14 ಕಂಪನಿಗಳು ಹುಟ್ಟಿಕೊಂಡಿದ್ದವು.

ಈಗ ಸರ್ಕಾರೀ ವ್ಯವಸ್ಥೆ ಈ ಕಂಪನಿಗಳನ್ನು ಹುಟ್ಟಿಹಾಕಿದ್ದವರ, ಅದರ ನಿರ್ದೇಶಕರುಗಳ ಮೇಲೆ ತೀವ್ರ ಕ್ರಮ ಕೈಗೊಳ್ಳುವ ಮಾತುಗಳನ್ನು ಆಡುತ್ತಿದ್ದಾರೆ. ಆದರೆ ಇವುಗಳಿಂದ ತಪ್ಪು ಮಾಡಿದ ಕೆಲವರಿಗೆ ಶಿಕ್ಷೆಯಾಗಬಹುದು (ಆಗದೇ ಇರುವ ಸಾಧ್ಯತೆಗಳೇ ಹೆಚ್ಚು) ಆದರೆ ಖಂಡಿತವಾಗಿಯೂ ಸಾರ್ವಜನಿಕರ ಹಣ ವಾಪಸ್ಸು ಬರುವ ಸಾಧ್ಯತೆಯಂತೂ ಇಲ್ಲವೇ ಇಲ್ಲ. ಕೇಂದ್ರ ಸರ್ಕಾರಕ್ಕೂ ಆ ಪ್ರಾಮಾಣಿಕತೆ ಇಲ್ಲ. ಉದಾರೀಕರಣ ಜನತೆಗೆ ಎಂತಹ ಮೋಸವಾಗಬಹುದೆಂಬುದ್ದಕ್ಕೆ ಇದು ಒಳ್ಳೆಯ ಉದಾಹರಣೆಯಲ್ಲವೆ?

ಇ.ಪಿ.ಎಫ್ ಬಡ್ಡಿ ದರ : ಸರ್ಕಾರೀ ರಾದ್ಧಾಂತ

ಎಡಪಕ್ಷಗಳು ಇ.ಪಿ.ಎಫ್.(ನೌಕರರ ಪ್ರಾವಿಡೆಂಟ್ ಫಂಡ್) ಮೇಲಿನ ಬಡ್ಡಿ ದರವನ್ನು ಹೆಚ್ಚಿಸಬೇಕೆಂದು ಒತ್ತಾಯ ಮಾಡಿದ್ದಕ್ಕೆ ಪ್ರಧಾನಿ ಮನಮೋಹಸಿಂಗರು ರಾಜಿನಾಮೆ ನೀಡುವುದಾಗಿ ಹೇಳಿದರು ಎಂದು ಮಾಧ್ಯಮಗಳು ದೊಡ್ಡ (ಅಪ)ಪ್ರಚಾರ ಮಾಡಿದವು. ಪ್ರಧಾನಮಂತ್ರಿಗಳು ಇಂತಹ ಬೆದರಿಕೆ ಒಡ್ಡಿದರೂ ಒಡ್ಡಿರಬಹುದು. ಆದರೆ ಇಂತಹ ಬೆದರಿಕೆ ಅವರ ನಿಜವಾದ ವರ್ಗ ಬಲವನ್ನು ತೋರಿಸುತ್ತದೆ ಹೊರತು ಬೇರೇನಲ್ಲ.

ಎಡಪಕ್ಷಗಳು ದುಡಿವ ಜನರ ಹಿತಾಸಕ್ತಿಗಳನ್ನು ಕಾಯುವ ಒಂದು ಕ್ರಮವಾಗಿ ಇಪಿಎಫ್‌ನ ಬಡ್ಡಿ ದರ ಶೇ.12ರಷ್ಟೇ ಇರ ಬೇಕೆಂಬ ಒತ್ತಾಯವನ್ನು ಮಾಡುತ್ತಲೇ ಬಂದಿವೆ. ಇದು ಬರೀ ಲಾಭ/ ಹಾನಿಯ ವಿಚಾರ ಮಾತ್ರವಲ್ಲ. ಬದಲಿಗೆ ಇದು ದುಡಿವ ಜನರಿಗೆ ಸಾಮಾಜಿಕ ಭದ್ರತೆ ನೀಡುವ ಕೆಲಸ. ಆದ್ದರಿಂದಲೇ ಇದು ಬಹಳ ಮಹತ್ವದ್ದು ಹೌದು.

ಕೆಲವು ಸುದ್ದಿಗಳ ಪ್ರಕಾರ ಇಪಿಎಫ್‌ನ ಬಡ್ಡಿ ದರವನ್ನು ಈಗಿನ ಶೇ. 8.5 ರಿಂದ ಶೇ 9.5ಕ್ಕೆ ಏರಿಸಲು ಸರ್ಕಾರ ಒಪ್ಪಿದೆಯಂತೆ. ಆದರೆ ಒಂದು ವರ್ಷದ ನಂತರ ಇದನ್ನು ಪುನರ್ವಿಮರ್ಶಿಸುವುದಾಗಿ ಅದು ಹೇಳಿದೆಯಂತೆ.

ಸರ್ಕಾರೀ ಮೂಲಗಳು ಸರ್ಕಾರ ಈಗಾಗಲೇ 129,500 ಕೋಟಿ ರೂಪಾಯಿಗಳ ಬಡ್ಡಿ ಹಣವನ್ನು ಪ್ರತಿ ವರ್ಷ ಭರಿಸಬೇಕಾಗಿದೆ. ಅದಕ್ಕೆ ಈ ಇಪಿಎಫ್ ಮೇಲಿನ ಬಡ್ಡಿ ಹೆಚ್ಚಳದಿಂದಾಗುವ 927.15 ಕೋಟಿ ರೂಪಾಯಿಗಳು ಸೇರಿಕೊಳ್ಳುತ್ತದೆ ಎನ್ನುತ್ತಿದ್ದಾರೆ. ಬಂಡವಾಳಿಗರಿಗೆ ಹಲವು ರೀತಿಯ ಸಹಾಯಧನ ಮತ್ತು ಅನುಕೂಲ ಕಾಣಿಸಿ ಬಿಡುತ್ತದೆ. ವರ್ಗ ಹಿತಾಸಕ್ತಿಗಳನ್ನು ಕೊಡಮಾಡುವ ಸರ್ಕಾರಕ್ಕೆ ಈ ಅಲ್ಪ ಮೊತ್ತ ದೊಡ್ಡದಾಗಿ ಎಂದರೆ ಇದಲ್ಲವೇ?

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಹೊಸ ಪೇಟೆಂಟ್ ಬರಲಿದೆ, ಜನಾರೋಗ್ಯಕ್ಕೆ ಆಪತ್ತು ತರಲಿದೆ

ಪೇಟೆಂಟಾ ವಿಷಯ, ನಮ್ಮ ದೇಶ ಡಂಕೆಲಾ ಒಪ್ಪಂದಕ್ಕೆ ಸಹಿ ಹಾಕಿದ ದಿನದಿಂದಲೂ, ಸುದ್ದಿ ಮಾಡಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಹೊಸ ಪೇಟೆಂಟಾ ಜಾರಿಗೆ ಬರಲಿದೆ. ಜನಾರೋಗ್ಯಕ್ಕೆ ಆಪತ್ತು ತರಲಿದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಹೊಸ ಪೇಟೆಂಟಾ ವ್ಯವಸ್ಥೆ ಜಾರಿಗೆ ಬರುವುದು, ಪೇಟೆಂಟಾ ವ್ಯವಸ್ಥೆಯನ್ನು ಜನಸಾಮಾನ್ಯರು ಎಷ್ಟರಮಟ್ಟಿಗೆ ವಿರೋಧಿಸಲಿದ್ದಾರೆ ಎಂಬುದನ್ನು ಆಧರಿಸಿದೆ. ಇದಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಚರ್ಚೆ ಮಾಡೋಣವೆ? ಭಾರತದಲ್ಲಿ ಜನಾರೋಗ್ಯ ಪರಿಸ್ಥಿತಿ ಹೇಗಿದೆ?

ನಮ್ಮಲ್ಲಿ ತಡೆಗಟ್ಟಬಹುದಾದ ರೋಗಗಳು ಈಗಲೂ ವ್ಯಾಪಕವಾಗಿ ಕಂಡುಬರುತ್ತಿವೆ. ಅಗತ್ಯ ಔಷಧಿಗಳ ಕೊರತೆ ಅನಗತ್ಯ ಔಷಧಿಗಳ ಹಾವಳಿ ಎಲ್ಲೆಲ್ಲೂ ಕಂಡುಬರುತ್ತಿದೆ. ಇತ್ತೀಚೆಗೆ ಏಡ್ಸ್ ರೋಗಿಗಳ ಸಂಖ್ಯೆ ಹೆಚ್ಚುತ್ತಿಲಿದೆ. ಹೊಸ ಪೇಟೆಂಟ್ ವ್ಯವಸ್ಥೆಯಿಂದಾಗಿ ಔಷಧಿ ಬೆಲೆಗಳು ಗಗನಕ್ಕೇರಲಿವೆ. ಅನಕ್ಷರತೆ, ಬಡತನ, ನಮ್ಮ ದೇಶದ ಹೆಚ್ಚಿನ ಜನರನ್ನು ಮುಗ್ಧ ಪ್ರೇಕ್ಷಕರನ್ನಾಗಿ ಮಾಡಿ, ಪೇಟೆಂಟ್ ಬದಲಾವಣೆಗಳು ನಮ್ಮ ಮುಂದೆ ಸದ್ದಿಲ್ಲದೇ ಹಾದು ಹೋಗಿ, ಎಲ್ಲರ ಜೀವನದ ಮೇಲೆ ಪರಿಣಾಮ ಬೀರಲಿದೆ ಯೆಂಬುದು ನಿರ್ವಿವಾದ. ಮಾಧ್ಯಮಗಳೂ ಮೂಕ ಪ್ರೇಕ್ಷಕರಂತೆ ವರ್ತಿಸುತ್ತಿವೆಯೇ ಎಂಬುದು ಹಲವರ ಅಭಿಪ್ರಾಯವಾಗಿದೆ.

ಭಾರತದಲ್ಲಿ ಔಷಧಿ ಉದ್ಯಮ ಪ್ರಾರಂಭವಾದುದು 1920 ರಲ್ಲಿ. ಪ್ರಾರಂಭದಲ್ಲಿ ಕೆಲವು ಭಾರತೀಯ ಕಂಪನಿಗಳು ಔಷಧಿ ತಯಾರಿಸಲು ಪ್ರಯತ್ನಿಸಿದರೂ, ಬಹುರಾಷ್ಟ್ರೀಯ ಕಂಪನಿಗಳೇ ಔಷಧಿ ಉದ್ಯಮದ ಹಿಡಿತವನ್ನು ಹೊಂದಿದ್ದವು. ಈ ಕಂಪನಿಗಳು ನಮಗೆ ಅಗತ್ಯವಿರುವ ಔಷಧಿಗಳನ್ನು ತಯಾರಿಸುವ ಬದಲು ತಮ್ಮಲ್ಲಿ ಲಭ್ಯವಿರುವ ಹಾಗೂ ಲಾಭತರುವ ಔಷಧಿಗಳನ್ನು ಮಾತ್ರ ತಯಾರಿಸುತ್ತಿದ್ದವು. ಔಷಧಿ ಬೆಲೆಗಳು ವಿಪರೀತ ಹೆಚ್ಚಾಗಿದ್ದವೆಂದು ಅನೇಕ ಅಧ್ಯಯನಗಳು ನಮಗೆ ತಿಳಿಸುತ್ತವೆ. ಸರಕಾರ ಇದನ್ನು ಗಮನಿಸಿ ಸಾರ್ವಜನಿಕ ಔಷಧಿ ಉದ್ಯಮವನ್ನು ಪ್ರಾರಂಭಿಸುವ ತೀರ್ಮಾನವನ್ನು ತೆಗೆದುಕೊಂಡಿತು. ಭಾರತದಲ್ಲಿ ಸಾರ್ವಜನಿಕ ಕ್ಷೇತ್ರದ ಔಷಧಿ ಉದ್ಯಮ ಪ್ರಾರಂಭವಾದ ಕೂಡಲೇ (ಹೆಚ್.ಎ.ಎಲ್., ಐ.ಡಿ.ಪಿ.ಎಲ್.) ಔಷಧಿ ಬೆಲೆಗಳು ಕಡಿಮೆಯಾದವು. ಆದರೆ ಔಷಧಿ ಕ್ಷೇತ್ರದ ಹಿಡಿತ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲೇ ಇತ್ತು ಎಂಬುದನ್ನು ಮರೆಯುವಂತಿಲ್ಲ.

ಭಾರತದ ಉದ್ದಿಮೆಗಳು ಅಭಿವೃದ್ಧಿ ಹೊಂದಲು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ ಎದುರಿಸಲು ಹಾಗೂ ಸ್ವಾವಲಂಭನೆ ಸಾಧಿಸಲು ಭಾರತಕ್ಕೆ ಪೇಟೆಂಟ್ ವ್ಯವಸ್ಥೆ ಅಗತ್ಯವಾಗಿತ್ತು. ಅದೇ ವೇಳೆಗೆ ಭಾರತದಲ್ಲಿ ಪೇಟೆಂಟ್ ವ್ಯವಸ್ಥೆಯನ್ನು ಜಾರಿಗೆ ತರಲು ಚರ್ಚೆ ಪ್ರಾರಂಭವಾಗಿತ್ತು. ಜಸ್ಟೀಸ್ ಅಯ್ಯಂಗಾರ್ ಸಮಿತಿ ಆಧಾರದ ಮೇಲೆ ಮುಂದುವರೆದ ಚರ್ಚೆ ಸುಮಾರು 12 ವರ್ಷಗಳವರೆಗೆ ಸಂಸತ್ತಿನ ಮೇಲ್ಮನೆ ಹಾಗೂ ಕೆಳಮನೆಯಲ್ಲಿ ರೂಪುಗೊಂಡು, ಭಾರತೀಯ ಪೇಟೆಂಟ್ ಕಾನೂನು 1970 ರಲ್ಲಿ ಹೊರಬಂದಿತು.

ಭಾರತೀಯ ಪೇಟೆಂಟ್ ಕಾನೂನಿನ 70 ರ ಉದ್ದೇಶಗಳು :

1. ತಾಂತ್ರಿಕತೆಯಿಂದ ದೇಶದ ಆರ್ಥಿಕತೆಯನ್ನು ಸುಧಾರಿಸುವ ಹಾಗೂ ಸ್ವಾವಲಂಬನೆ ಸಾಧಿಸುವ ಪ್ರಯತ್ನ.
2. ಸ್ಥಳೀಯ ಬೆಳವಣಿಗೆಗೆ ಒತ್ತು
3. ಆರೋಗ್ಯಕರ ಪೈಪೋಟಿ
4. ಸಂವಿಧಾನ ಪ್ರಸ್ತಾಪಿಸಿರುವ ಮೂಲಭೂತ ಹಕ್ಕಾದ Right to Health ಸಮರ್ಥಿಸುವುದು.
5. ಜ್ಞಾನ ಹಾಗೂ ತಂತ್ರಜ್ಞಾನದ ಏಕಸ್ವಾಮ್ಯ(monopoly)ವನ್ನು ತಡೆಗಟ್ಟುವುದು.

ಭಾರತೀಯ ಪೇಟೆಂಟ್ ಕಾನೂನು 70

ಒಂದು ವಸ್ತುವನ್ನು ಹಲವಾರು ವಿಧಾನದಿಂದ ತಯಾರಿಸಬಹುದಾಗಿದೆ. ಇದನ್ನು ಆಧರಿಸಿದ ಭಾರತೀಯ ಪೇಟೆಂಟ್ ಕಾನೂನು 1970 ರಲ್ಲಿ ವಿಧಾನ ಸ್ವಾಮ್ಯಕ್ಕೆ (process patent) ಪರವಾನಗಿ ನೀಡಿತು. ಅಂದರೆ ಒಂದು ಔಷಧಿಯನ್ನು ಹಲವಾರು ಕಂಪನಿಗಳು ತಯಾರಿಸಬಹುದಾಗಿದೆ, ಒಂದು ಕಂಪನಿಯು ಔಷಧಿಯನ್ನು ತಯಾರಿಸಿ ಏಕಸ್ವಾಮ್ಯ ಸಾಧಿಸುವಂತಿಲ್ಲ. ಆರೋಗ್ಯಕರ ಪೈಪೋಟಿ ಯಿಂದಾಗಿ ಔಷಧಿ ಬೆಲೆಗಳು ಕಡಿಮೆಯಾಗುತ್ತವೆ. ಪೇಟೆಂಟ್ ಕಾಲಾವಧಿ ಏಳು ವರ್ಷಗಳು ಮಾತ್ರ. ಈ ಕಾಲಾವಧಿ ದೀರ್ಘಕಾಲದವರೆಗೆ ಇದ್ದರೆ, ಔಷಧಿ ಕಂಪನಿಗಳಿಗೆ ಏಕಸ್ವಾಮ್ಯ ದೊರೆತಂತಾಗುತ್ತದೆ. ಯಾವುದೇ ಕಂಪನಿಯು ಪೇಟೆಂಟ್ ಪಡೆದು ಆ ಔಷಧಿಯನ್ನು ತಯಾರಿಸದಿದ್ದಲ್ಲಿ, ಆ ಔಷಧಿ ಅಗತ್ಯ ಹಾಗೂ ಪ್ರಯೋಜಕರ ಎಂದು ಕಂಡುಬಂದಲ್ಲಿ ಸರಕಾರ ಅದೇ ಔಷಧಿ ತಯಾರಿಸಲು ಇನ್ನೊಂದು ಕಂಪನಿಗೆ ಪರವಾನಗಿ ಕೊಡುವ ಸವಲತ್ತು ಒದಗಿಸಲಾಗಿದೆ. ಈ ಕಡ್ಡಾಯ ಪರವಾನಗಿಯಿಂದಾಗಿ (compulsory licencing) ಜನರು ಔಷಧಿಯಿಂದ ವಂಚಿತರಾಗುವುದಿಲ್ಲ (ಭಾರತೀಯ ಪೇಟೆಂಟ್ ಕಾನೂನು ಸಂಶೋಧಕನ ಹಿತವನ್ನು ಗಮನಿಸುವುದಲ್ಲದೇ ಜನಸಾಮಾನ್ಯರ ಹಿತ ಕಾಪಾಡುವುದರ ಬಗ್ಗೆ ಕಾಳಜಿ ವಹಿಸುತ್ತದೆ). ಭಾರತೀಯ ಪೇಟೆಂಟ್ ಕಾನೂನು 1970 ರಲ್ಲಿ ಜಾರಿಗೆ ಬಂದಾಗಿಂದಲೂ ಭಾರತದಲ್ಲಿ ಔಷಧಿ ಉದ್ಯಮ ಗಮನಾರ್ಹವಾಗಿ ಬೆಳೆಯಲು ಸಾಧ್ಯವಾಗಿದೆ. ಸುಮಾರು ನೂರು ಅಗತ್ಯ ಔಷಧಿಗಳನ್ನು ತಯಾರಿಸಲು ತಂತ್ರಜ್ಞಾನ ಲಭ್ಯವಾಯಿತು ಹಾಗೂ ನಾವು ಬೇರೆ ದೇಶಗಳಿಗೆ ಔಷಧಿಗಳನ್ನು ರಫ್ತು ಮಾಡಲು ಸಾಧ್ಯವಾಯಿತು.

ಭಾರತೀಯ ಪೇಟೆಂಟ್ ಕಾನೂನು 1970ರಿಂದಾಗಿ ಭಾರತಕ್ಕೆ ಮೂರನೇ ಜಗತ್ತಿನಲ್ಲಿ ಔಷಧಿ ಕ್ಷೇತ್ರದ ಮುಂದಾಳತ್ವ ದೊರಕಿತು. ಭಾರತೀಯ ಪೇಟೆಂಟ್ ಕಾನೂನು ಜಗತ್ತಿನ ಎಲ್ಲ ದೇಶಗಳಿಂದ ಪ್ರಶಂಶೆ ಪಡೆಯಿತು. ಈಗಲೂ ಭಾರತದಲ್ಲಿ ಔಷಧಿ ಬೆಲೆಗಳನ್ನು, ವಸ್ತುಸ್ವಾಮ್ಯ (product patent) ಹೊಂದಿದ ದೇಶಗಳ ಔಷಧಿ ಬೆಲೆಗಳಿಗೆ ಹೋಲಿಸಿದರೆ, ಗಮನಾರ್ಹವಾಗಿ ಕಡಿಮೆ ಇರುವುದು ಕಂಡುಬರುತ್ತದೆ.

ಮುಂದುವರಿಯುವುದು

ಸಮಾಜವಾದಿ ವಿಯೆಟ್ನಾಂನಲ್ಲಿ ಕಾರ್ಮಿಕ ವರ್ಗದ ಅನುಭವಗಳು

ಸಿಐಟಿಯು ನ ರಾಷ್ಟ್ರ ಮಟ್ಟದ ನಿಯೋಗ ಇತ್ತೀಚೆಗೆ ವಿಯೆಟ್ನಾಂ ದೇಶಕ್ಕೆ ಭೇಟಿ ನೀಡಿತ್ತು. ಸಮಾಜವಾದಿ ವಿಯೆಟ್ನಾಂ ಅದ್ಭುತ ಸಾಧನೆಗಳು ಒಂದೆಡೆ - ಹಾಗೆಯೇ ಬದಲಾದ ಸನ್ನಿವೇಶದಲ್ಲಿ ಕೆಲವು ರಂಗಗಳಲ್ಲಿ ವಿದೇಶಿ ಖಾಸಗಿ ಬಂಡವಾಳಕ್ಕೂ ಅವಕಾಶ ಕಲ್ಪಿಸಲಾಗಿದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿನಂತೆ ರತ್ನಗಂಬಳಿ ಹಾಸಿ, ಎಲ್ಲವನ್ನೂ ಆದರತ್ರ ಬಾಗಿಸುವ, ಬಾಚಲು - ದೋಚಲು ನೀಡಿದ ಅವಕಾಶಗಳಂತಲ್ಲ... ಹಾಗಾದರೆ ಏನಿದೆ ಅಲ್ಲಿನ ವಿಶಿಷ್ಟತೆ ? ಕಾರ್ಮಿಕವರ್ಗದ ಪರಿಸ್ಥಿತಿಯೇನು? ನಿಯೋಗದಲ್ಲಿದ್ದ ಆಂಧ್ರಪ್ರದೇಶದ ಪ್ರಧಾನ ಕಾರ್ಯದರ್ಶಿ ಎಸ್.ವೀರಯ್ಯನವರಿಂದ....

"ವಿಯೆಟ್ನಾಂ" ದೇಶವೆಂದರೇ ನೆನಪಾಗುವುದು ಅಮೇರಿಕಾ ಸಾಮ್ರಾಜ್ಯಶಾಹಿಯ ದೌರ್ಜನ್ಯದ ವಿರಾಟ್‌ರೂಪ ಮತ್ತು ಆ ದೌರ್ಜನ್ಯದ ವಿರುದ್ಧ ಮಹಾನಾಯಕ ಕಾಂ.ಹೊಚಿಮಿನ್ ಅವರ ನೇತೃತ್ವದಲ್ಲಿ ಅಮೇರಿಕಾ ಸೈನ್ಯವನ್ನು ಹಿಮ್ಮೆಟ್ಟಿಸಿದ ಧೀರೋದಾತ್ತ ಜನರ ಹೋರಾಟ. ಕಾರ್ಮಿಕ-ರೈತಾಪಿ ಜನತೆಯ ಸಂಘಟಿತ ಹೋರಾಟದಿಂದ ಯಶಸ್ವಿ ಕ್ರಾಂತಿಯನ್ನು ನಡೆಸಿ ಸಮಾಜವಾದಿ ಸಮಾಜ ವ್ಯವಸ್ಥೆ ಸ್ಥಾಪನೆಯಾಗಿರುವುದು ವಿಯಟ್ನಾಂ ದೇಶದಲ್ಲಿ.

ವಿಯಟ್ನಾಂ ದೇಶದ ಜನರಲ್ ಕಾನ್‌ಫೆಡರೇಷನ್ ಆಫ್ ಲೇಬರ್ (VGCL) ಆಹ್ವಾನದ ಮೇರೆಗೆ ಸಿಐಟಿಯು ಪ್ರತಿನಿಧಿಗಳ ತಂಡ ಅಕ್ಟೋಬರ್ 2 ರಿಂದ 8ರವರೆಗೆ ಪ್ರವಾಸ ನಡೆಸಿತು. ಸಿಐಟಿಯು ತಂಡದಲ್ಲಿ ಪಶ್ಚಿಮ ಬಂಗಾಳದ ಕಾರ್ಮಿಕ ಮಂತ್ರಿ ಮತ್ತು ಸಿಐಟಿಯು ರಾಷ್ಟ್ರೀಯ ಉಪಾಧ್ಯಕ್ಷರಾದ ಮಹಮ್ಮದ್ ಅಮೀನ್ ಅವರು ತಂಡದ ನಾಯಕರಾಗಿದ್ದರು. ಕೇರಳದ ಮೆರ್ಸಿಕುಟ್ಟಿ ಅಮ್ಮ, ಅಸ್ಸಾಂ ರಾಜ್ಯದ ಪ್ರಕಾಶ್ ಹಾಗೂ ಆಂಧ್ರಪ್ರದೇಶದ ಎಸ್.ವೀರಯ್ಯ ಭಾಗವಹಿಸಿದ್ದರು. ಸಮಾಜವಾದಿ ವಿಯಟ್ನಾಂ ದೇಶದಲ್ಲಿ ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಲು ಸಿಐಟಿಯು ತಂಡ ಉತ್ಸಾಹದಿಂದ ಪ್ರವಾಸ ನಡೆಸಿತು. ಮರು ಪ್ರಯಾಣದ ಸಂದರ್ಭದಲ್ಲಿ 2 ದಿನಗಳ ಕಾಲ ಥಾಯ್‌ಲೆಂಡ್ ರಾಜಧಾನಿ ಬ್ಯಾಂಕಾಕ್ ಗೂ ಭೇಟಿ ನೀಡಿತು. ಇದು ವಿಶ್ವಬ್ಯಾಂಕ್‌ನ ನೀತಿಗಳ ನಿಜರೂಪ ಅರ್ಥ ಮಾಡಿಕೊಳ್ಳಲು ಸಹಾಯಕವಾಗಿತ್ತು.

ವಿಸ್ತೃತ ಭೇಟಿ - ಸಂವಾದ

ವಿಯಟ್ನಾಂ ದೇಶದ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಲು ತಂಡ ಪ್ರಯತ್ನಿಸಿದೆ. ಈ



ಹೊಚಿಮಿನ್

ಸಂದರ್ಭದಲ್ಲಿ ಅಧಿಕೃತವಾಗಿ ನಿಗದಿಗೊಳಿಸಿದ್ದ ಕಾರ್ಯಕ್ರಮವಷ್ಟೇ ಅಲ್ಲದೇ ಗ್ರಾಮೀಣ ರೈತರು, ಕಾರ್ಮಿಕರೊಂದಿಗೆ ನೇರವಾಗಿ ತಂಡದಲ್ಲಿದ್ದ ಸಂಗಾತಿಗಳು ಚರ್ಚಿಸಿದರು. ಒಟ್ಟಾರೆ ಅನುಭವವೆಂದರೆ ವಿಯಟ್ನಾಂನಲ್ಲಿ ಜನರು ಊಟ, ಬಟ್ಟೆ, ಮನೆ, ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದಾರೆ. ಜನರಲ್ಲಿ ಅತೃಪ್ತಿ, ಆತಂಕ ಕಾಣಬರುವುದಿಲ್ಲ. ಪ್ರಶಾಂತವಾದ ಜೀವನ ನಡೆಸುತ್ತಿದ್ದಾರೆ.

ಉತ್ಪಾದನಾ ಚಟುವಟಿಕೆಗಳಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ. ಸುಮಾರು 10 ವರ್ಷಗಳಿಂದ ಅಲ್ಲಿ ಬೆಲೆ ಏರಿಕೆಯೇ ಇಲ್ಲವೆಂಬಂತಿದೆ. ಅಲ್ಲಿ ಬೌದ್ಧ, ಕ್ರೈಸ್ತ, ಮುಸಲ್ಮಾನ ಧರ್ಮದ ಅನುಯಾಯಿಗಳು ಇದ್ದಾರೆ. ಇವರೊಂದಿಗೆ 54 ಬುಡಕಟ್ಟು ಜನ ವಿಭಾಗಗಳು ಇದ್ದಾರೆ. ದೇಶದ ಒಟ್ಟು ಜನಸಂಖ್ಯೆ 8 ಕೋಟಿ. ದೇಶದ ಪ್ರತಿಯೊಂದು ಕುಟುಂಬದಲ್ಲಿ ಬಹುತೇಕ ಒಬ್ಬನಾದರೂ ಯುದ್ಧದಲ್ಲಿ ಭಾಗವಹಿಸಿದವರಾಗಿದ್ದಾರೆ. ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡಿರುವ ಶ್ರೀಮತಿ ಗುಯೆನ್ ದೀಯಾಯ ಹಾಗೂ ತನ್ನ ನಾಲ್ಕು ಗಂಡು ಮಕ್ಕಳನ್ನು ಕಳೆದುಕೊಂಡ ತಾಯಿ ಒಬ್ಬರನ್ನು ಮತ್ತು ತೀವ್ರ ಗಾಯಗೊಂಡಿದ್ದ ಗುಯೇನ್ ಡೈಟ್ರಾಂಗ್ ಅವರನ್ನು ಸಿಐಟಿಯು ತಂಡ ಭೇಟಿ ಮಾಡಿ ಮಾತನಾಡಿತು. ಈ ಎಲ್ಲರ ಮತ್ತು ಇಂತಹ ಎಲ್ಲರ ಪೋಷಣೆಯ ಜವಾಬ್ದಾರಿಯನ್ನು ಸಮಾಜವಾದಿ ಸರ್ಕಾರವೇ ನೋಡಿಕೊಳ್ಳುತ್ತಿದೆ.

ಇಡೀ ನೆಲದಲ್ಲಿ ಬಾಂಬ್ ಬಿತ್ತಿದ ಸಾಮ್ರಾಜ್ಯಶಾಹಿ

ಆದರೂ ತಲೆ ಎತ್ತಿ ನಿಂತಿತು ವಿಯಟ್ನಾಂ

ಸುಮಾರು 30 ವರ್ಷಗಳ ಹಿಂದಿನ ಸಾಮ್ರಾಜ್ಯಶಾಹಿ ವಿರುದ್ಧ ಸುದೀರ್ಘವಾದ ಯುದ್ಧದ ನಂತರ 1975 ರ ನಂತರವಷ್ಟೇ ವಿಯಟ್ನಾಂ ಜನರು ನಿರಾಳವಾಗಿ ಉಸಿರಾಡಲು ಸಾಧ್ಯವಾಗಿದೆ. ಬಹುಶಃ ವಿಯಟ್ನಾಂನಲ್ಲಿ ಅಮೇರಿಕಾ ಬಾಂಬುಗಳ ಧಾಳಿ ನಡೆಯದಿರುವ ಪ್ರದೇಶವೇ ಇರಲಿಕ್ಕಿಲ್ಲ. ಆದರೂ ಯುದ್ಧದ ನಂತರ 10 ವರ್ಷಗಳಲ್ಲೇ ಗಣನೀಯವಾದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿದೆ. ಅದೇ ಸಂದರ್ಭದಲ್ಲಿ ಕಂಪೂಚಿಯಾಗೇ ಸೈನ್ಯವನ್ನು ಕಳುಹಿಸಬೇಕಾದ ಅನಿವಾರ್ಯ ಪರಿಸ್ಥಿತಿಯು ದೇಶಕ್ಕೆ ದೊಡ್ಡ ಹೊರೆಯೇ ಆಗಿತ್ತು. ಅಷ್ಟರಲ್ಲೇ ಸೋವಿಯತ್ ಒಕ್ಕೂಟ ಶಿಥಿಲವಾಗಿದ್ದು ವಿಯಟ್ನಾಂ ದೇಶಕ್ಕೆ ದೊರೆಯುತ್ತಿದ್ದ ಸಹಾಯಗಳು ನಿಂತು ಹೋಗಿ ಬೆನ್ನು ಮೂಳೆಯೇ ಮುರಿದಂತಾಯಿತು. ಸಾಧನೆಯಾಗಿದ್ದ ಅಭಿವೃದ್ಧಿ ದೇಶದ ಅವಶ್ಯಕತೆಗಳಿಗೆ ಸಾಲದಾಗಿತ್ತು. ಇಂತಹ ಸಂದರ್ಭದಲ್ಲಿ ಇರುವ ಸಂಪತ್ತು ಅವಕಾಶಗಳಲ್ಲೇ ಸುಧಾರಿಸಿಕೊಳ್ಳುವುದು ಹೇಗೆ? ಅಥವಾ ಅಭಿವೃದ್ಧಿ ಸಾಧನೆ ಹೇಗೆ ಎಂಬುದು ಕಠಿಣವಾಗಿತ್ತು. ಅಭಿವೃದ್ಧಿ ಕೆಲಸಗಳಿಗೆ ತಂತ್ರಜ್ಞಾನ ಹಾಗೂ ಬಂಡವಾಳದ ಕೊರತೆ ಬಹಳ ಸಂಕಷ್ಟ ಉಂಟುಮಾಡಿತು. ಇಂತಹ ಪರಿಸ್ಥಿತಿಗಳಲ್ಲೂ ಸಾರ್ವಜನಿಕ ಕ್ಷೇತ್ರ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಆಯಕಟ್ಟಿನ ಪಾತ್ರವಹಿಸುತ್ತಿದೆ. ಅದರೊಟ್ಟಿಗೆ ಸ್ವಲ್ಪ ಪ್ರಮಾಣದ ಖಾಸಗೀ ರಂಗಕ್ಕೆ ಪರವಾನಿಗೆ ನೀಡಲಾಗಿದೆ. ಕೃಷಿ ಮತ್ತು ಇತರ ರಂಗಗಳಲ್ಲಿ ಸುಧಾರಣೆಗಳನ್ನು ಮಾಡಿದ್ದಾರೆ. 1996 ರಿಂದ ಸಮಾಜವಾದಿ ಮಾರುಕಟ್ಟೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದಾರೆ. ಅತಿ ಕಡಿಮೆ ಸಮಯದಲ್ಲೇ ಉತ್ತಮ ಬೆಳವಣಿಗೆ ಸಾಧಿಸಲು ಸಾಧ್ಯವಾಗಿದೆ.

ನೀತಿ ನಿರೂಪಣೆ ಮಾಡುವ ನಿರ್ಣಯಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆ

ಕೈಗಾರಿಕೆಗಳಲ್ಲಿ ನೀತಿ ನಿರೂಪಣೆಯ ತೀರ್ಮಾನಗಳಲ್ಲಿ ಕಾರ್ಮಿಕರು ಪಾಲುದಾರರಾಗಿದ್ದಾರೆ. ನೀತಿ ನಿರೂಪಣೆಯ ಕರಡು ಸೂಚನೆಗಳನ್ನು ಕಾರ್ಮಿಕರಿಗೆ ಲಿಖಿತವಾಗಿ ಒದಗಿಸಲಾಗುತ್ತದೆ. ಕಾರ್ಮಿಕರ ಅಭಿಪ್ರಾಯ ಸಂಗ್ರಹಿಸಿದ ಮೇಲೆ ಸಂಘದ ಸಮಿತಿಯಲ್ಲಿ ಚರ್ಚೆ ಮಾಡುತ್ತಾರೆ. ಅನಂತರ ಕಾರ್ಮಿಕರ ಪ್ರತಿನಿಧಿಗಳಾಗಿರುವ ಮುಖಂಡರು ಆಡಳಿತ ವರ್ಗದೊಂದಿಗೆ ಚರ್ಚೆ ಮಾಡುತ್ತಾರೆ. ಎಲ್ಲರಿಗೂ ಒಪ್ಪಿಗೆಯಾದ ನಿರ್ಣಯಕ್ಕೆ ಬಂದ ಮೇಲೆ ಆ ನಿರ್ಣಯಗಳನ್ನು ಜಾರಿಗೊಳಿಸಲಾಗುತ್ತದೆ. ಕಾರ್ಮಿಕರಿಗೆ ಸಂಬಂಧಿಸಿದ ಯಾವುದೇ ವಿಚಾರದ ಕುರಿತು ಕಾರ್ಮಿಕರೊಂದಿಗೆ ಚರ್ಚೆಗಳನ್ನು ಸಮಾಲೋಚನೆ ಮಾಡದೇ ವಿಯಟ್ನಾಂ ಪಾರ್ಲಿಮೆಂಟ್‌ನಲ್ಲಿ ಯಾವುದೇ ನಿರ್ಣಯ ಕೈಗೊಳ್ಳುವುದಿಲ್ಲ. ಪ್ರಧಾನಮಂತ್ರಿ ಹಾಗೂ ಕಾರ್ಮಿಕ ಮಂತ್ರಿಗಳು ಕಾಲಕಾಲಕ್ಕೆ ಕಾರ್ಮಿಕ ಸಂಘಗಳ ಪ್ರತಿನಿಧಿಗಳೊಂದಿಗೆ ಸಭೆ ಸಮಾವೇಶಗಳನ್ನು ನಡೆಸುತ್ತಾರೆ. ಕಾರ್ಮಿಕರ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಕಂಪನಿಗಳ ಆಧುನೀಕರಣ ಮಾಡದೆಯೇ ಕಾರ್ಮಿಕರಿಂದ ಉತ್ಪಾದಕತೆ ಹೇಗೆ ಹೆಚ್ಚಿಸುವುದೆಂಬುದನ್ನು ಪ್ರಯತ್ನಿಸುತ್ತಿದ್ದಾರೆ. ಕಾರ್ಮಿಕರನ್ನು ಉದ್ಯೋಗದಿಂದ ತೆಗೆದು ಹಾಕದಂತೆ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ವಿಯಟ್ನಾಂ ದೇಶದಲ್ಲೂ ಅಲ್ಲಿರುವ ಕಾರ್ಮಿಕರಲ್ಲಿ ಶೇ.40 ಕಾರ್ಮಿಕರು ಇಂದಿಗೂ ಯಾವುದೇ ಕಾರ್ಮಿಕ ಸಂಘದಲ್ಲಿ ಸದಸ್ಯರಾಗದೇ ಇದ್ದವರು ಇದ್ದಾರೆ. ಈ ಹಿನ್ನೆಲೆಯಲ್ಲಿ ವಿಜಿಸಿಎಲ್ ವಿಯಟ್ನಾಂ ಕಾರ್ಮಿಕರ ಫೆಡರೇಷನ್ ಈ ಒಂದು ವರ್ಷದಲ್ಲಿ 10 ಲಕ್ಷ ಕಾರ್ಮಿಕರನ್ನು ಕಾರ್ಮಿಕ ಸಂಘದ ಸದಸ್ಯರಾಗಿ ಹೆಚ್ಚು ನೋಂದಾಯಿಸುವ ಗುರಿಯನ್ನು ಹೊಂದಿದೆ. ಕಾರ್ಮಿಕರ ಸಂಬಳ/ವೇತನದಲ್ಲಿ ಶೇ.1ರಷ್ಟು ಸಂಘದ ಚಂದಾ ಆಗಿ ಕಾರ್ಮಿಕರು ಪಾವತಿ ಮಾಡುತ್ತಾರೆ. ಆಡಳಿತವರ್ಗವು ಕಾರ್ಮಿಕರ ವೇತನದ ಶೇ.3 ರಷ್ಟು ಸಂಘಕ್ಕೆ ಕೊಡುಗೆ ನೀಡುತ್ತದೆ. ಯೂನಿಯನ್‌ಗಳು ಕೆಲವು ಇತರ ಚಟುವಟಿಕೆಗಳ ಮೂಲಕ ಕೂಡ ಹಣವನ್ನು ಒಟ್ಟುಗೂಡಿಸುತ್ತವೆ.

ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು

ಸಿಐಟಿಯು ತಂಡವು ಗೊಬ್ಬರ ಕಾರ್ಖಾನೆ, ಕೇಬಲ್ ಫ್ಯಾಕ್ಟರಿ, ಆಟೋಮೊಬೈಲ್ ಮತ್ತು ಹೈಡ್ರೋ ಎಲೆಕ್ಟ್ರಿಕ್ ಪವರ್ ಸ್ಟೇಷನ್‌ಗಳನ್ನು ಸಂದರ್ಶಿಸಿತು. ಗೊಬ್ಬರ ಕಾರ್ಖಾನೆಯಲ್ಲಿ ದುರ್ನಾತವಾಗಲಿ ಇತರ ಕಲ್ಮಶವಾಗಲಿ ಇರಲಿಲ್ಲ. ಕಾರ್ಮಿಕರೆಲ್ಲರೂ ಆರೋಗ್ಯಕರವಾದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕೆಲಸದ ಸಮಯದಲ್ಲಿ 2 ಹೊತ್ತಿನ ಊಟ ನೀಡಲಾಗುತ್ತದೆ. 3 ಸಲ ಬಿಸಿ ಹಾಲನ್ನು ಕಾರ್ಮಿಕರಿಗೆ ಕೊಡಲಾಗುತ್ತಿದೆ. ಬಿಸಿ ನೀರಿನ ಸ್ನಾನಕ್ಕೆ ಬಾತ್‌ರೂಮುಗಳ ಸೌಲಭ್ಯವೂ ಇದೆ. ಕಾರ್ಮಿಕರು ಕೆಲಸ ಮುಗಿದ ನಂತರ ಸ್ನಾನ ಮಾಡಿ ಹೋಗಬಹುದು. ವರ್ಷಕ್ಕೆ ಎರಡು ಬಾರಿ ಪ್ರವಾಸ ಯಾತ್ರೆಗಳನ್ನು ನಿರ್ವಹಿಸಲಾಗುತ್ತದೆ. ಈ ಪ್ರವಾಸಗಳ ಎಲ್ಲಾ ಖರ್ಚು ಆಡಳಿತ ಮಂಡಳಿಯೇ ವಹಿಸಿಕೊಳ್ಳುತ್ತದೆ. ಎಲ್ಲಾ ಕಾರ್ಮಿಕರಿಗೂ ಮೆಡಿಕಲ್ ಇನ್ಸೂರೆನ್ಸ್ ಕಡ್ಡಾಯವಾಗಿರುತ್ತದೆ.

ದುಡಿಯುವ ಮಹಿಳೆಯರಿಗೆ ಹೆರಿಗೆ ರಜೆ 6 ತಿಂಗಳ ಕಾಲ ನೀಡಲಾಗುತ್ತದೆ. ಅಷ್ಟೇ ಅಲ್ಲ ಅನಂತರ ಒಂದು ವರ್ಷದ ಕಾಲ ಡ್ಯೂಟಿ ಸಮಯದಲ್ಲಿ ಮಗುವಿಗೆ ಹಾಲುಣಿಸಲು ಪ್ರತಿದಿನ ಒಂದು ಗಂಟೆಯ ಪರವಾನಿಗೆ ನೀಡಲಾಗುತ್ತದೆ. ಕಾರ್ಮಿಕರ ವೇತನ ಹಾಗೂ ಆಡಳಿತ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುವವರ ವೇತನದ ನಡುವೆ ಅಂತರ ಮೂರು ಪಟ್ಟಿಗಿಂತ ಮೀರುವುದಿಲ್ಲ.

ಮಾರುಕಟ್ಟೆ ವ್ಯವಸ್ಥೆಯ ಪ್ರಭಾವ :

ವಿಮಾನಯಾನ, ರಕ್ಷಣೆ, ಸಮಾಚಾರದಂತಹ ಆಯಕಟ್ಟಿನ ರಂಗಗಳಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶವಿಲ್ಲ. ದೇಶದ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಒಪ್ಪಿದರೇ ಮಾತ್ರ ಯಾವುದೇ ರಂಗದಲ್ಲಿ ಖಾಸಗಿ ಬಂಡವಾಳಕ್ಕೆ ಅವಕಾಶ ನೀಡಲಾಗುವುದು. ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾಡುವ ಆಡಳಿತ ವರ್ಗದವರಿಗೆ ಜೈಲು ಶಿಕ್ಷೆ, ಲೈಸೆನ್ಸ್ ರದ್ದು ಹಾಗೂ ದೇಶ ಬಹಿಷ್ಕರಣೆಯಂತಹ ಶಿಕ್ಷೆಗಳ ಮೂಲಕ ಕ್ರಮವಹಿಸಲಾಗುತ್ತಿದೆ. ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಎಲ್ಲಾ ಹಂತಗಳಲ್ಲಿ ಅಡ್ಮಿನಿಸ್ಟ್ರೇಟಿವ್ ಕೌನ್ಸಿಲ್ಸ್ ಏರ್ಪಾಟು ಮಾಡಲಾಗಿದೆ. ಆದರೂ ಕಾನೂನುಗಳಲ್ಲಿರುವ ಕೊರತೆಗಳನ್ನು ಉಪಯೋಗಿಸಿಕೊಂಡು ಖಾಸಗೀ ಆಡಳಿತ ಮಂಡಳಿಗಳು ಮೋಸ ಮಾಡಲು ಪ್ರಯತ್ನಗಳು ನಡೆದದ್ದು ಇದೆ. ಕಾನೂನುಬದ್ಧ ಸೌಲಭ್ಯಗಳನ್ನು, ಹಕ್ಕುಗಳನ್ನು ನಿರಾಕರಿಸುವ ಪ್ರಯತ್ನಗಳನ್ನು ಖಾಸಗೀ ಸಂಸ್ಥೆಗಳು ನಡೆಸುತ್ತವೆ. ಮೊದ ಮೊದಲು ಕಾರ್ಮಿಕರು ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಿಗಿಂತಲೂ ವಿದೇಶಿ ಕಂಪನಿಗಳ ಕಡೆ ಒಲವು ತೋರಲು ಆರಂಭಿಸಿದ್ದರು. ಆದರೆ ನಂತರ ವಿದೇಶಿ ಕಂಪನಿಗಳಲ್ಲಿ ಉದ್ಯೋಗದ ಭದ್ರತೆ ಇಲ್ಲದಿರುವುದು, ನಿಜವೇತನಗಳು ಕಡಿಮೆ, ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವುದು ಮುಂತಾದ ಕಾರಣಗಳಿಂದ ಕೆಟ್ಟ ಅನುಭವವಾಗಿ ಮತ್ತೆ ಸಾರ್ವಜನಿಕ ಕ್ಷೇತ್ರದ ಕಡೆಗೆ ವಾಲುತ್ತಿದ್ದಾರೆ. 1996 ರ ನಂತರ ಇಂತಹ ಸಮಸ್ಯೆಗಳಿಂದಾಗಿ 723 ಮುಷ್ಕರಗಳು ವಿಯಟ್ನಾಂನಲ್ಲಿ ನಡೆದಿವೆ.

ಎಲ್ಲಾ ಮುಷ್ಕರಗಳು ಒಂದೆರಡು ದಿನಗಳಲ್ಲಿ ಸ್ಥಳೀಯವಾಗಿ ಚರ್ಚಿಸಿ ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ.

ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯಲ್ಲಿ ಸಮಸ್ಯೆಗಳನ್ನು ಹೇಗೆ ಎದುರಿಸಬೇಕೆಂಬುದರ ಬಗ್ಗೆ ಜಗತ್ತಿನ ಇತರೆಡೆಗಳ ಅನುಭವದಿಂದ ಕಲಿಯುತ್ತಿದ್ದೇವೆಂದು ವಿಯಟ್ನಾಂ ದೇಶದ ಕಾರ್ಮಿಕ ಮುಖಂಡರು ಸಿಐಟಿಯು ನಿಯೋಗದೊಂದಿಗೆ ಚರ್ಚೆಯಲ್ಲಿ ತಿಳಿಸಿದರು.

ಅನು: ಎಸ್.ಪ್ರಸನ್ನಕುಮಾರ್

ಸೌಜನ್ಯ, ಸಿಐಟಿಯು ಸಂದೇಶ.

‘ಏಶಿಯನ್ ಟೈಗರ್’ ಥಾಯ್‌ಲೆಂಡ್‌ನಲ್ಲಿ ಸಂಕಟವೋ ಸಂಕಟ!

‘ಥಾಯ್ ಲ್ಯಾಂಡ್’ ದೇಶವನ್ನು ಏಶ್ಯಾ ಖಂಡದ ಅತ್ಯಂತ ತೀವ್ರ ಅಭಿವೃದ್ಧಿ ಹೊಂದುತ್ತಿರುವ "ಏಶ್ಯಾ ಟೈಗರ್" ಗಳಲ್ಲಿ ಒಂದು ಎಂದು ಪರಿಪರಿಯಾಗಿ ಬಣ್ಣಿಸಲಾಗುತ್ತಿತ್ತು. ಅಲ್ಲಿಯ ಅಭಿವೃದ್ಧಿಯನ್ನು ಭೂತಕನ್ನಡಿಯಲ್ಲಿ ತೋರಿಸಿ ಥಾಯ್‌ಲ್ಯಾಂಡ್ ಟೂರಿಜಂ ಬೆಳವಣಿಗೆಯೊಂದಿಗೆ ಪ್ರಕಾಶಿಸುತ್ತಿದೆ ಎಂದು ವರ್ಣನೆ ಮಾಡಲಾಗಿತ್ತು. ಹೀಗೆ ವಿಶ್ವಬ್ಯಾಂಕ್ ನೀತಿಗಳ ಜಾರಿಯ ಫಲ ಈ ಅಭಿವೃದ್ಧಿ ಎಂದು ಹಾಡಿ ಹೊಗಳಲಾಗುತ್ತಿತ್ತು. ದಿವಾಳಿ ಆಗುತ್ತಿರುವ ರೈತರು, ಸಂಕಷ್ಟದಲ್ಲಿರುವ ಕಾರ್ಮಿಕರ, ಮಹಿಳೆಯರ, ಕಡು ಬಡವರ ಪರಿಸ್ಥಿತಿ ಕುರಿತು ಥಾಯ್‌ಲ್ಯಾಂಡ್‌ನ ಬಂಡವಾಳಶಾಹಿ ಪತ್ರಿಕೆಗಳು ಏನನ್ನೂ ಬರೆಯದೇ ಬಂಡವಾಳಶಾಹಿ ವ್ಯವಸ್ಥೆ ಪ್ರಕಾಶಮಾನವಾಗಿದೆ ಎಂದು ಮಾತ್ರ ತೋರಿಸಲು ಯತ್ನಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ರೈತರು ಎಲ್ಲಾ ಕಳೆದುಕೊಂಡು ಪಟ್ಟಣಗಳಿಗೆ ವಲಸೆ ಬರುವುದು ಸಾಮಾನ್ಯವಾಗಿದೆ. ಕೆಲಸ ಮಾಡಿಕೊಂಡು ತಿನ್ನಲು ಅವಕಾಶಗಳಿಲ್ಲದೇ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. "ಟೂರಿಜಂ" ಹೆಸರಲ್ಲಿ ನಡೆಯುತ್ತಿರುವ ಅಪ್ಪಟ ವ್ಯಭಿಚಾರ, ಬಡಮಹಿಳೆಯರ ತೀವ್ರ ಶೋಷಣೆ, ಆಕ್ರಂದನ, ವೇಶ್ಯಾವಾಟಿಕೆ ಭಾರಿ ಮಟ್ಟದಲ್ಲಿದೆ. ಜಗತ್ತಿನ ಏಡ್ಸ್ ರೋಗದ ಭಾದಿತರಲ್ಲಿ ಥಾಯ್‌ಲ್ಯಾಂಡ್ ಮೊದಲ ಸ್ಥಾನದಲ್ಲಿರುವುದನ್ನು ನೋಡಿದರೆ ಸಮಸ್ಯೆಯ ತೀವ್ರತೆ ಗೊತ್ತಾಗುತ್ತದೆ. ಕಾರ್ಮಿಕರು ಸಂಘ ಮಾಡಿಕೊಳ್ಳಲು ಪ್ರಯತ್ನಿಸಿದಲ್ಲಿ ಕೆಲಸ ಕಳೆದುಕೊಳ್ಳುವುದು ಸಾಮಾನ್ಯವಾಗಿದೆ. ಪ್ರತಿಕ್ಷಣ ಭಯ ಮತ್ತು ಆತಂಕದಲ್ಲೇ ಬದುಕಬೇಕಾಗಿದೆ. ರಾತ್ರಿ 8 ಗಂಟೆಯ ನಂತರ ರಸ್ತೆಯಲ್ಲಿ ಓಡಾಡುವುದು ಅಪಾಯಕಾರಿ ಎಂದು ಸ್ಥಳೀಯ ಜನರು ಹೇಳುತ್ತಾರೆ. ಶಾಂತಿ ಭದ್ರತೆಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ.

ಥಾಯ್‌ಲ್ಯಾಂಡ್ ವಿಶ್ವಬ್ಯಾಂಕ್ ಮಾದರಿಯ ಅಭಿವೃದ್ಧಿ ಮಾರ್ಗಕ್ಕೂ ಸಮಾಜವಾದಿ ವಿಯಟ್ನಾಂ ಅಭಿವೃದ್ಧಿ ಮಾರ್ಗಕ್ಕೂ ಇರುವ ಅಜಗಜಾಂತರ ವ್ಯತ್ಯಾಸವೆಂಬುದನ್ನು ತಿಳಿಯಲು ಈ ಪ್ರವಾಸ ಸಿಐಟಿಯು ತಂಡಕ್ಕೆ ಸಹಕಾರಿಯಾಗಿದೆ. ಈಗ ನಮ್ಮ ದೇಶದ ಆಳುವ ಜನ ತೋರುವ ಮಾರ್ಗದಲ್ಲಿ ಮುಂದುವರೆದರೇ ಭಾರತ ದೇಶದ ಗತಿ ಏನಾಗುತ್ತದೆಂಬುದು ಕೂಡ ಅರ್ಥವಾಗುತ್ತದೆ. ನಮ್ಮ ದೇಶ ಇಂತಹ ಸ್ಥಿತಿಗೆ ಹೋಗದಂತೆ ಮಾಡುವ ಜವಾಬ್ದಾರಿ ಭಾರತದ ಕಾರ್ಮಿಕ ವರ್ಗದ ಮೇಲಿದೆ.

ಮೈಸೂರಿನಲ್ಲಿ ಬಿಟಿಆರ್ ಮತ್ತು ಎಕೆಜಿಯವರ ಜನ್ಮಶತಾಬ್ದಿಯ ಅಂಗವಾಗಿ ವಿಚಾರಸಂಕಿರಣ

ಡಿಸೆಂಬರ್ 4 ರಂದು ಸಿಪಿಐ(ಎಂ)ನ ಮೈಸೂರು ಜಿಲ್ಲಾಸಮಿತಿ ಕಾಂ.ಬಿಟಿಆರ್ ಮತ್ತು ಎಕೆಜಿಯವರ ಜನ್ಮ ಶತಾಬ್ದಿಯ ಅಂಗವಾಗಿ "ಇಂದಿನ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ" ಎಂಬ ವಿಚಾರ ಸಂಕಿರಣ ನಡೆಸಿತು. ಭಾರತಿದಾಸನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ವೆಂಕಟೇಶ್ ಅತ್ರೇಯ ಮತ್ತು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ವಿಷಯ ಮಂಡನೆ ಮಾಡಿದರು.

ವರದಿ: ಸುಬ್ರಹ್ಮಣ್ಯ ಮತ್ತು ಜಿ.ಎಸ್.ಮಣಿ

ಮಾರ್ಕ್ಸ್‌ವಾದ ಇಂದಿಗೂ ಅತ್ಯಂತ ಪ್ರಸ್ತುತ

ಮಾರ್ಕ್ಸ್‌ವಾದದ ಪ್ರಸ್ತುತತೆ : ಪ್ರತಿಪಾದನೆ

ಜಾಗತಿಕವಾಗಿ ಹಾಗೂ ಭಾರತದ ಸಂದರ್ಭಗಳೆರಡಲ್ಲೂ ಮಾರ್ಕ್ಸ್‌ವಾದ ಅತ್ಯಂತ ಪ್ರಸ್ತುತ ಎಂದು ಭಾರತೀದಾಸನ್ ವಿಶ್ವವಿದ್ಯಾಲಯದ ಡಾ.ವೆಂಕಟೇಶ್ ಅತ್ರೇಯ ಮತ್ತು ಜಿ.ಎನ್.ನಾಗರಾಜ್ ಪ್ರತಿಪಾದಿಸಿದರು.

ಮೈಸೂರಿನಲ್ಲಿ ಕಾಂ. ಎ.ಕೆ.ಗೋಪಾಲನ್ ಮತ್ತು ಕಾಂ.ಬಿ.ಟಿ.ರಣದೀವೆ ಜನ್ಮಶತಮಾನೋತ್ಸವದ ಅಂಗವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಈ ಪ್ರತಿಪಾದನೆ ಮಾಡಿದರು. ಅತ್ರೇಯ 'ಇಂದಿನ ಜಗತ್ತಿಗೆ ಮಾರ್ಕ್ಸ್‌ವಾದದ ಪ್ರಸ್ತುತತೆಯ ಮೇಲೆ ವಿಷಯ ಮಂಡಿಸಿದರು. ಕಾಂ. ಜಿ.ಎನ್.ನಾಗರಾಜ್ 'ಭಾರತದ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ ಎಂಬ ವಿಷಯಮಂಡನೆ ಮಾಡಿದರು.

ಮೊದಲು ಮಾತನಾಡಿದ ಅತ್ರೇಯ ಮಾರ್ಕ್ಸ್‌ವಾದಿ ಹೋರಾಟಕ್ಕೆ ಕಾಂ.ಎ.ಕೆ.ಜಿ ಮತ್ತು ಕಾಂ.ಬಿಟಿಆರ್ ಅವರ ಕೊಡುಗೆಯನ್ನು ಸ್ಮರಿಸಿದರು.


ಮಾರ್ಕ್ಸ್‌ವಾದ ಬಂಡವಾಳಶಾಹಿಯ ವಿರುದ್ಧದ ಹೋರಾಟಗಳಿಂದಲೇ ಉದ್ಭವಿಸಿದ್ದು, ಆದ್ದರಿಂದ ಅದು ಬಂಡವಾಳಶಾಹಿಗಿಂತ ಮೊದಲು ಹುಟ್ಟುವುದು ಸಾಧ್ಯವಿರಲಿಲ್ಲ ಎಂದರು. ಮಾರ್ಕ್ಸ್‌ವಾದ ಸಮಯದ ಓರೆಗಲ್ಲಿನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ ನಿಂತಿದೆ ಎಂದರು. ಇಂದು ಮಾರ್ಕ್ಸ್‌ವಾದದ ಧ್ವನಿ ಹಿಂದೆ ಸೋವಿಯಟ್ ಯೂನಿಯನ್ ಇದ್ದಾಗಿನ ಕಾಲದಷ್ಟು ದೊಡ್ಡದಾಗಿಲ್ಲ ಎಂಬುದು ನಿಜ. ಫುಕೊಯಾಮಾ ನಂತಹವರು 'ಇತಿಹಾಸದ ಕೊನೆ' ಎಂಬ ಪುಸ್ತಕವನ್ನು ಬರೆದರು.

ಸೋವಿಯತ್ ವಿಘಟನೆಯ 15 ವರ್ಷಗಳ ನಂತರ ಇಂದು ಮನುಷ್ಯನ ಸಮಸ್ಯೆಗಳಿಗೆಲ್ಲ ಬಂಡವಾಳವಾದವೇ ಉತ್ತರ ಎಂದು ಹೇಳುವ ಧೈರ್ಯವನ್ನು ಯಾರೂ ಮಾಡಲಾರರು.

ಇಂದು ಜಾಗತೀಕರಣದ ಸವಾಲನ್ನು ಜಗತ್ತು ಎದುರಿಸುತ್ತಿದೆ. ಜಾಗತೀಕರಣದ ಸ್ವಭಾವವೇನು? ಹಿಂದೆಯೂ ಜಾಗತೀಕರಣವಿತ್ತು. ಇದು ಬಂಡವಾಳಶಾಹಿಯ ಆಂತರಿಕ ಗುಣ ಬಂಡವಾಳಶಾಹಿ ಲಾಭಬಡುಕತನದ್ದು. ವಿಸ್ತರಣೆ ಅವರ ಗುಣ, ಲಾಭಕ್ಕಾಗಿ ಏನು ಮಾಡಿದರೂ ಅದು ಬಂಡವಾಳಶಾಹಿಗೆ ಸರಿಯಾದದ್ದು. ಇಲ್ಲಿ ನೈತಿಕತೆಗೆ ಸ್ಥಾನವಿಲ್ಲ. ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಬ್ರಿಟನ್ನಿನ ಪುಟ್ಟ ದ್ವೀಪಗಳಲ್ಲಿ ಹುಟ್ಟಿದ ಬಂಡವಾಳಶಾಹಿ ಇಂದು ಎಲ್ಲೆಡೆ ಹಬ್ಬಿದೆ. ವಸಾಹತುಕರಣ ಈ ಬಂಡವಾಳಿಗರ ಲಾಭ ಪಿಪಾಸೆಯಿಂದಲೇ ಆದದ್ದು. ಭಾರತದಂತಹ ವಸಾಹತು ದೇಶಗಳ ಕೊಳ್ಳೆ ಹೊಡೆಯದೇ ಹೋಗಿದ್ದರೆ ಬ್ರಿಟನ್ನಿನ ಬಂಡವಾಳಶಾಹಿ ಇಷ್ಟು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ.

ಕೆನಡಾ, ಅಮೇರಿಕಾದಂತಹ ದೇಶಗಳು ವಸಾಹತುಕರಣ ಮಾಡಲಿಲ್ಲವಲ್ಲ ಎಂದೂ ವಾದಿಸುವವರಿದ್ದಾರೆ. ಆದರೆ ಈ ನೆಲೆಗಳ ಮೂಲವಾಸಿಗಳನ್ನು ಈ ನೆಲದಿಂದಲೇ ಒರೆಸಿ ಹಾಕಲಾಯಿತು ಎಂಬುದನ್ನು ನಾವು ಮರೆಯಲಾಗದು.

ಮಾರ್ಕ್ಸ್ **"ಬಂಡವಾಳ ಸ್ವಮೌಲ್ಯದ ವಿಸ್ತರಣೆಯೇ ಹೊರತು ಬೇರೇನಲ್ಲ"** ಎಂದರು.



ರಿಲೈಯನ್ಸ್ 25,000 ಜನರಿಗೆ ಉದ್ಯೋಗ ನೀಡಿದೆ ಎಂದು ನನ್ನೊಡನೆ ಯಾರೋ ವಾದ ಹೂಡಿದರು. ಆದರೆ ನಿಜವೇನೆಂದರೆ ಬಂಡವಾಳಶಾಹಿ ತಾನು ಸೃಷ್ಟಿಸುವ ಉದ್ಯೋಗಗಳಿಗಿಂತ ಅದು ನಾಶ ಮಾಡುವ ಉದ್ಯೋಗಗಳೇ ಹೆಚ್ಚು ಎಂಬುದನ್ನು ನಾವು ಗಮನಿಸಬೇಕು. ರಿಲೈಯನ್ಸ್ ಉದ್ಯೋಗಗಳನ್ನು ದಾನವಾಗಿ ನೀಡುತ್ತಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬಂಡವಾಳ ಮೆಷಿನ್ನುಗಳನ್ನು ಸ್ಥಾಪಿಸಿ ಜನರನ್ನು ಉದ್ಯೋಗಗಳಿಂದ ಹೊರತಳ್ಳುತ್ತದೆ.

ಮಾರ್ಕ್ಸನೇ ಹೇಳಿದ್ದು **"ಬಂಡವಾಳ ನಿಸರ್ಗ ಮತ್ತು ಶ್ರಮವನ್ನು ಹೀರಿಯೇ ಬೆಳೆಯುತ್ತದೆ".**

ಅದೇ ಬಂಡವಾಳ ಎಂತಹ ಸಾಮಾಜಿಕ ಶಕ್ತಿಗಳನ್ನು ಹುಟ್ಟಿಹಾಕುತ್ತದೆ ಎಂದರೆ ಆ ಶಕ್ತಿಗಳು ಬಂಡವಾಳಶಾಹಿಯನ್ನೂ ನಾಶಗೊಳಿಸುತ್ತದೆ.

ಲೆನಿನ್ ಮಾರ್ಕ್ಸ್‌ವಾದವನ್ನು ಇನ್ನೂ ಮುಂದಕ್ಕೆ ಕೊಂಡೊಯ್ದರು. 'ಸಾಮ್ರಾಜ್ಯಶಾಹಿ ಬೆಳವಣಿಗೆ ಕಾರ್ಮಿಕ ಕ್ರಾಂತಿಯ ಮುನ್ನಾ ದಿನದ ಸಾಯಂಕಾಲದಂತೆ' ಎಂದು ಲೆನಿನ್ ಹೇಳಿದರು. ಅದನ್ನು ಅವರು ಸೋವಿಯಟ್ ಯೂನಿಯನ್ನನ್ನು ಕಟ್ಟುವುದರ ಮೂಲಕ ಸಾಧಿಸಿಯೂ ತೋರಿಸಿದರು. ಹಾಗೆಯೇ ಈ ಒಕ್ಕೂಟ ಸಾಮ್ರಾಜ್ಯಶಾಹಿಯ ಪಿತೂರಿ/ ಯುದ್ಧಗಳನ್ನು ಎದುರಿಸಿಯೂ ದೇಶ ಕಟ್ಟುವ ಸಾಧನೆ ಮಾಡಿತು. ಇಂತಹ ಸೋವಿಯಟ್ ಯೂನಿಯನ್ ಯಾವುದೇ ವಸಾಹತನ್ನು ತನ್ನ ಬೆಳವಣಿಗೆಗೆ ಬಳಸಿಕೊಳ್ಳಲಿಲ್ಲ, ಸಮಾಜವಾದ ಅತ್ಯುತ್ತಮ ಅರ್ಥವ್ಯವಸ್ಥೆ ಎಂಬುದನ್ನು ಆ ಮೂಲಕ ತೋರಿಸಿಕೊಟ್ಟಿತು. ಆದ್ದರಿಂದಲೇ ಸಮಾಜವಾದ ಬಂಡವಾಳಕ್ಕೆ ನಿಜವಾದ ಪರ್ಯಾಯ ಎಂದು ಹೇಳುವುದು.

ಇಂತಹ ಸೋವಿಯಟ್ ಒಕ್ಕೂಟ ಹಲವು ತಪ್ಪುಗಳನ್ನು ಮಾಡಿತು ಎಂಬುದೂ ನಿಜ.

ತೈಲ, ಪಿಎಫ್, ಪೆನ್ಷನ್ ನಿಧಿಗಳ ಹಣಕಾಸು ಬಂಡವಾಳದ ಜಾಗತಿಕ ಹರಿವಿನಿಂದಾಗಿ ಮೂರನೇ ಜಗತ್ತಿನ ದೇಶಗಳು ಸಾಮ್ರಾಜ್ಯಶಾಹಿಯ ಹಿಡಿತಕ್ಕೆ ಬಂದಿವೆ. ಇಲ್ಲಿ ಹಣಕ್ಕಾಗಿ, ಹಣದಿಂದ ಹಣ ಮಾಡುವುದೇ ಇಲ್ಲಿ ನಿಜವಾದ ಗುರಿ. ಸಟ್ಟಾ ವ್ಯವಹಾರ ದಿನದ 24 ಗಂಟೆಗಳ ಕಾಲವೂ ಇಂದು ನಡೆಯುತ್ತಿರುತ್ತದೆ. ಪ್ರತಿದಿನ 2 ಟ್ರಿಲಿಯನ್ ಆದರೆ ಎರಡು ಲಕ್ಷ ಕೋಟಿ ಡಾಲರುಗಳ ಪಾಲು ಬರೀ ಶೇ.2 ರಷ್ಟು.

ಅಭಿವೃದ್ಧಿಶೀಲ ಮತ್ತು ಬಡ ದೇಶಗಳ ಪುನರ್ವಸಾಹತುಕರಣ ಮಾಡುವ ಹುನ್ನಾರ ನಡೆದಿದೆ.

ಲ್ಯಾಟಿನ್ ಅಮೇರಿಕಾದಲ್ಲಿನ ದೇಶಗಳು ಎಡಶಕ್ತಿಗಳನ್ನು ಆಡಳಿತಕ್ಕೆ ತರುತ್ತಿವೆ.

ಸಾಮ್ರಾಜ್ಯಶಾಹಿ ಯುದ್ಧಗಳಿಂದಲೇ ಉಳಿದುಕೊಂಡು ಬಂದಿವೆ. ಇರಾಕಿನ ಯುದ್ಧ ಅದಕ್ಕೊಂದು ಉದಾಹರಣೆ.

ಕೇಂದ್ರದ ಯುಪಿಎ ಸರ್ಕಾರದ ನೇತೃತ್ವ ವಹಿಸಿದವರಿಗೆ ಜನತೆ, ಜನವಿರೋಧಿ ಉದಾರೀಕರಣ ನೀತಿಗಳ ವಿರುದ್ಧ ಎಂತಹ ಅಸಮಾಧಾನ ಹೊಂದಿದ್ದಾರೆಂದು ಗೊತ್ತಿಲ್ಲ. ಕನಿಷ್ಠ ಸಾಮಾನ್ಯ ಕಾರ್ಯಕ್ರಮ ನಮ್ಮದಲ್ಲ. ನಮ್ಮದು ಅದಕ್ಕಿಂತ ಬಹಳ ಹೆಚ್ಚಿನದು. ಆದರೆ ಕಾಂಗ್ರೆಸ್ ಮತ್ತು ಇತರೆ ಯುಪಿಎ ಪಕ್ಷಗಳು ಈ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ಜಾರಿಗೆ ತರಬೇಕು.

ಇಂದಿನ ಈ ಎಲ್ಲ ಹೋರಾಟಗಳಲ್ಲಿ ನಾವು ಕಾಂ.ಎಕೆಜಿ ಮತ್ತು ಬಿಟಿಆರ್ ಅವರ ಜೀವನದಿಂದ ಸ್ಫೂರ್ತಿ ಪಡೆಯುತ್ತೇವೆ.

ಭಾರತದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ

ನಂತರ ಕರ್ನಾಟಕದ ರಾಜ್ಯ ಸಿಪಿಐ(ಎಂ)ನ ಕಾರ್ಯದರ್ಶಿ ಜಿ.ಎನ್. ನಾಗರಾಜ್ 'ಭಾರತದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ ಬಗ್ಗೆ ಮಾತನಾಡಿದರು. ಇಂದು ಭಾರತಕ್ಕೆ ಮಾರ್ಕ್ಸ್‌ವಾದ ಪ್ರಸ್ತುತವಲ್ಲ ಎಂಬ ವಾದವಿದೆ. ಯಾಕೆಂದರೆ ಇಲ್ಲಿ ಗಾಂಧೀವಾದ ಲೋಹಿಯವಾದ ಮತ್ತು ಅಂಬೇಡ್ಕರ್ ವಾದಗಳೇ ಪ್ರಸ್ತುತ ಎಂದೂ ವಾದಿಸುವವರಿದ್ದಾರೆ. ಭಾರತದಲ್ಲಿನ ಜಾತಿ ವ್ಯವಸ್ಥೆಯನ್ನು ಗ್ರಹಿಸಿ ಅದನ್ನು ನಿರ್ಮೂಲಗೊಳಿಸುವಲ್ಲಿ ಮಾರ್ಕ್ಸ್‌ವಾದ ವಿಫಲವಾಗಿದೆ ಎಂದು ಹೇಳಲಾಗುತ್ತಿದೆ.

ಮಾರ್ಕ್ಸ್‌ವಾದ ಭಾರತಕ್ಕೆ ಅಪಾರ ಕೊಡುಗೆ ನೀಡಿದೆ. ಮಾರ್ಕ್ಸ್‌ವಾದಿ ಚಳುವಳಿ ಭಾರತದಾದ್ಯಂತ ಬೆಳೆಯದೇ ಇದ್ದರೂ ಅದು ತನ್ನ ಗಾತ್ರಕ್ಕಿಂತ ಹತ್ತುಪಟ್ಟು ಹೆಚ್ಚು ಕೊಡುಗೆ ನೀಡಿದೆ. ಭಾರತದ ಕಲೆ, ಸಾಹಿತ್ಯ, ವೈಚಾರಿಕತೆಯನ್ನು ಅದು ಪ್ರಭಾವಿತಗೊಳಿಸಿದೆ. ಇತಿಹಾಸ ಸಮಾಜವಿಜ್ಞಾನ ಅರ್ಥಶಾಸ್ತ್ರಗಳು ಮಾರ್ಕ್ಸ್‌ವಾದದಿಂದ ಪ್ರಭಾವ ಹೊಂದಿವೆ.

ವಿಚಾರ ಸಂಕಿರಣಕ್ಕೆ ಸಿಪಿಐ(ಎಂ)ನ ಮೈಸೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ಎನ್.ಎಸ್.ಪ್ರಭಾಕರ್ ಸ್ವಾಗತಿಸಿದರು.

ಜಿಲ್ಲಾ ಸಮಿತಿಯ ಸದಸ್ಯ ಬಸವರಾಜು ಅವರು ವಂದಿಸಿದರು.

ಭಾರತಕ್ಕೆ ಮಾರ್ಕ್ಸ್‌ವಾದದ ಕೊಡುಗೆ ಏನು?

"ಸ್ವಾತಂತ್ರ ಹೋರಾಟದ ಸಮಯದಲ್ಲಿ ಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಮಾರ್ಕ್ಸ್‌ವಾದ ನೀಡಿತು. ಕಾಂಗ್ರೆಸ್‌ನಂತಹ ಪಕ್ಷಗಳು ಡೋಮಿನಿಯನ್ 'ಸ್ಟೇಟಸ್' ಕೇಳಿದರೆ ಕಮ್ಯೂನಿಸ್ಟರು ಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಮಂಡಿಸಿದರು. ಕಾಂಗ್ರೆಸ್ಸಿನ ಮೇಲೆ ಅಂತಹ ಒತ್ತಡ ತಂದು ಅದು ಈ ಬೇಡಿಕೆಯನ್ನು ತನ್ನದೆಂಬಂತೆ ಕೈಗೆತ್ತಿಕೊಂಡು ಹೋರಾಡುವಂತೆ ಮಾಡಿತು.

ಭಾರತಕ್ಕೆ ಸ್ವಾತಂತ್ರ್ಯ ಈ ದೇಶದ ಬಡವರಿಗೆ, ಶೋಷಿತರಿಗೆ ರೈತ ಕಾರ್ಮಿಕರಿಗಾಗಿ ಎಂದು ಅದು ಕೇಳಿತು. ಕಾಂಗ್ರೆಸ್ ಈ ಸ್ವಾತಂತ್ರ್ಯವನ್ನು ಬಂಡವಾಳಿಗ- ಭೂಮಾಲಕರಿಗಾಗಿ ಕೇಳಿತು. ಜಾತಿ ವ್ಯವಸ್ಥೆ ನಾಶವಾಗಲು ಪಾಳೇಗಾರಿ ವ್ಯವಸ್ಥೆ ನಾಶವಾಗಬೇಕು. ಮೈಸೂರು ಸಂಸ್ಥಾನ ಪಾಳೇಗಾರಿ ವ್ಯವಸ್ಥೆಯನ್ನು ಆ ದಿನಗಳಲ್ಲಿಯೇ ಮರ್ದಿಸಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಯಶಸ್ವಿಯಾಯಿತು.

ಇಂದು ಭೂಸುಧಾರಣೆ ನಿಜವಾದ ಅರ್ಥದಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳಗಳಲ್ಲಿ ಮಾತ್ರ ನಡೆದಿವೆ. ಉಳಿದ ಕಡೆ ಬರೀ ಬೂಟಾಟಿಕೆ ಮಾತ್ರ. ಭೂಸುಧಾರಣೆ ನಡೆದ ಕಡೆಗಳಲ್ಲಿ ಜನತೆಯ ಅಭಿವೃದ್ಧಿ ಸುಲಭ ಸಾಧ್ಯವಾಗಿದೆ. ಮೇಲುಕೀಳುಗಳ ಅಂತರ ಕಡಿಮೆ ಮಾಡುವುದು ಸಾಧ್ಯವಾಗಿದೆ.

ಕೋಮುವಾದವೂ ಸಹ ಈ ಪಾಳೇಗಾರೀ ವ್ಯವಸ್ಥೆಯ ಭಾಗವಾಗಿಯೇ ಬೆಳೆದುಬಂದಿದೆ.

ಯುಪಿಎ ಸರ್ಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಜಾಗತೀಕರಣ ನೀತಿಗಳನ್ನು ಬಿಡಲಾರದು. ಯಾಕೆಂದರೆ ಅದು ಬಂಡವಾಳಿಗ ಭೂಮಾಲಕರ ಪಕ್ಷ. ಅವರ ಹಿತಾಸಕ್ತಿಗಳನ್ನು ಕಾಯುತ್ತಿರುತ್ತದೆ. ಆದರೆ ನಾವು ಕಾರ್ಮಿಕರ ಮತ್ತು ಜನಸಾಮಾನ್ಯರ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುತ್ತೇವೆ.

ಯುಪಿಎ ಜನವಿರೋಧಿ ಕೆಲಸಗಳನ್ನು ಮಾಡುತ್ತಿರುವುದರಿಂದ ನೀವು ಅವರಿಗೆ ನೀಡಿರುವ ಬೆಂಬಲವನ್ನು ಏಕೆ ಹಿಂತೆಗೆದುಕೊಳ್ಳುವುದಿಲ್ಲ ಎಂದು ಹಲವರು ನಮ್ಮನ್ನು ಕೇಳುತ್ತಾರೆ.

ನಮ್ಮ ಪ್ರತಿ ಉತ್ತರ ಭಾರತದ ಜನತೆಯಾದ ನೀವು ಯುಪಿಎಗೆ ಬೆಂಬಲದ ಮತ ನೀಡಿ ಗೆಲ್ಲಿಸಿದ್ದೀರಿ. ಈ ಬೆಂಬಲವನ್ನು ನೀವು ಹಿಂತೆಗೆದುಕೊಳ್ಳಿ ಆಗ ನಾವೂ ನಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತೇವೆ.

ಹೀಗೆ ಮಾರ್ಕ್ಸ್‌ವಾದ ಭಾರತದ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾದ ಸಿದ್ಧಾಂತ ಎಂಬುದು ಸ್ಪಷ್ಟವಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH